एषा मनो मे प्रसभं शरीरात्पितुः पदं मध्यममुत्पतन्ती ।
सुराङ्गना कर्षति खण्डिताग्रात्सूत्रं मृणालादिव राजहंसी ॥ २१ ॥

(इति निष्क्रान्तौ)

इति प्रथमोऽङ्कः ।

ರಾಜಾ — (ಉರ್ವಶಿಯು ಹೋದ ಕಡೆಗೆ ನೋಡುತ್ತ) ಅಯ್ಯೋ ! ಮದನನು [ಮಾನವನ ಮನಸ್ಸು] ದುರ್ಲಭವಾದ ವಸ್ತುವನ್ನು ಅಪೇಕ್ಷಿಸುವಂತೆ ಮಾಡುವನು. ಏಕೆಂದರೆ–

ಹೆಣ್ಣು ರಾಜಹಂಸ ಪಕ್ಷಿಯು ಮುರಿದ ಕಮಲದ ದೇಟಿನ ತುದಿಯಿಂದ ಎಳೆಯನ್ನು ಎಳೆಯುವ ಹಾಗೆ, ಗಗನದಲ್ಲಿ ತೆರಳುವ ಈ ದಿವ್ಯಾಂಗನೆಯು [ಉರ್ವಶಿಯು] ನನ್ನ ದೇಹದಿಂದ ಮನಸ್ಸನ್ನು ಒಳ್ಳೇ ಬಲಾತ್ಕಾರದಿಂದ ಸೆಳೆಯುತ್ತಿರುವಳು ॥ ೨೧ ॥

(ಎಂದು ಹೋಗುವರು)

ಇಲ್ಲಿಗೆ ಮೊದಲನೆಯ ಅಂಕ ಮುಗಿಯಿತು.

द्वितीयोऽङ्कः ।

(तत प्रविशति विदूषक)

विदूषक — ही ही भो । निमन्त्रणिक परमान्नेनेव राजरहस्येन स्फुटता न शक्नोम्याकीर्णे आत्मनो जिव्हा रक्षितुम् । तद्यावत् तत्रभवान्वयस्यः कार्यासनादुत्तिष्ठति तावदेतस्मिन्विरमजनसपाते विमानोत्सङ्गपरिसरे स्थास्यामि । [ही ही भो णिमन्तणिओ परमण्णेण विअ राअरहस्सेण फुट्टमाणेण ण सक्कुणोमि आइण्णे अत्तणो जीह रक्खिदु । ता जाव तत्तभव बअस्सो कज्जासणादो उठेदि दाव इमस्सिं विरलजणसवादे विमाणुच्छङ्गपरिसरे चिठ्ठिस्स ।]

(परिक्रम्य स्थित.)

(प्रविश्य) **चेटी** — अज्ञाप्तास्मि देव्या काशीराजपुत्र्या यथा हञ्जे निपुणिके यत-प्रभृति भगवत सुर्यस्योपस्थान कृत्वा प्रतिनिवृत्त आर्यपुत्रस्तत प्रभृति शून्यहृदय इव लक्ष्यते । तत्तस्य प्रियवयस्यादार्यमाणवकाज्जानीहि तावदस्योत्कण्ठाकारणामिति । तत्कथ खलु मया ब्रह्मबन्धुरतिसधेय । अथवा विरलतृणलग्नमिवावश्यायसलिल चिर तस्मिन्राज-रहस्य न स्थास्यति । यावदेनमन्विष्यामि । (परिक्रम्यावलोक्य च) एष आलिखितो

ಅಂಕ ೨.

(ಬಳಿಕ ವಿದೂಷಕನು ಪ್ರವೇಶಿಸುವನು)

ವಿದೂಷಕ — ಹಿಹಿಹಿ ! ಮೃಷ್ಟಾನ್ನ ಭೋಜನಕ್ಕೆ ಕರೆಯಲ್ಪಟ್ಟ ಬ್ರಾಹ್ಮಣನು [ತನ್ನ ಮುಂದೆ ಬಡಿಸಿಟ್ಟ] ಪಂಚಪಕ್ವಾನ್ನಗಳನ್ನು ನೋಡಿ ತನ್ನ ನಾಲಿಗೆಯನ್ನು ಚಪಲ ಪಡದ ಹಾಗೆ ಹೇಗೆ ತಡೆದುಕೊಳ್ಳಲಾರನೊ, ಅದರಂತೆಯೆ ಜನಸಂಘದಲ್ಲಿ ಅರಸನ ಗುಟ್ಟನ್ನು [ರಾಜರಹಸ್ಯವನ್ನು] ಬಹಿರಂಗಪಡಿಸದ ಹಾಗೆ ನನ್ನ ನಾಲಿಗೆಯನ್ನು ತಡೆದು ಕೊಳ್ಳಲಾರೆ ಆದ್ದರಿಂದ ನಮ್ಮ ಪ್ರಿಯಮಿತ್ರನಾದ ಮಹಾರಾಜನು [ಪುರೂರವನು] ಧರ್ಮಾಸನದಿಂದೆದ್ದು ಬರುವವರೆಗೆ ನಿರ್ಜನವಾಗಿರುವ ಈ ' ವಿಮಾನೋತ್ಸಂಗ ' ವೆಂಬ ಅರಮನೆಯ ಪರಿಸರದಲ್ಲಿ ಹೋಗಿ ನಿಲ್ಲುವೆನು.

(ಹೋಗಿ ನಿಲ್ಲುವನು).

ಚೇಟಿ — (ಪ್ರವೇಶಿಸಿ) ಕಾಶೀರಾಜಪುತ್ರಿಯಾದ ನಮ್ಮ ಮಹಾರಾಣಿಯು ನನಗೆ, ' ಎಲೈ ನಿಪುಣಿಕೆ, ಮಹಾರಾಜನು ಸೂರ್ಯನ ಪೂಜೆಯನ್ನು ಮಾಡಿ ಬಂದಾಗಿನಿಂದ ಏಕೊ ವ್ಯಾಕುಲನಾದಂತೆ [ಅನ್ಯಮನಸ್ಕನಂತೆ] ಕಾಣುವನು ಆದ್ದರಿಂದ ಅದರ ಕಾರಣ ವನ್ನು ಅವನ ಪ್ರಿಯ ಮಿತ್ರನಾದ ಆರ್ಯ ಮಾಣವಕ [ವಿದೂಷಕ] ನಿಂದ ತಿಳಿದುಕೊಂಡು ಬಾ ' ಎಂದು ಆಜ್ಞಾಪಿಸಿರುವಳು. ಕಾರಣ, ಈಗ ಹೇಗೆ ತಾನೆ ಆ ಬಡಬ್ರಾಹ್ಮಣನನ್ನು

वानर इव किमपि तूष्णीम्भूत आर्यमाणवकस्तिष्ठति । यावदेनमुपसर्पामि । (उपसृत्य) आर्य वन्दे । [आणत्तह्मि देवीए कासिराअपुत्तीए जधा हज्जे णिउणिए जदोपहुदि भअवदो सुज्जस्स उवत्थाण करिअ पडिणिवुत्तो अज्जउत्तो तदो पहुदि सुण्णहिअओ विअ लक्खीअदि । ता तस्स पिअवअस्सादो अज्जमाणवआदो जाणाहि दाव से उक्कण्ठा-कालणति । ता कह खु मए बह्मबन्धु अदिसधेओ । अहवा विरलतणलग्ग विअ अवस्साअसलिल चिर तस्सि राअरहस्स ण चिट्ठिसदि । जाव ण अण्णेसामि । एसो आलिहिदो वाणरो विअ किंपि तुण्हिभूदो अज्जमाणवओ चिठ्ठदि । जाव ण उवसप्पामि । अज्ज वन्दामि ।

विदूषक — स्वस्ति भवत्यै । (आत्मागतम) इमा दुष्टचेटिका प्रक्ष्य तद्राजरहस्य हृदय भित्त्वा निष्क्रामति । (किंचिन्मुख सवृत्य प्रकाशम्) निपुणिके सगीतव्यापार-मुज्झित्वा कुत्र प्रस्थितासि । [सत्थि भोदीए । इम दुठ्ठचेडिअ पेक्खिअ त राअरहस्स हिअअ भिन्दिअ णिक्कमदि । णिउणिए सगोदवावार उज्झिअ कहि पत्थिदासि ।]

निपुणिका — देव्या वचनेन आर्यमेव प्रेक्षितुम् । [देवीए वअणेण अज्ज एव्व पेक्खिदु ।]

विदूषक.– किं तत्रभवत्याज्ञापयति । [किं तत्तहोदी आणवेदि ।]

ವಂಚಿಸಿ [ಅವನಿಂದ ಆ ವಿಷಯವನ್ನು ತಿಳಿದುಕೊಳ್ಳಲಿ ?] ಅಥವಾ, ಎಳೆ ಹುಲ್ಲಿನ ಮೇಲೆ ಬಿದ್ದ ಮಂಜಿನ ಹನಿಯಂತೆ ರಾಜರಹಸ್ಯವು ಅವನಲ್ಲಿ ಬಹುಕಾಲ ನಿಲ್ಲಲಾರದು. ಒಳ್ಳೇದು ! ಅವನನ್ನು ಈಗ ಹುಡುಕುವೆನು (ಸ್ವಲ್ಪ ಮುಂದೆ ಹೋಗಿ ನೋಡಿ) ಇದೊ ಈ ಮಾಣವಕನು [ವಿದೂಷಕನು] ಚಿತ್ರದಲ್ಲಿ ಬರೆದ ಮಂಗನಂತೆ ಈ ಪರಿಸರದಲ್ಲ ಏಕೊ ಸುಮ್ಮನೇ ನಿಂತಿರುವನು. ಆಗಲಿ, ಇವನ ಸಮೀಪಕ್ಕೆ ಹೋಗುವನು (ಹತ್ತಿರ ಹೋಗಿ) ಆರ್ಯನೆ, ನಮಸ್ಕರಿಸುವೆನು.

ವಿದೂಷಕ — ನಿನಗೆ ಮಂಗಲವಾಗಲಿ (ತನ್ನಲ್ಲಿಯೆ) ಇದೇನು ! ಈ ದುಷ್ಟ ದಾಸಿಯನ್ನು ನೋಡಿದಕೂಡಲೆ ರಾಜರಹಸ್ಯವು ನನ್ನ ಹೃದಯವನ್ನು ಭೇದಿಸಿ [ತಾನಾಗಿಯೆ] ಹೊರಗೆ ಬರುತ್ತಿದೆ (ಮುಖವನ್ನು ಸ್ವಲ್ಪ ಮುಚ್ಚಿಕೊಂಡು, ಪ್ರಕಾಶವಾಗಿ) ಎಲೆ ನಿಪುಣಿಕೆ, ಸಂಗೀತದ ಅಭ್ಯಾಸವನ್ನು ಬಿಟ್ಟು ಈಗ ಎಲ್ಲಿಗೆ ಹೊರಟಿರುವಿ ?

ನಿಪುಣಿಕಾ — ಮಹಾರಾಣಿಯ ಅಪ್ಪಣೆಯಮೇರೆಗೆ ನಿನ್ನನ್ನೇ ಕಾಣಲು ಬಂದಿರುವನು.

ವಿದೂಷಕ — ಮಹಾರಾಣಿಯು ಏನು ಅಜ್ಞಾಪಿಸಿರುವಳು.

निपुणिका– देवी भणति सदाप्यार्यो मयि पक्षपाती न मामनुचितवेदनादुःखिता-मुपेक्षत इति । [देवी भणादि सदावि अज्जो मइ पक्खवादी ण म अणुइदवेअणादुक्खिद उवेक्खदित्ति ।]

विदूषकः– किं वा वयस्येन तत्रभवत्या प्रतिकूलमाचरितम् । [किं वा वअस्सेण तत्तभोदीए पडिऊल आचरिद ।]

निपुणिका- यन्निमित्त पुनर्भर्ता उत्कण्ठितस्तस्या स्त्रिया नामधेयेन भर्त्रा देवी आलपिता । [ज णिमित्त उण भट्टा उक्कण्ठिदो ताए इत्थिआए णामधेएण भट्टिणा देवी आलविदा ।]

विदूषकः – (स्वगतम्) कथ स्वयमेव तत्रभवता रहस्यभेद कृत. । किमिदानीमह जिह्वयन्त्रणेन दुःखमनुभवामि । (प्रकाशम्) किमामान्त्रिता तत्रभवती उर्वशीति । तस्या दर्शनेनोन्मादितस्तत्रभवान्न केवल तत्रभवती ममपि विनोदविमुखो दृढ पीडयति । [कह सअ एव्व तत्तभवदा रहस्सभेदो किदो । किं दाणि अह जीहाजन्तणेण दुक्ख अणुहवामि । .. किं आमन्तिदा तत्तहोदि उव्वसित्ति । ताए दसणेण उम्मादिदो तत्तभव ण केवल तत्तभोदि मपि विणोदविमुहो दढ पीडेदि ।]

निपुणिका — (आत्मगतम्) कृत मया भेदन भर्तू रहस्यदुर्गस्य । (प्रकाशम्) आर्य किं तावद्देव्यै निवेदयामि । [किद मए भेअण भट्टिणो रहस्सदुग्गस्स । अज्ज किं दाव देवीए णिवेदेमि ।]

ನಿಪುಣಿಕಾ — ' ಯಾವಾಗಲೂ ನನ್ನ ಪಕ್ಷವನ್ನೇ ವಹಿಸುತ್ತಿರುವ ನೀನು, ಈಗ ನಾನು ಅಸಹ್ಯವಾದ ದುಃಖದಿಂದ ಬಳಲುತ್ತಿರುವದನ್ನು ಅಲಕ್ಷಿಸಲಾರೆ ' ಎಂದು ನಮ್ಮ ಮಹಾರಾಣಿಯು ನಿನಗೆ ಹೇಳಿರುವಳು

ವಿದೂಷಕ —ಮಹಾರಾಣಿಯ ವಿಷಯವಾಗಿ ನಮ್ಮ ಪ್ರಿಯ ಗೆಳೆಯನು (ರಾಜನು) ಮಾಡಿದ **ಅಪರಾಧವಾವುದು ?**

ನಿಪುಣಿಕಾ — ಮಹಾರಾಜನು ಯಾವ ಸ್ತ್ರೀಯಲ್ಲಿ ಅನುರಕ್ತನಾಗಿ ಇಷ್ಟೊಂದು ಉತ್ಕಂಠಿತನಾಗಿರುವನೋ ಅವಳ ಹೆಸರಿನಿಂದ ಮಹಾರಾಣಿಯನ್ನು ಸಂಬೋಧಿಸಿದನು

ವಿದೂಷಕ — (ತನ್ನಲ್ಲಿಯೆ) ಏನು ! ಮಹಾರಾಜನು ತಾನಾಗಿಯೇ ತನ್ನ ರಹಸ್ಯವನ್ನು ಬಹಿರಂಗಪಡಿಸಿದನೆ ? ಹಾಗಾದರೆ ನಾನೇಕೆ ಸುಮ್ಮನೆ ನನ್ನ ನಾಲಿಗೆಯನ್ನು ಬಿಗಿಹಿಡಿಯುವ ತೊಂದರೆಯನ್ನು ಅನುಭವಿಸಲಿ ? (ಪ್ರಕಾಶವಾಗಿ) ಮಹಾರಾಜನು ' ಉರ್ವಶೀ ' ಎಂದು ಮಹಾರಾಣಿಯನ್ನು ಸಂಬೋಧಿಸಿದನೊ ? ಅವಳನ್ನು ನೋಡಿದಾಗಿನಿಂದ ಮಹಾರಾಜನು ಮೋಹಗೊಂಡು ಹುಚ್ಚು ಹಿಡಿದವನಂತೆ ವಿನೋದವನ್ನು ಮರೆತು ಮಹಾರಾಣಿಯನ್ನಷ್ಟೇ ಅಲ್ಲ, ನನ್ನನ್ನೂ ಪೀಡಿಸುತ್ತಿರುವನು. [ಅಂದರೆ–ಅರಸನ ಮನಸ್ಥಿತಿಯನ್ನು ಕಂಡು ನನ್ನ ಮನಸ್ಸಿಗೂ ನೆಮ್ಮದಿಯಿಲ್ಲ]

ನಿಪುಣಿಕಾ — **(ತನ್ನೊಳಗೆ)** ಅಂತೂ ರಾಜನ ಗುಟ್ಟನ್ನು ತಿಳಿದುಕೊಂಡೆನು

[ಶಬ್ದಶಃ – ರಾಜನ ಗುಟ್ಟೆಂಬ ಭದ್ರವಾದ ಕೋಟೆಯನ್ನು ನಾನು ಭೇದಿಸಿದೆನು]

(ಪ್ರಕಾಶವಾಗಿ) ಪೂಜ್ಯನೆ, ಮಹಾರಾಣಿಗೆ ಏನೆಂದು ಹೇಳಲಿ ?

विदूषकः — निपुणिके विज्ञापय तत्रभवतीम् यते तावन्मृगण्णिकाया निवर्तयित्तु वयस्य ततो देव्या मुख प्रेक्षिष्य इति । [णिउणिए विण्णवेहि तत्तभोदि । जदामि दाव मिअतिण्हिआदो णिवत्तेदु वअस्स तदो देवीए मुह पेक्खिस्सन्ति ।]

निपुणिका — यदार्य आज्ञापयति । [ज अज्जो आणवेदि ।] (इति निष्कान्ता) (नेपथ्ये वैतालिक) जयतु देव ।

[आ लोकान्तात्प्रतिहततमोवृत्तिरासा प्रजाना
तुल्योद्योगस्तव दिनकृतश्चाधिकारो मतो न' ।
तिष्टत्येष क्षणमधिपतिर्ज्योतिषा व्योममध्ये
षष्ठेभागे त्वमपि दिवसस्यात्मनश्छन्दवर्ती ।। १ ।।]

विदूषक. — (कर्ण दत्वा) एष कार्यासनादुत्थित इत एवागच्छति वयस्य' । यावदस्य पार्श्ववर्ती भवामि । [एसो कज्जासणादो उट्ठिदो इदो एव्व आअच्छदि वअस्सो । जाव से पासवत्ती होमि ।] (इति निष्क्रात.)

प्रवेशक ।

ವಿದೂಷಕ — ಎಲೆ ನಿಪುಣಿಕೆ, 'ಈಗ ಮೊದಲು, ಈ ಬಿಸಿಲುಗುದುರೆಯ ಬೆನ್ನು ಹತ್ತಿದ ಮಹಾರಾಜನ ಮನಸ್ಸನ್ನು ಅಲ್ಲಿಂದ ತಿರುಗಿಸಲು ಪ್ರಯತ್ನ ಮಾಡುವೆನು. ಆ ಮೇಲೆ ಮಹಾರಾಣಿಯನ್ನು ಕಾಣುವೆನು' ಎಂದು ಮಹಾರಾಣಿಗೆ ತಿಳಿಸು.

ನಿಪುಣಿಕಾ — ಪೂಜ್ಯನ ಅಪ್ಪಣೆಯಂತೆ ಆಗಲಿ. (ಎಂದು ಹೊರಟು ಹೋಗುವಳು) (ತೆರೆಯಲ್ಲಿ ಸ್ತುತಿಪಾಠಕನು) ಮಹಾರಾಜನಿಗೆ ಜಯವಾಗಲಿ —

ಈ ಪ್ರಜೆಗಳ ಸಲುವಾಗಿ, ನೀನು ಮತ್ತು ದಿನಕರನು ಮಾಡುವ ಕಾರ್ಯವು ಒಂದೇತೆರನಾಗಿದೆಯೆಂದು ನಮಗೆ ಎನಿಸುವದು. ಹೇಗೆಂದರೆ, ಸೂರ್ಯನು ಪ್ರಪಂಚದ ಮೂಲೆ ಮೂಲೆಯಲ್ಲಿಯೂ ಸಹ ಪಸರಿದ ಕತ್ತಲೆಯನ್ನು [ತನ್ನ ಪ್ರಕಾಶದಿಂದ] ದೂರ ಮಾಡುವಂತೆ ನೀನು ನಿನ್ನ ರಾಜ್ಯದಲ್ಲಿಯ ಎಲ್ಲ ಪ್ರಜೆಗಳ ಮನಸ್ಸಿನಲ್ಲಿಯ ತಮೋವೃತ್ತಿಯನ್ನು [ದುಷ್ಟ ಪ್ರವೃತ್ತಿಯನ್ನು] ದೂರ ಮಾಡುವಿ, ಅದರಂತೆಯೇ ದಿನಮಣಿಯು ಆಕಾಶದ ಮಧ್ಯಭಾಗದಲ್ಲಿ ಕ್ಷಣಹೊತ್ತು [ವಿಶ್ರಮಿಸಲು] ನಿಲ್ಲುವಂತೆ ನೀನೂ ಕೂಡ ದಿವಸದ ಆರನಯ ಭಾಗದ ಅವಧಿಯಲ್ಲಿ ಸ್ವಚ್ಛಂದವಾಗಿ ವಿಶ್ರಾಂತಿಯನ್ನು ಪಡೆಯುವಿ ॥ ೧ ॥

ವಿದೂಷಕ — (ಕಿವಿಗೊಟ್ಟು ಕೇಳಿ) ಪ್ರಿಯ ಗೆಳೆಯನಾದ ಮಹಾರಾಜನು ಧರ್ಮಾಸನದಿಂದ ಎದ್ದು [ಅಂದರೆ—ತನ್ನ ದಿನದ ಕಾರ್ಯವನ್ನು ಮುಗಿಸಿಕೊಂಡು] ಇತ್ತ ಕಡೆಗೇ ಬರುತ್ತಿರುವನು ನಾನೂ ಅವನ ಬಳಿಗೆ ಹೋಗುವೆನು. (ಎಂದು ತೆರಳುವನು)

ಪ್ರವೇಶಕವು

(ततः प्रविशत्युत्कण्ठितो राजा विदूषकश्च)

राजा — **आ दर्शनात्प्रविष्टा सा मे सुरलोकसुन्दरी हृदयम् ।**
बाणेन मकरकेतोः कृतमार्गमवन्ध्यपातेन ॥ २ ॥

विदूषक — (आत्मगतम्) सपीडिता खलु तावत्तपस्विनी काशीराजपुत्री [सपीडिदा खु दाव तवस्सिणी कासिराअउत्ती ।

राजा – अपि रक्ष्यते रहस्यनिक्षेपः ।

विदूषक – (सविषादमात्मगतम्) हा धिक् हा धिक् अभिसंहितोऽस्मि दास्या । अन्यथा न वयस्य एव पृच्छेत् । [हध्धी हध्धी अहिसधिदोह्मि दासीए । अण्णधा ण वअस्सो एव पुच्छदि ।

राजा – (साशङ्कम्) किं भवांस्तूष्णीमास्ते ।

विदूषक – एवं मया नियन्त्रिता जिह्वा यद्भवतोऽपि सहसा न प्रतिवचनं ददामि । [एव्व मए णिअतिदा जीहा जं भवदोवि सहसा पडिवअणं ण देमि ।]

राजा – युक्तम् । अथ क्वेदानीमात्मानं विनोदयेयम् ।

विदूषकः– महानसं गच्छाव । [महाणसं गच्छह्म ।]

राजा – किं तत्र ।

(ಆ ಮೇಲೆ ಕಾಮಪೀಡಿತನಾದ ಅರಸನೂ ವಿದೂಷಕನೂ ಪ್ರವೇಶಿಸುವರು.)

ರಾಜಾ – ಆ ದೇವಲೋಕದ ಸುಂದರಿಯನ್ನು [ಉರ್ವಶಿಯನ್ನು] ನೋಡಿದಾಗಿನಿಂದ ಅವಳು ಮದನನ ಅಮೋಘವಾದ ಬಾಣಗಳಿಂದ ಭೇದಿಸಲ್ಪಟ್ಟ ನನ್ನ ಹೃದಯದಲ್ಲಿ ಪ್ರವೇಶಿಸಿರುವಳು [ನಾನು ಅವಳಲ್ಲಿ ಅಷ್ಟೊಂದು ಅನುರಕ್ತನಾಗಿರುವೆನು] ।। ೨ ।।

ವಿದೂಷಕ — (ಸ್ವಗತ) ಪಾಪ ! ಆ ಕಾಶೀರಾಜಪುತ್ರಿಯಾದ ನಮ್ಮ ಮಹಾರಾಣಿಗೆ ಇನ್ನು ಕಷ್ಟ ಬಂತು.

ರಾಜಾ — ಗೆಳೆಯನೆ, ನನ್ನ ರಹಸ್ಯವನ್ನು ಗುಟ್ಟಾಗಿಯೇ ಇಟ್ಟಿರುವಿಯಲ್ಲವೇ ?

ವಿದೂಷಕ — (ವಿಷಾದದಿಂದ, ತನ್ನಲ್ಲಿಯೆ) ಅಯ್ಯೋ ! ಆ ದುಷ್ಟ ಚೇಟಿಯು ನನ್ನನ್ನು ವಂಚಿಸಿದಳು ಇಲ್ಲದಿದ್ದರೆ, ಮಹಾರಾಜನು ನನ್ನನ್ನು ಹೀಗೆ ಕೇಳುತ್ತಿರಲಿಲ್ಲ.

ರಾಜಾ — (ಸಂಶಯದಿಂದ) ಏಕೆ ? ನೀನು ಸುಮ್ಮನಿದ್ದೀಯೆ ?

ವಿದೂಷಕ — ನಿನ್ನ ಮಾತಿಗೂ ಉತ್ತರವನ್ನು ಕೊಡದಷ್ಟು ಭದ್ರವಾಗಿ ನನ್ನ ನಾಲಿಗೆಯನ್ನು ನಿಗ್ರಹಿಸಿರುವೆನು.

ರಾಜಾ — ಅದು ಯೋಗ್ಯವೆ ! ಈ ನನ್ನ ನೊಂದ ಮನವನ್ನು ಎಲ್ಲಿ ಸಂತೈಸಿಕೊಳ್ಳಲಿ ?

ವಿದೂಷಕ — ಅದಕ್ಕಾಗಿ ನಾವು ಅಡಿಗೆ ಮನೆಗೆ ಹೋಗೋಣ.

ರಾಜಾ — ಅಲ್ಲೇನಿದೆ ?

विदूषकः– तत्र पञ्चविधस्याभ्यवहारस्योपनतसभारस्य योजना प्रेक्षमाणाभ्या शक्य-मुत्कण्ठा विनोदयितुम् । [तहि पञ्चविहस्य अब्भवहारस्स उवणदसभारस्स जोअण पेक्खमाणेहि सक्क उक्कण्ठा विणोदेदु ।]

राजा – (सस्मितम्) तत्रेप्सितरससनिधानाद्भवान्रस्यते । मया खलु दुर्लभप्रार्थन कथमात्मा विनोदयितव्य ।

विदूषक – ननु भवास्तत्रभवत्या उर्वश्या दर्शनपथ गत । [ण भव तत्तहोदीए उव्वसीए दसणपह गदो ।]

राजा – ततः किम् ।

विदूषक:– न खलु सा दुर्लभेति समर्थये । [ण खु सा दुल्लहत्ति समत्थेमि ।]

राजा – पक्षपातोऽयमवधार्यताम् ।

विदूषक – एतावन्मन्त्रयमाणेन भवता वर्धित मे कौतूहलम् । कि तत्रभवत्युर्वश्य-द्वितीया रूपेण अहमिव विरूपतया । [एत्तिअ मन्तअन्तेण भवदा वड्ढिद मे कोदूहल । कि तत्तभोदी उव्वसी अदुदिआ रूवेण अह विअ विरूवदाए ।]

राजा – माणवक प्रत्यवयवमशक्यवर्णना तामवेहि । समासत श्रूयताम् ।

ವಿದೂಷಕ — ಅಲ್ಲಿ ಸಿದ್ಧಪಡಿಸಿದ ಪಂಚಪಕ್ವಾನ್ನಗಳನ್ನು ನೋಡುತ್ತ ಮನಸ್ಸನ್ನು ತಣಿಸಲು ಶಕ್ಯವಿದೆ.

ರಾಜಾ — (ನಕ್ಕು) ನಿನಗೆ ಬೇಕಾದ ವಸ್ತುಗಳು ಅಲ್ಲಿ ಇರುವದರಿಂದ ನಿನಗಲ್ಲಿ ಆನಂದವಾಗಬಹುದು ಆದರೆ! ದುರ್ಲಭವಾದ ವಸ್ತುವನ್ನು ಅಪೇಕ್ಷಿಸುತ್ತಿರುವ [ದುರ್ಲಭಳಾದ ಉರ್ವಶಿಯನ್ನು ಅಪೇಕ್ಷಿಸುವ] ನನ್ನ ಮನಸ್ಸಿಗೆ ಅಲ್ಲಿ ಹೇಗೆ ತಾನೆ ಆನಂದ ವಾದೀತು ?

ವಿದೂಷಕ — ನೀನು ಆ ಉರ್ವಶಿಯ ದೃಷ್ಟಿಗೆ ಬಿದ್ದಿರುವಿಯಲ್ಲವೆ ?

ರಾಜಾ — ಅದರಿಂದೇನು ಪ್ರಯೋಜನ ?

ವಿದೂಷಕ — ಅವಳನ್ನು ಪಡೆಯುವದು ಕಠಿಣವೆಂದು ನನಗಂತೂ ಅನಿಸುವದಿಲ್ಲ.

ರಾಜಾ — ಇದು ಕೇವಲ ನಿನ್ನ ಪಕ್ಷಪಾತತನವು [ನೀನು ನನ್ನ ಪ್ರಿಯ ಗೆಳೆಯ ನಾದುದರಿಂದ ನನ್ನ ಮೇಲಿನ ನಿನ್ನ ಸ್ನೇಹದಿಂದ ಹೀಗೆ ಹೇಳುವಿ.]

ವಿದೂಷಕ — ನೀನು ಹೀಗೆ ಅನ್ನುವದರಿಂದ [ಅವಳ ವಿಷಯವಾಗಿ] ನನ್ನ ಕುತೂಹಲವು ಹೆಚ್ಚಿತು ಹಾಗಾದರೆ, ಕುರೂಪದಲ್ಲಿ ನಾನು ಅದ್ವಿತೀಯನಾಗಿದ್ದಂತೆ ಸೌಂದರ್ಯದಲ್ಲಿ ಆ ಉರ್ವಶಿಯು ಅಷ್ಟೊಂದು ಅದ್ವಿತೀಯಳಾಗಿರುವಳೊ ? [ಅಂದರೆ— ಯಾವ ರೀತಿಯಾಗಿ ಕುರೂಪದಲ್ಲಿ ನನ್ನನ್ನು ಸರಿಗಟ್ಟುವವರು ಯಾರೂ ಇಲ್ಲವೊ ಅದರಂತೆಯೇ ಸೌಂದರ್ಯದಲ್ಲಿ ಅವಳನ್ನು ಸರಿಗಟ್ಟುವವರು ಯಾರೂ ಇಲ್ಲವೊ ?]

ರಾಜಾ — ಎಲೈ ಮಾಣವಕನೆ, ಆವಳ ಅವಯವಗಳನ್ನು ಒಂದೊಂದಾಗಿ ವರ್ಣಿಸುವದು ಅಶಕ್ಯವೆಂದು ತಿಳಿ. ಆದ ರಿಂದ ಸಂಕ್ಷೇಪವಾಗಿ ಹೇಳುವೆನು ಕೇಳು.

विदूषक – अवहितोऽस्मि । [अवहिदोह्मि]

राजा – आभरणस्याभरण प्रसाधनविधेः प्रसाधनविशेष
उपमानस्यापि सखे प्रत्युपमान वपुस्तस्याः ।। ३ ।।

विदूषक :– अत खलु भवता दिव्यरसाभिलाषिणा चातकव्रत गृहीतम् । [अदो खु भवदा दिव्वरसाहिलासिणा चादअव्वद गहिद ।

राजा – विविक्तादृते नान्यदुत्सुकस्य शरणमस्ति । तद्भवान्प्रमदवनमार्गमादेशयतु ।

विदूषक —(आत्मगतम्) का गति । (प्रकाशम्) इत इतो भवान् । [का गदी । इदो इदो भव ।] (इति परिक्रामत)

विदूषक — एतेन प्रमदवनचोदितेनेव प्रत्यु ़गतो भवानागागन्तुको दक्षिणमारुतेन । [एदेण पमदवणचोदिदेण विअ पच्चुग्गदो भव आअन्तुओ दक्खिणमारुदेण ।]

राजा — उपपन्न विशेषणमस्य वायो' । अय हि

ವಿದೂಷಕ — ನಾನು ಲಕ್ಷ್ಯಗೊಟ್ಟು ಕೇಳುವೆನು ಹೇಳು.

ರಾಜಾ — ಗೆಳೆಯನೆ, ಆ ಯುವತಿಯ ಶರೀರವು ಆಭರಣಗಳಿಗೆಲ್ಲ ಆಭರಣ ವಾಗಿರುವದು, ಅಲಂಕಾರಗಳಿಗೂ ಅಲಂಕಾರ ಪ್ರಾಯವಾಗಿರುವದು, ಮತ್ತು ಶ್ರೇಷ್ಠವಾದ ಉಪಮಾನವಸ್ತುಗಳಿಗೂ ಕೂಡ ಅತಿಶ್ರೇಷ್ಠವಾದ ಉಪಮಾನವಾಗಿರುವದು. ॥ ೩ ॥

ವಿದೂಷಕ — ಓಹೊ ! ಅಂತೆಯೆ, ಗಗನದಲ್ಲಿಯ ನೀರನ್ನೇ ಅಪೇಕ್ಷಿಸುವ ಚಾತಕ ಪಕ್ಷಿಯಂತೆ ನೀನೂ ಆ ದೇವಾಂಗನೆಯನ್ನು ಪ್ರೀತಿಸುತ್ತಿರುವಿಯೋ ? [ಎಂದರೆ ಚಾತಕಪಕ್ಷಿಯು ಕೇವಲ ಆಕಾಶದಿಂದ ಬೀಳುವ ಮಳೆ ನೀರನ್ನೇ ಕುಡಿಯುವ ವ್ರತವನ್ನು ಸ್ವೀಕರಿಸಿದಂತೆ ನೀನೂ ಆ ದಿವ್ಯಸ್ತ್ರೀಯ ದಿವ್ಯ ಪ್ರೇಮವನ್ನೇ ಅಪೇಕ್ಷಿಸುವ ವ್ರತವನ್ನು ಕೈಕೊಂಡಿರುವೆಯೋ ?]

ರಾಜಾ — ಕಾಮಾತುರನಾದವನಿಗೆ ಏಕಾಂತಸ್ಥಾನದ ಹೊರತಾಗಿ ಬೇರೊಂದು ಯೋಗ್ಯಸ್ಥಳವಿಲ್ಲ ಆದ್ದರಿಂದ ಪ್ರಮದವನದ ಹಾದಿಯನ್ನು ತೋರಿಸು

ವಿದೂಷಕ — (ಸ್ವಗತ) ಮುಂದೇನು ಗತಿ ? (ಪ್ರಕಾಶವಾಗಿ) ಮಹಾರಾಜನು ಇತ್ತಕಡೆಗೆ ದಯಮಾಡಿಸಬೇಕು. ಇತ್ತಕಡೆಗೆ ದಯಮಾಡಿಸಬೇಕು.

(ಎಂದು ಇಬ್ಬರೂ ತಿರುಗಿ ನಿಲ್ಲುವರು.)

ವಿದೂಷಕ — ಅತಿಥಿಯಾದ ನಿನ್ನನ್ನು ಸ್ವಾಗತಿಸಲು ಪ್ರಮದನವದಿಂದ ಕಳು ಹಿಸಲ್ಪಟ್ಟಿರುವದೊ ಏನೊ ಎಂಬಂತೆ ಈ 'ದಕ್ಷಿಣ'ದ ಗಾಳಿಯು ನಿನ್ನನ್ನು ಸ್ವಾಗತಿಸುತ್ತಿರುವದು.

ರಾಜಾ — ಈ ಗಾಳಿಗೆ ನೀನು ಅಂದಂತೆ 'ದಕ್ಷಿಣ' ಎಂಬ ವಿಶೇಷಣವು ಬಹಳ ಉಚಿತವಾದದ್ದು. ಏಕೆಂದರೆ —

निषिञ्चन् माधवीमेता लता कौन्दी च लासयन् ।
स्नेहदाक्षिण्ययोर्योगात्कामीव प्रतिभाति मे ॥ ४ ॥

विदूषक — सदृश एव अस्याभिनिवेश । (इति परिक्रामन्) एतत्प्रमदवनद्वारम् । प्रविशतु भवान् । [सरिसो एव्व दो अहिणिवेसो । एद पमदवणदुवार । पविसदु भव ।

राजा — प्रविशाग्रत । (उभौ प्रविशत)

राजा — (त्रास रूपयित्वा) वयस्य मया न साधु समर्थितमापत्प्रतीकार किल प्रमदवनोद्यानप्रवेशइति ।

विविक्षुर्यदह तूर्णमुद्यान तापशान्तये ।
स्रोतोजवोह्यमानस्य प्रतीपतरण हि तत् ॥ ५ ॥

विदूषक —कथमिव। [कह विअ ।]

राजा – इदमसुलभवस्तुप्रार्थनादुर्निवारं
प्रथममपि मनो मे पञ्चबाण क्षिणोति ।
किमुत मलयवातोन्मूलितापाण्डुपत्रै-
रुपवनसहकारैर्दर्शितेष्वङ्कुरेषु ॥ ६ ॥

[ಹೂಬಿಟ್ಟ] ಈ ಮಾಧವೀಲತೆಯ ಹೂಗಳಲ್ಲಿ ಮಕರಂದನ್ನುಂಟುಮಾಡುವ, ಮತ್ತು ಈ ಕುಂದಲತೆಯನ್ನು ಮನೋಹರವಾಗಿ ಕುಣಿಸುವ ಈ ದಕ್ಷಿಣದ ಗಾಳಿಯು ಸ್ನೇಹ[ಪ್ರೀತಿ] ಮತ್ತು ದಾಕ್ಷಿಣ್ಯಗಳಿಂದ ಕೂಡಿದ ಒಬ್ಬ ಕಾಮಿಯಂತೆ ಕಾಣುವದು ॥ ೪॥

ವಿದೂಷಕ — ಇವನ ಅನುರಾಗವು ಯುಕ್ತವಾದದ್ದು (ಎಂದು ಪರಿಕ್ರಮಿಸಿ, ಇಕೊ, ಇದು ಪ್ರಮದವನವು. ಮಹಾರಾಜನು ಪ್ರವೇಶಿಸಬೇಕು.

ರಾಜಾ – ಮೊದಲು ನೀನು ಪ್ರವೇಶಿಸು.

(ಇಬ್ಬರೂ ಪ್ರವೇಶಿಸುವರು)

ರಾಜಾ— (ಮನಸ್ಸಿನ ಉದ್ವೇಗವನ್ನು ಸೂಚಿಸಿ) ಗೆಳೆಯನೆ, ಈ ಪ್ರಮದವನದಲ್ಲಿ ಪ್ರವೇಶಿಸಿದರೆ ನನ್ನ ಮನಸ್ತಾಪವು ದೂರಾಗಬಹುದೆಂದು ನಾನು ತಿಳಿದದ್ದು ಸರಿಯಲ್ಲ. ಏಕೆಂದರೆ—

ನನ್ನ ಮನಸ್ಸಿನಲ್ಲಿಯ ವಿರಹ ತಾಪವನ್ನು ನಿವಾರಿಸಿಕೊಳ್ಳಲು ನಾನು ಈ ಪ್ರಮದವನ ವನ್ನು ಪ್ರವೇಶಿಸ ಬಯಸಿದ್ದು, ನದಿಯ ಸೆಳವಿಗೆ ಸಿಕ್ಕವನು ಪ್ರವಾಹಕ್ಕೆದುರಾಗಿ ಈಸಿದಂತೆ [ನಿರರ್ಥಕವಾದದ್ದು] ॥ ೫ ॥

ವಿದೂಷಕ – ಅದು ಹೇಗೆ ?

ರಾಜಾ – ದುರ್ಲಭವಾದ ವಸ್ತುವನ್ನು ಪಡೆಯಲಿಚ್ಛಿಸುವ [ದುರ್ಲಭಳಾದ ಉರ್ವಶೀಯಲ್ಲಿ ಅನುರಕ್ತವಾದ] ನನ್ನ ಮನಸ್ಸು ಕಾಮಬಾಧೆಯಿಂದ ಮೊದಲೇ ಬಹಳ ಬಳಲಿದೆ, ಎಂದ ಮೇಲೆ, ಮಲಯಮಾರುತನಿಂದ ಹಣ್ಣೆಲೆಗಳೆಲ್ಲ ಉದುರಿ ಮತ್ತೆ ಚಿಗುರೊಡೆದ, ಪ್ರಮದವನದಲ್ಲಿಯ, ಈ ಮಾವಿನ ಮರಗಳ ದರ್ಶನದಿಂದ ಅದು [ನನ್ನ ಮನಸ್ಸು] ಎಷ್ಟು ಕೊರಗಬಹುದು ? ॥ ೬ ॥

विदूषक – अल परिदेवितेन। अचिरेण तवेष्टसपादयितानङ्ग एव सुखदो भविष्यति। [अल परिविदेण। अइरेण दे इच्छिअसपादइत्तओ अणङ्गो एव सुहदो भविस्सदि।]

राजा – प्रतिगृहीत ब्राह्मणवचनम्। (परिक्रामत)

विदूषक – पश्यतु भवान्वसन्तावतारसूचकमभिरामत्व प्रमदवनस्य। [पेक्खदु भव वसन्तोदारसूअअ अहिरामत्तण पमदवणस्स]

राजा – ननु प्रतिपादपमेवावलोकयामि। अत्र हि

अग्रे स्त्रीनखपाटल कुरबक श्याम द्वयोर्भागयो-
र्बालाशोकमुपोढरागसुभगं भेदोन्मुख तिष्ठति।
ईषद्बद्धरज.कणाग्रकपिशा चूते नवा मञ्जरी
मुग्धत्वस्य च यौवनस्य च सखे मध्ये मधुश्री स्थिता ॥ ७ ॥

विदूषक – एष मणिशिलापट्टकसनाथोऽतिमुक्तलतामण्डपो भ्रमरसघट्टपतितै कुसुमैः स्वयमिव कृतोपचारो भवन्त प्रतीच्छति। तदनुगृह्यता तावदेष। [एसो मणिसिलापट्ट-

---

ವಿದೂಷಕ – ಗೆಳೆಯನೆ, ಹೀಗೆ ವ್ಯಸನಪಡಬೇಡ ಶೀಘ್ರದಲ್ಲಿಯೇ ಸ್ವತಃ ಮನ್ಮಥನು ನಿನ್ನ ಇಷ್ಟಾರ್ಥವನ್ನು ಪೂರೈಸಿ ನಿನಗೆ ಸುಖವನ್ನು ಕೊಡುವನು

ರಾಜಾ – ಮಹಾಬ್ರಾಹ್ಮಣನಾದ ನಿನ್ನ ವಚನವನ್ನು ಸ್ವೀಕರಿಸಿದೆನು (ಇಬ್ಬರೂ ಮುನ್ನಡೆಯುವರು)

ವಿದೂಷಕ – ವಸಂತಾಗಮನವನ್ನು ಸೂಚಿಸುವ ಈ ಪ್ರಮದವನದ ಸೊಬಗನು ನೋಡು.

ರಾಜಾ – ಪ್ರತಿಯೊಂದು ಗಿಡದ ಮೇಲೆಯೂ ಆ ಸೌಂದರ್ಯವನ್ನು ನೋಡುತ್ತ ಲಿದ್ದೇನೆ ಯಾಕಂದರೆ ಇಲ್ಲಿ--

ಮುಂಭಾಗದಲ್ಲಿ ತರುಣಿಯ ಉಗುರುಗಳಂತೆ ಕೆಂಪಾದ ಪಾಟಲಪುಷ್ಪವು ಇದೆ ಕುರುಬಕ ಪುಷ್ಪವು ಎರಡೂ ಬದಿಗೆ ಕಪ್ಪಾಗಿರುವದು [ಅಥವಾ— ಕುರುಬಕ ಪುಷ್ಪವು ತುದಿಯಲ್ಲಿ ಕೆಂಪಾಗಿದ್ದು ಎರಡೂ ಬದಿಗೆ ಕಪ್ಪಾಗಿರುತ್ತದೆ]. ಕೆಂಪು ಬಣ್ಣದಿಂದ ಶೋಭಿಸುವ ಈ ಅಶೋಕ ಪುಷ್ಪದ ಮೊಗ್ಗೆಯು ಅರಳುವದರಲ್ಲಿದೆ, ಮಾವಿನಮರದ ಮೇಲಿನ ಈ ಹೂವಿನ ಗೊಂಚಲು ಈಗತಾನೆ ಮೂಡಿದ ಕೇಸರದಿಂದ ತುದಿಯಲ್ಲಿ ಹೊಂಬಣ್ಣವುಳ್ಳದ್ದಾಗಿದೆ. ಇಂತು ಈ ವಸಂತ ಶ್ರೀಯು [ವಸಂತ ಋತುವಿನ ಶೋಭೆಯು] ಬಾಲ್ಯ-ತಾರುಣ್ಯಗಳ ಮಧ್ಯದಲ್ಲಿ ನಿಂತಂತೆ ತೋರುತ್ತದೆ ॥ ೭ ॥

ವಿದೂಷಕ — ಸ್ಫಟಿಕಾಸನದಿಂದ ಕೂಡಿದ ಈ ಮಲ್ಲಿಗೆಯ [ಅತಿಮುಕ್ತಲತೆಯ] ಮಂಟಪದಲ್ಲಿ ಭ್ರಮರಗಳ ಸ್ಪರ್ಶದಿಂದ ಎಲ್ಲೆಡೆಯಲ್ಲಿಯೂ ಹೂವುಗಳು ಉದುರಿ ಬಿದ್ದುದ-

असणाओ अदिमुत्तलदामण्डवो भमरसवट्टपडिदेहि कुसुमेहि सअं विअ किदोवआरो भवन्तं पडिच्छदि । ता अणुगेण्हीअदु दाव एसो ।

राजा – यदभिरोचते भवते । (परिक्रम्य उपविष्टौ)

विदूषक – इह सुखासीनो भवान्ललितलताविलोभ्यमाननयन उर्वशीगतामुत्कण्ठां विनोदयतु । [इह सुहासीणो भव ललिदलदाविलोहीअमाणणअणो उव्वसीग द उक्कण्ठं विणोदेदु ।]

राजा — (निःश्वस्य)

मम कुसुमितास्वपि सखे नोपवनलतासु नम्रविटपासु ।
चक्षुर्बध्नाति धृतिं तद्रूपालोकदुर्ललितम् ॥ ८ ॥

तदुपायश्चिन्त्यतां यथा सफलप्रार्थनो भवेयम् ।

विदूषक – (विहस्य) भो अहल्याकामुकस्येन्द्रस्य वज्रः सचिवः उर्वशीपर्युत्सुकस्य भवतोऽप्यहम् । द्वावप्यत्रोन्मत्तौ । [भो अहल्लाकामुअस्स इन्दस्स वज्जो सचिवो उव्वसीपज्जुस्सुअस्स भवदो वि अहं । दुवे वि एत्थ उम्मत्तआ ।

राजा — अतिस्नेहः खलु कार्यदर्शी ।

ರಿಂದ, ಈ ಮಂಟಪವು ನಿನಗೆ ಸ್ವಾಗತವೀಯಲು ಕಾಯ್ದಿರುವಂತೆ ತೋರುವದು ಆದ್ದ ರಿಂದ ಇಲ್ಲಿ ಕುಳಿತು ಇದನ್ನನುಗ್ರಹಿಸು

ರಾಜಾ — ನಿನ್ನ ಇಷ್ಟವಿದ್ದಂತಾಗಲಿ (ಹೋಗಿ ಕುಳಿತುಕೊಳ್ಳುವರು)

ವಿದೂಷಕ — ಇಲ್ಲಿ ಸುಖವಾಗಿ ಕುಳಿತುಕೊಂಡು ಹೂವುಗಳಿಂದ ಕಂಗೊಳಿಸುವ ಬಳ್ಳಿಗಳನ್ನು ನೋಡುತ್ತ ಉರ್ವಶಿಯ ಸಲುವಾಗಿ ಉಂಟಾದ ನಿನ್ನ ಉತ್ಕಂಠತೆಯನ್ನು ನಿವಾರಿಸಿಕೊ

ರಾಜಾ — (ನಿಟ್ಟುಸುರುಬಿಟ್ಟು)

ಗೆಳೆಯನೆ, ಆ ಸುಂದರಿಯ ಸೌಂದರ್ಯವನ್ನು ನೋಡಿ ಮೋಹಗೊಂಡ ನನ್ನ ಕಣ್ಣುಗಳಿಗೆ ಈ ಹೂದೋಟದಲ್ಲಿಯ, ಹೂವುಗಳ ಭಾರದಿಂದ ಬಾಗಿದ, ಈ ಕೋಮಲ ವಾದ್ದ ಬಳ್ಳಿಗಳು ಆನಂದವನ್ನುಂಟುಮಾಡಲಾರವು. ॥ ೮ ॥

ಆದ್ದರಿಂದ ನನ್ನ ಬಯಕೆಯು ಸಂಪೂರ್ಣವಾಗುವ ಹಾಗೆ ಒಂದು ಉಪಾಯವನ್ನು ಯೋಚಿಸು

ವಿದೂಷಕ — (ನಕ್ಕು)ಗೆಳೆಯನೆ, ಅಹಲ್ಯೆಯನ್ನು ಕಾಮಿಸಿದ ಇಂದ್ರನಿಗೆ ವಜ್ರವು ಸಹಾಯಕವಾಗುವದು ಮತ್ತು ಉರ್ವಶಿಯನ್ನು ಕಾಮಿಸಿ ಉತ್ಸುಕನಾದ ನಿನಗೆ ನಾನು ಸಹಾಯಕನಾಗುವದು ಒಂದೆ. ನಾವೀರ್ವರೂ (ನಾನೂ ಮತ್ತು ನೀನು) ಈ ವಿಷಯ ದಲ್ಲಿ ಹುಚ್ಚರಾಗಿದ್ದೇವೆ

ರಾಜಾ — ಉತ್ಕಟವಾದ ಸ್ನೇಹವು ಎಂಥ ಕಠಿಣವಾದ ಕೆಲಸಕ್ಕಾದರೂ ಮಾರ್ಗ ದರ್ಶನ ಮಾಡುತ್ತದೆ. [ಅಂದರೆ – ಉತ್ಕಟ ಸ್ನೇಹವಿದ್ದಲ್ಲಿ ಯಾವ ಕಾರ್ಯವಾದರೂ ಸಾಧ್ಯವಾಗುವದು]

विदूषकः— एष चिन्तयामि । मा पुनः परिदेवितेन मम समाधिं भिन्द्धि । (चिन्तां रूपयति) [एसो चिन्तेमि । मा उण परिदेविदेण मम समाधिं भिन्धि ।

राजा — (निमित्तं सूचयित्वा आत्मगतम्)

न सुलभा सकलेन्दुमुखी च सा
किमपि चेदमनङ्गविचेष्टितम् ।
अभिमुखीष्विव काङ्क्षितसिद्धिषु
व्रजति निर्वृतिमेकपदे मनः ॥ ९ ॥ (जाताशस्तिष्ठति)

(ततः प्रविशत्याकाशयानेनोर्वशी चित्रलेखा च)

चित्रलेखा — सखि उर्वशि कुत्र खल्वनिर्दिष्टकारणं गम्यते । [सहि उव्वसि कहिं खु अणिद्दिट्ठकालणं गच्छीअदि ।]

उर्वशी – सखि तदा हेमकूटशिखरे लताविटपेन क्षणविघ्नितनाकाशगमना मामुपहस्य किमिदानीं पृच्छसि । [सहि तदा हेमऊडसिहरे लदाविडवेण खणविग्घिदाआसगमणं मं ओहसिअ किं दाणिं पुच्छसि ।

चित्रलेखा — किं तस्य राजर्षेः पुरूरवसः सकाशं प्रस्थितासि । [किं तस्स राएसिणो पुरूरवस्स सआसं पत्थिदासि ।]

ವಿದೂಷಕ— ಹಾಗಿದ್ದಲ್ಲಿ, ಈಗಲೆ ಒಂದು ಉಪಾಯವನ್ನು ಯೋಚಿಸುತ್ತೇನೆ. ಆದರೆ, ನೀನು ಹೀಗೆ ವಿಲಾಪಮಾಡುತ್ತ ನನ್ನ ಸಮಾಧಿಗೆ ವಿಘ್ನವನ್ನುಂಟುಮಾಡಬೇಡ.

(ಸಮಾಧಿಹಚ್ಚಿದವನಂತೆ ನಟಿಸುವನು)

ರಾಜಾ — (ನಿಮಿತ್ತವನ್ನು ಸೂಚಿಸಿ, ತನ್ನೊಳಗೆ)

ಆ ಚಂದ್ರಮುಖಿಯನ್ನು [ಉರ್ವಶಿಯನ್ನು] ಪಡೆಯುವದು ಬಹಳೇ ಕಠಿಣವಾದದ್ದು, ಪ್ರೇಮವಂತೂ ಹೀಗೆ ನನ್ನಲ್ಲಿ ಹೇಗೋ ಉಂಟಾಗಿದೆ, ಆದರೂ ನನ್ನ ಮನಸ್ಸಿಗೆ ಮಾತ್ರ, ಬಯಸಿದ ಕಾರ್ಯಗಳ ಸಿದ್ಧಿಯು ಸಮೀಪಿಸಿತೋ ಏನೂ ಎನ್ನುವಂತೆ, ಒಮ್ಮೆಲೆ ಸಮಾಧಾನವಾಗಿದೆ ॥ ೯ ॥ (ಆಶೆಯಿಂದ ನಿಲ್ಲುವನು)

(ಬಳಿಕ ಆಕಾಶಮಾರ್ಗದಿಂದ ಉರ್ವಶೀ ಚಿತ್ರಲೇಖೆಯರು ಪ್ರವೇಶಿಸುವರು)

ಚಿತ್ರಲೇಖಾ — ಸಖಿ, ಉರ್ವಶೀ, ಹೋಗುವ ಕಾರಣವನ್ನು ನನಗೆ ಹೇಳದೆ ನೀನು ಈಗ ಎಲ್ಲಿಗೆ ಹೊರಟಿರುವಿ ?

ಉರ್ವಶೀ— ಗೆಳತಿ, ಆಗ ಹೇಮಕೂಟ ಪರ್ವತದ ಶಿಖರದಲ್ಲಿ ಒಂದು ಬಳ್ಳಿಯ ಕವಲಿಗೆ [ನನ್ನ ಮುತ್ತಿನ ಮಾಲೆಯು ಸಿಕ್ಕಿಕೊಂಡದ್ದರಿಂದ] ನನ್ನ ಆಕಾಶ ಗಮನಕ್ಕೆ ಒಂದು ನಿಮಿಷ ತಡೆಯುಂಟಾಗಲು ನೀನು ನನಗೆ ಹಾಸ್ಯಮಾಡಿ ಈಗೇಕೆ ನಾನೀಗ ಎಲ್ಲಿಗೆ ಹೋಗುವೆನೆಂಬುದನ್ನು ಕೇಳುವಿ ?

ಚಿತ್ರಲೇಖಾ — ಹಾಗಾದರೇನು, ಈಗ ರಾಜರ್ಷಿಯಾದ ಆ ಪುರೂರವನ ಬಳಿಗೆ ಹೋಗಲು ಹೊರಟಿರುವಿಯಾ !

उर्वशी —अय मेऽपहस्तितलज्जो व्यवसाय । [अअ मे अवहत्थिदलज्जो ववसाओ ।]

चित्रलेखा — क पुन सख्या पुरत प्रेषित । [को उण सहीए पुढम पेसिदो ।]

उर्वशी — हृदयम् । [हिअअ ।]

चित्रलेखा — स्वयमेव साधु सप्रधार्यताम् तावत् । [सअ एव्व साहु सपधारीअदु दाव ।]

उर्वशी — मदन खलु मा नियोजयति । किमत्र सप्रधार्यते । [मअणो खु म णिओएदि । कि एत्थ सपधारीअदि ।]

चित्रलेखा — अत पर नास्ति ममोत्तरम् । [अदो वर णत्थि मे उत्तर ।]

उर्वशी — तेनादिशतु मे प्रियसखी मार्ग येन तत्र गच्छन्त्या नान्तरायो भवेत् । [तेण आदिसदु मे पिअसही मग्ग जेण तदि गच्छन्तीए ण अन्तराओ भवे ।]

चित्रलेखा — सखि विश्रब्दा भव । ननु भगवता देवगुरुणा अपराजिता नाम शिखाबन्धनविद्यामुपदिशता त्रिदशप्रतिपक्षस्यालङ्घनीये कृते स्व । [सहि वीसध्धा होहि । ण भअवदा देवगुरुणा अवराइद णाम सिहावन्धणविज्ज उवदिसन्तेण तिदसपडिवक्खस्स अलङ्घणिज्जा कदह्म ।]

उर्वशी- (सलज्जम्) तस्या प्रयोग सर्वे स्मरसि । [ताए पओअ सव्व सुमरेसि ।]

ಊರ್ವಶೀ — ಹೌದು ಹೀಗೆ ನಿರ್ಲಜ್ಜಳಂತೆ ನಾನು ಈಗ ಆ ಮಹಾರಾಜನ ಬಳಿಗೆ ಹೋಗಲು ಮನಸು ಮಾಡಿರುವೆನು

ಚಿತ್ರಲೇಖಾ — ಮುಂದೆ ಯಾರನ್ನು ಕಳುಹಿಸಿರುವಿ ?

ಊರ್ವಶೀ — ನನ್ನ ಹೃದಯುವನ್ನು

ಚಿತ್ರಲೇಖಾ — ಇದರ ಬಗ್ಗೆ ನೀನೇ ಮತ್ತೊಮ್ಮೆ ಚನ್ನಾಗಿ ವಿಚಾರಮಾಡು [ಆಮೇಲೆ ಯೋಗ್ಯ ಕಂಡರೆ ಹೀಗೆ ಮಾಡುವಿಯಂತೆ]

ಊರ್ವಶೀ —ಸಖಿಯೆ, ಮನ್ಮಥನ ಪ್ರೇರಣೆಯಿಂದ ನಾನಿದನ್ನು ಮಾಡುತ್ತಿರುವೆನು. ಅಂದಮೇಲೆ ಅದರಲ್ಲಿ ವಿಚಾರ ಮಾಡುವದೇನಿದೆ ?

ಚಿತ್ರಲೇಖಾ — ಇದಕ್ಕೆ ನನ್ನ ಉತ್ತರವೇ ಇಲ್ಲ [ನಾನಿನ್ನು ಏನೂ ಹೇಳಬಯಸುವದಿಲ್ಲ]

ಊರ್ವಶೀ — ಹಾಗಾದರೆ, ಪ್ರಿಯ ಗೆಳತಿಯೆ, ಹೋಗುವಾಗ ನಡುವೆ ನಮ್ಮ ಮಾರ್ಗದಲ್ಲಿ ಯಾವ ಎಡೆತಡೆಗಳೂ ಬಾರದಂತೆ ನನಗೆ ಮಾರ್ಗವನ್ನು ತೋರಿಸು

ಚಿತ್ರಲೇಖಾ — ಸಖೀ, ನೀನು ಅದರ ಚಿಂತೆಯನ್ನು ಬಿಡು. ಏಕೆಂದರೆ ದೇವ ಗುರುಗಳಾದ ಬೃಹಸ್ಪತ್ಯಾಚಾರ್ಯರು ನಮಗೆ ಕಲಿಸಿದ ಅಪರಾಜಿತವೆಂಬ ಕೇಶಬಂಧನ ವಿದ್ಯೆಯ ಪ್ರಭಾವದಿಂದ [ನಾವು ಎಲ್ಲಿ ಹೋದರೂ] ದೇವತೆಗಳ ವೈರಿಗಳಾದ ಆ ದುಷ್ಟ ದೈತ್ಯರು ನಮಗೆ ಯಾವ ತೊಂದರೆಯನ್ನೂ ಕೊಡಲಾರರು.

ಊರ್ವಶೀ — (ಲಜ್ಜೆಯಿಂದ) ಅದನ್ನು ಉಪಯೋಗಿಸುವ ರೀತಿಗಳೆಲ್ಲ ನಿನ್ನ ನೆನಪಿನಲ್ಲಿವೆಯಲ್ಲವೆ ?

चित्रलेखा— हृदयमेतत्सर्वं जानाति। [हिअअ एद सव्व जाणादि।]
(उभे भ्रमण रूपयत)

चित्रलेखा — सखि पश्य पश्य। एतद्भगवत्या भागीरथ्या यमुनासंगमविशेष-पावनेषु सलिलेष्ववलोकयत इवात्मानं प्रतिष्ठानस्य शिखाभरणभूतं राजर्षेर्भवनमुपस्थिते स्व। [सहि पेक्ख पेक्ख। एद भअवदीए भाईरहीए जऊँणासंगमविसेसपावणेसु सलिलेसु ओलोअन्तस्स विअ अत्ताणअ पइट्ठाणस्स सिहाभरणभूद राएसिणो भवण उवट्ठिदह्म।]

उर्वशी— (विलोक्य) ननु वक्तव्य स्थानांतरगत स्वर्ग इति। (विचार्य) हला कुत्र नु खलु स आपन्नानुकम्पी भवेत्। [ण वत्तव्व ठाणन्तरगदो सग्गोत्ति। हला कहि णु खु सो आवण्णाणुकम्पी भवे।]

चित्रलेखा — एतस्मिन्नन्दनवनैकदेश इव प्रमदवनेऽवतीर्य ज्ञास्याव। [एदस्सि णन्दणवणेक्कदेसे विअ पमदवणे ओदरिअ जाणिस्सामो।]
(उभे अवतरत)

चित्रलेखा— (दृष्ट्वा सहर्षम्) हला एष खलु प्रथमोदित इव चन्द्र कौमुदी-मिवापेक्षते त्वाम्। [हला एसो खु पढमोदिदो विअ चन्दो कोमुदि विअ अवेक्खदि तुम।]

ಚಿತ್ರಲೇಖಾ — ನನ್ನೀ ಹೃದಯಕ್ಕೆ ಎಲ್ಲವೂ ಗೊತ್ತಿದೆ.
(ಇಬ್ಬರೂ ಸಂಚಾರವನ್ನು ನಟಿಸುವರು)

ಚಿತ್ರಲೇಖಾ — ಸಖೀ, ಇಕೊ ನೋಡು ಆ ಮಹಾರಾಜನ ಅರಮನೆಯ ಹತ್ತಿರ ಬಂದೆವು ಈ ಅರಮನೆಯು, ಯಮುನಾನದಿಯ ಸಂಗಮದಿಂದ ಹೆಚ್ಚು ಪವಿತ್ರವಾದ ಗಂಗಾನದಿಯ ನೀರಿನಲ್ಲಿ ತನ್ನ ಸೌಂದರ್ಯವನ್ನು ನೋಡಿಕೊಳ್ಳುತ್ತಿರುವದೊ ಏನೊ ಎಂಬಂತೆ ಕಾಣುವ ಈ ಪ್ರತಿಷ್ಠಾನ ನಗರಕ್ಕೆ ಅಲಂಕಾರಪ್ರಾಯವಾಗಿದೆ [ಶಬ್ದಶಃ— ಶಿಖಾಮಣಿಯಂತೆ ಕಂಗೊಳಿಸುವದು]

ಉರ್ವಶೀ — (ನೋಡಿ) 'ಈ ನಗರವೆಂದರೆ ಭೂಮಿಗಳಿಂದ ಸ್ವರ್ಗವೇ' ಎಂದು ಅನ್ನುವದು ಉಚಿತವು. (ಆಲೋಚಿಸಿ) ಸಂಕಟದಲ್ಲಿದ್ದವರಿಗೆ ಸಹಾಯಮಾಡುವ ಆ ಮಹಾನುಭಾವನು [ಪುರೂರವನು] ಎಲ್ಲಿರಬಹುದು?

ಚಿತ್ರಲೇಖಾ — ನಂದನ ವನದ ಒಂದು ಭಾಗವೊ ಎನ್ನುವ ಹಾಗೆ ಸುಂದರ ಕಾಣುವ ಈ ಪ್ರಮದವನದಲ್ಲಿ ಇಳಿದು ಅವನೆಲ್ಲಿರುವನೆಂಬುದನ್ನು ತಿಳಿಯೋಣ
(ಇರ್ವರೂ ಇಳಿಯುವರು)

ಚಿತ್ರಲೇಖಾ — (ಅರಸನನ್ನು ನೋಡಿ ಆನಂದದಿಂದ) ಗೆಳತೀ, ಇದೊ ನೋಡು, ಆದೇ ಉದಯಿಸಿದ ಬಿದಿಗೆಯ ಚಂದ್ರನು ಚಂದ್ರಿಕೆಯನ್ನು ನಿರೀಕ್ಷಿಸುವಂತೆ ಈ ಪುರೂರವ ಮಹಾರಾಜನು ನಿನ್ನನೇ ನಿರೀಕ್ಷಿಸುತ್ತಿರುವನು.

उर्वशी— (विलोक्य) हला इदानी प्रथमदर्शनादपि सविशेष प्रियदर्शनो महाराज प्रतिभाति । [हला दाणि पुढमदसणादो वि सविसेस पिअदसणो महाराओ पडिहादि ।]

चित्रलेखा—युज्यते । तदेह्युपसर्पाव । [जुज्जदि । ता एहि उवसप्पह्म]

उर्वशी— न तावदुपसर्पामि । तिरस्करिणीप्रतिच्छन्ना पार्श्वगतास्य भूत्वा श्रोष्यामि तावत्पार्श्वपरिवर्तिना वयस्येन सह विजने किं मन्त्रयमाणस्तिष्ठतीति । [ण दाव उवसप्पिस्सम् । तिरक्खरिणीपडिच्छण्णा पासगदा से भविअ सुणिस्स दाव पासपडिवत्तिणा वअस्सेण सह विअणे किं मन्तअन्तो चिठ्ठदित्ति ।]

चित्रलेखा— यथा ते रोचते । [जह दे रोअदि ।] (यथोक्तमनुतिष्ठतः)

विदूषक — भो चिन्तितो मया दुर्लभप्रणयिजनस्य समागमोपाय । [भो चिन्तिदो मए दुल्लहप्पणइजणस्स समाअमोवाओ ।]

(राजा तूष्णीमास्ते)

उर्वशी — का नु खल्वेषा स्त्री या अनेन प्रार्थ्यमाना आत्मान विकत्थते । [का णु खु एसा इत्थिआ इमिणा पथ्थीअमाणा अत्ताणअ विकत्थेदि ।

चित्रलेखा— किं पुनर्मानुष्य विडम्ब्यते । [किं उण माणुस्सअ विडम्बीअदि ।]

उर्वशी — बिभमि सहसा प्रभावाद्विज्ञातुम् । [भयामि सहसा पभावदो विण्णादु ।]

ಉರ್ವಶೀ — (ನೋಡಿ) ಎಲೈ ಗೆಳತೀ, ಈ ಮಹಾರಾಜನು ಮೊದಲನೇ ಸಲಕ್ಕಿಂತಲೂ ಈಗ ಹೆಚ್ಚು ಸುಂದರ ಕಾಣುವನು

ಚಿತ್ರಲೇಖಾ -- ನೀನು ಅಂದದ್ದು ನಿಜ ಅವನ ಸಮೀಪಕ್ಕೆ ಹೋಗೋಣ ನಡೆ

ಉರ್ವಶೀ – ಈಗ ಅವನ ಹತ್ತಿರ ಹೋಗುವದು ಬೇಡ 'ತಿರಸ್ಕರಿಣೀ' ವಿದ್ಯೆಯ ಪ್ರಭಾವದಿಂದ ನಾನು ಯಾರಿಗೂ ಕಾಣದ ಹಾಗ ಅವನ ಬದಿಗೆ ನಿಂತುಕೊಂಡು ನಿರ್ಜನ ವಾದ ಈ ಪ್ರದೇಶದಲ್ಲಿ ಹತ್ತಿರವೇ ಕುಳಿತ ತನ್ನ ಗೆಳೆಯನ ಸಂಗಡ ಇವನೇನು ಮಾತನಾಡುತ್ತಿರುವನೆಂಬುದನ್ನು ಕಿವಿಗೊಟ್ಟು ಕೇಳುವೆನು

ಚಿತ್ರಲೇಖಾ -- ನಿನ್ನಿಷ್ಟವಿದ್ದಂತೇ ಆಗಲಿ. (ಹಾಗೆ ಮಾಡುವರು).

ವಿದೂಷಕ -- ಎಲೈ ಗೆಳೆಯನೆ, ದುರ್ಲಭಳಾದ ನಿನ್ನ ಪ್ರಿಯಳನ್ನು ಕೂಡುವ ಉಪಾಯವನ್ನು ಯೋಚಿಸಿರುವೆನು (ಅರಸನು ಸುಮ್ಮನೆ ಇರುವನು)

ಉರ್ವಶೀ -- ಈ ಮಹಾರಾಜನು ತನ್ನನ್ನು ಬಯಸಿದ್ದರಿಂದ ತಾನು ಶ್ರೇಷ್ಠಳೆಂದು ತಿಳಿದ ಆ ಸ್ತ್ರೀಯು ಯಾರಿರಬಹುದು ?

ಚಿತ್ರಲೇಖಾ-- ಹೀಗೇಕೆ ಸಾಮಾನ್ಯ ಮಾನವ ಸ್ತ್ರೀಯಂತೆ ನಟಿಸುವಿ ?

ಉರ್ವಶೀ — ನನ್ನ ದಿವ್ಯಶಕ್ತಿಯಿಂದ ಅವಳಾರೆಂಬುದನ್ನು ಒಮ್ಮೆಲೆ ತಿಳಿದ ಕೊಳ್ಳಲು ನನಗೇಕೋ ಭಯವೆನಿಸುವದು.

विदूषक —ननु भणामि चिन्तित उपाय इति । [ण भणामि चिन्तिदो उवाओत्ति ।]

राजा– तेन हि कथ्यताम् ।

विदूषक– स्वप्नसमागमकारिणी निद्रा सेवता भवान् । अथवा तत्रभवत्या उर्वश्या प्रतिकृतिमालिख्यावलोकयस्तिष्ठ । [सिविणअसमाअमआरिणि णिद्दं सेवदु भवं । अहवा तत्थभोदीए उव्वसीए पडिकिदि आलिहिअ ओलोअन्तो चिट्ठ ।]

उर्वशी — (सहर्षम्) हीनसत्त्व हृदय समाश्वसिहि समाश्वसिहि । [हीणसत्त हिअअ समस्सस समस्सस ।]

राजा – तदुभयमप्यनुपपन्नम् ।

> **हृदयमिषुभिः कामस्यान्तः सशल्यमिदं सदा**
> **कथमुपलभे निद्रां स्वप्ने समागमकारिणीम् ।**
> **न च सुवदनामालेख्येऽपि प्रियामसमाप्य तां**
> **मम नयनयोरुद्बाष्पत्वं सखे न भविष्यति ॥ १० ॥**

चित्रलेखा – सखि श्रुतं त्वया । [सहि सूदं तुए]

ವಿದೂಷಕ -- ನಾನು ಪ್ರಿಯಸಮಾಗಮ ಉಪಾಯವನ್ನು ಯೋಚಿಸಿರುವೆನು‌ ಅಂದೆ.

ರಾಜಾ – ಹಾಗಾದರೆ, ಅದಾವುದು ಹೇಳು.

ವಿದೂಷಕ– ನೀನು ನಿದ್ರೆಹೋಗು, ಅಂದರೆ ಕನಸಿನಲ್ಲಿ ಅವಳ ಸಮಾಗಮದ ಸುಖವನ್ನು ಅನುಭವಿಸಬಹುದು ಇಲ್ಲವೆ, ನಿನ್ನ ಪ್ರಿಯಳಾದ ಆ ಉರ್ವಶಿಯ ಚಿತ್ರವೊಂದನ್ನು ತೆಗೆದು ಅದನ್ನು ಮುಂದಿಟ್ಟುಕೊಂಡು ಅದನ್ನೇ ನೋಡುತ್ತ ಕುಳಿತುಕೊ.
[ಇವೆರಡರಲ್ಲಿ ಯಾವುದಾದರೊಂದು ಉಪಾಯದಿಂದ ನಿನ್ನ ಪ್ರಿಯಳ ಸಮಾಗಮವನ್ನು ಹೊಂದು]

ಉರ್ವಶೀ–(ಆನಂದದಿಂದ) ಮರುಳು ಮನವೆ, ಸಮಾಧಾನ ಹೊಂದು, ಸಮಾಧಾನ. ಹೊಂದು

ರಾಜಾ-- ನೀನು ಯೋಚಿಸಿದ ಈ ಎರಡೂ ಉಪಾಯಗಳು ಅಯೋಗ್ಯವಾಗಿವೆ.
ಗೆಳೆಯಾ, ಕಾಮನಬಾಣಗಳಿಂದ ನನ್ನ ಮನಸ್ಸು ಜರ್ಜರಿತವಾಗಿದೆ; ಅಂದಮೇಲೆ ಕನಸಿನಲ್ಲಿ ಅವಳ ಸಮಾಗಮವನ್ನುಂಟುಮಾಡುವ ನಿದ್ರೆಯಾದರೂ ನನಗೆ ಹೇಗೆ ಬರುವದು ? ಇನ್ನು, ಆ ನನ್ನ ಇನಿಯಳ ಚಿತ್ರವನ್ನು ತೆಗೆಯಬೇಕೆಂದರೆ ಅದೂ ಶಕ್ಯವಿಲ್ಲ. ಏಕೆಂದರೆ, ಆ ಇಂದುಮುಖಿಯ ಚಿತ್ರವನ್ನು ತೆಗೆದು ಮುಗಿಸುವದರೊಳಗೇ ನನ್ನ ಕಣ್ಣುಗಳಲ್ಲಿ ನೀರು ತುಂಬದೇ ಇರಲಾರದು [ಹೀಗೆ ಈ ಎರಡೂ ಉಪಾಯಗಳು ನಿರರ್ಥಕವಾದವುಗಳು] ॥ ೧೦ ॥

ಚಿತ್ರಲೇಖಾ— ಗೆಳತಿ, ಕೇಳಿದಿಯಾ [ಈ ಮಾತನ್ನು]?

उर्वशी – श्रुत न पुन पर्याप्त हृदयस्य। [सुद ण उण पज्जत्त हिअअस्स।]

विदूषक – एतावान्मे मतिविभवः। [एत्तिओ मे मदिविहओ।]

राजा – (सनिश्वासम्)

नितान्तकठिना रुज मम न वेद सा मानसी
प्रभावविदितानुरागमवमन्यते वापि माम्।
अलब्धफलनीरसान्मम विधाय तस्मिञ्जने
समागममनोरथान्भवतु पञ्चबाणः कृती ॥ ११ ॥

चित्रलेखा – श्रुत त्वया। [सुद तुए।]

उर्वशी– हा धिक् हा धिक्। मामप्येवमवगच्छति। असमर्थास्म्यग्रतो भूत्वा अस्य प्रतिवचनस्य। तत्प्रभग्वनिमितेन भूर्जपत्रेण सपादितोत्तरा भवितुमिच्छामि। [हृध्धी हृध्धी। म वि एव्व अवगछ्छदि। असमत्थम्हि अग्गदो भविअ से पडिवअणस्स। ता पहार्वाणम्मिदेण भुज्जवत्तेण सपादिदुत्तरा होदुम् इछ्छामि।]

चित्रलेखा – अनुमत मे। [अणुमद मे।] (उर्वशी नाटचेनाभिलिख्य क्षिपति)

ಊರ್ವಶೀ— ಕೇಳಿದೆನು ಆದರೆ ನನ್ನ ಹೃದಯಕ್ಕೆ ಇದರಿಂದ ಇನ್ನು ತೃಪ್ತಿಯಾಗಿಲ್ಲ

ವಿದೂಷಕ— ನನ್ನ ಬುದ್ಧಿಯ ಶಕ್ತಿಯೇ ಇಷ್ಟು

ರಾಜಾ— (ನಿಟ್ಟುಸಿರುಬಿಟ್ಟು)

ನನ್ನ ಮನಸ್ಸಿನಲ್ಲಿಯ ಸಂತಾಪವನ್ನು ಅವಳು ಅರಿತಿರಲಿಕ್ಕಿಲ್ಲ. ಇಲ್ಲವೆ, ಅವಳ ವಿಷಯವಾಗಿದ್ದ ನನ್ನ ಅನುರಾಗವನ್ನು ತನ್ನ ದಿವ್ಯಶಕ್ತಿಯಿಂದ ತಿಳಿದೂ ನನ್ನನ್ನು ಅವಳು ಅಲಕ್ಷಿಸುತ್ತಿರಬಹುದು, ಅಂತೂ ಅವಳ ಸಮಾಗಮವನ್ನು ಪಡೆಯಬೇಕೆಂಬ ನನ್ನ ಉತ್ಕಟ ಆಕಾಂಕ್ಷೆಗಳು ನಿಷ್ಫಲವಾಗಿ ವಿರಸವಾಗುವಂತೆ ಮಾಡಿದ, ಆ ಪಂಚಬಾಣಗಳನ್ನು, ಧರಿಸದ ಮದನನು ಕೃತಾರ್ಥನಾಗಲಿ ॥ ೧೧ ॥

ಚಿತ್ರಲೇಖಾ —ಕೇಳಿದೆಯಾ?

ಊರ್ವಶೀ— ಅಯ್ಯೊ! ನಾನು ಹೀಗಿರುವೆನೆಂದು ಇವನು ತಿಳಿದಿರುವನಲ್ಲಾ! ಈಗ ಇವನ ಎದುರಿಗೆ ಹೋಗಿ ನಿಂತು ಉತ್ತರವನ್ನು ಕೊಡಲು ನಾನು ಅಸಮರ್ಥಳು. ಆದ್ದರಿಂದ ನನ್ನ ದಿವ್ಯಶಕ್ತಿಯಿಂದ ಒಂದು ಭೂರ್ಜಪತ್ರವನ್ನು ನಿರ್ಮಿಸಿ ಅದರಲ್ಲಿ ನನ್ನ ಉತ್ತರವನ್ನು ಬರೆದು ತಿಳಿಸುವೆನು.

ಚಿತ್ರಲೇಖಾ— ನಾನಿದನ್ನೊಪ್ಪುವೆನು.

(ಊರ್ವಶಿಯು ಬರೆಯುವಂತೆ ನಟಿಸಿ ಆ ಎಲೆಯನ್ನು ರಾಜನ ಹತ್ತಿರ ಚೆಲ್ಲುವಳು.)

विदूषक – अविहा अविहा । भो किं न्वेतत् । भुजङ्गनिर्मोक किं मा खादितुं निपतित । [अविहा अविहा । भो किं णु एद । भुअङ्गणिम्मोओ किं म खादिदु णिवडिदो ।]

राजा — (विभाव्य) नाय भुजङ्गनिर्मोक. । भूर्जपत्रगतोऽयमक्षरविन्यास ।

विदूषक – न खल्वदृष्टया तत्रभवत्या उर्वश्या भवत परिदेवित श्रुत्वा समानानुरागसूचकान्यक्षराणि विसृष्टानि भवन्ति । [ण खु अदिट्ठाए तत्तहोदीए उव्वसीए भवदो परिदेविद सुणिअ समाणाणुराअसूअआइ अक्खराइ विसज्जिआइ होन्ति ।]

राजा —नास्त्यगतिर्मनोरथानाम् । (गृहीत्वानुवाच्य सहर्षम्) सखे प्रसन्नस्ते तर्क ।

विदूषक – भवानिदानीं प्रसीदतु । अत्र लिखित श्रोतुमिच्छामि । [भव दाणि पसीददु । एत्थ लिहिद सुणिदु इच्छामि ।]

उर्वशी– साधु आर्य नागरिकोऽसि । [साहु अज्ज णाअरिओसि ।]

राजा – श्रूयताम् । (वाचयति)

स्वामिन्सभाविता यथाहं त्वया अज्ञाता ।
तथानुरक्तस्य यदि नाम तवोपरि ॥ १२ ॥

ವಿದೂಷಕ— ಅಯ್ಯೋ! ಅಯ್ಯೋ! ಎಲೈ ಗೆಳೆಯನೆ ಏನಿದು? ನನ್ನನ್ನು ನುಂಗಲು ಕೆಳಗೆ ಬಿದ್ದ ಹಾವಿನ ಪರೆಯೊ ?

ರಾಜಾ – (ಚೆನ್ನಾಗಿ ನಿರೀಕ್ಷಿಸಿ) ಗೆಳೆಯ, ಇದು ಹಾವಿನ ಪರೆಯಲ್ಲ. ಇದು ಭೂರ್ಜಪತ್ರವು ಇದರ ಮೇಲೆ ಏನನ್ನೋ ಬರೆಯಲಾಗಿದೆ

ವಿದೂಷಕ— ಮಿತ್ರನೆ, ಆ ಉರ್ವಶಿಯು ನಮಗೆ ಕಾಣದಂತೆ [ಇಲ್ಲಿಯೇ ನಿಂತು ಕೊಂಡು] ನಿನ್ನ ಕರುಣಾಜನಕವಾದ ಗೋಳಾಟವನ್ನು ಕೇಳಿ ತನ್ನ ಪ್ರೇಮವನ್ನು ಸೂಚಿಸಲು ಈ ಅಕ್ಷರಗಳನ್ನು ಬರೆದು ಈ ಭೂರ್ಜಪತ್ರವನ್ನಿಲ್ಲಿ ಚೆಲ್ಲಿರಲಿಕ್ಕಿಲ್ಲವಷ್ಟೆ ?

ರಾಜಾ–ಬಯಕೆಗಳಿಗೆ ಮೇರೆಯೇ ಇಲ್ಲ [ಎಂದರೆ ಮನುಷ್ಯನ ಆಶೆ ಆಕಾಂಕ್ಷೆಗಳಿಗೆ ಮಿತಿಯೆಂಬುದಿಲ್ಲ ಕಡಿವಾಣವಿಲ್ಲದ ಕುದುರೆಯಂತೆ ಮನಸ್ಸಿನ ಬಯಕೆಗಳು ಎಲ್ಲಿ ಬೇಕಾದಲ್ಲಿ ಹೋಗಬಹುದು] (ಅದನ್ನು ತೆಗೆದುಕೊಂಡು ಮನಸ್ಸಿನಲ್ಲಿಯೇ ಓದಿ ಸಂತೋಷದಿಂದ) ಮಿತ್ರನೆ, ನಿನ್ನ ಊಹೆಯು ಸರಿಯಾದದ್ದು.

ವಿದೂಷಕ— ಗೆಳೆಯನೆ, ನೀನೀಗ ದಯವಿಟ್ಟು ಅದರಲ್ಲಿ ಬರೆದಿರುವದನ್ನು ಸ್ವಲ್ಪ ಓದು, ನಾನದನ್ನು ಕೇಳಬಯಸುವೆನು

ಉರ್ವಶೀ— ಒಳ್ಳೇದು! ಆರ್ಯನೇ ನೀನು ರಸಿಕನು [ಅಥವಾ ಬಹುಜಾಣನು]

ರಾಜಾ— ಗೆಳೆಯಾ ಕೇಳು. (ಪತ್ರವನ್ನು ಓದುವನು)

"ಪ್ರಭುವೆ, ನನ್ನನ್ನರಿಯದ ನೀನು ತಿಳಿದಂತೆ ನಾನು ನನ್ನಲ್ಲಿ ಅನುರಕ್ತನಾದ ನಿನ್ನನ್ನು ತಿರಸ್ಕರಿಸುತ್ತಿದ್ದರೆ, [ನಾನು ಉರುಳಾಡುವದರಿಂದ] ಅಸ್ತವ್ಯಸ್ತವಾದ ಕೋಮಲವಾದ

ननु मम लुलितपारिजातशयनीये भवन्ति ।
नन्दनवाता अप्यत्युष्णका शरीरके ॥ १३ ॥

[सामिअ सभाविआ जह अह तुये अमुणिआ । तह अणुरत्तस्स जइ णाम तुह उवरि ॥
ण मे लुलिअपारिजाअसअणिज्जयम्मि होन्ति । णन्दणवणवादावि अच्चुण्हआ सरीरए ॥]

उर्वशी — किं नु खलु साप्रतं भणिष्यति । [किं णु खु सपदं भणिस्सदि ।]

चित्रलेखा – ननु भणितमेव कमलनालायमानैरङ्गैः । [ण भणिद एव्व कमलणालाअमाणेहि अङ्गेहि ।]

विदूषक – दिष्टचा मयेव बुभुक्षितेन स्वस्तिवायनमुपलब्ध भवता समाश्वासनम् । [दिट्ठिआ मए विअ बुभुक्खिदेण मोत्थिवाअण उवलध्ध भवदा समामासणं ।]

राजा – समाश्वासनमिति किमुच्यते ।

तुल्यानुरागपिशुन ललितार्थबन्ध
पत्रे निवेशितमुदाहरण प्रियाया ।
उत्पक्ष्मल मम सखे मदिरेक्षणाया-
स्तस्या समागतमिवाननमाननेन ॥ १४ ॥

उर्वशी – अत्रावयो समविभागा प्रीति । [एत्थ णो समविभाआ पीदी ।]

राजा – वयस्य अङ्गुलीस्वेदेन दूष्येरन्नक्षराणि । धार्यतामयं स्वहस्ते निक्षेपः प्रियाया ।

ಪಾರಿಜಾತ ಪುಷ್ಪಗಳ ಮೇಲೆ ಮಲಗಿದ ನನ್ನ ಬಳಲಿದ ದೇಹಕ್ಕೆ ನಂದನವನದಿಂದ ಬೀಸುವ ತಂಗಾಳಿಗಳೂ ಕೂಡ ಬಹಳೇ ಉಷ್ಣವಾಗಿ ಪರಿಣಮಿಸುವವೇಕೆ? " ॥ ೧೨-೧೩ ॥

ಊರ್ವಶೀ— ಈಗ ಇವನು ಏನು ಅನ್ನಬಹುದು ?

ಚಿತ್ರಲೇಖಾ—ಕಮಲದ ದೇಟಿನಂತೆ ಕಾಣುವ ಇವನ ಅವಯುವಗಳಿಂದ ಇವನೀಗ ಏನು ಅನ್ನಬಹುದೆಂಬದು ಸ್ಪಷ್ಟವೇ ಇದೆ.

ವಿದೂಷಕ— ಹಸಿವೆಯಿಂದ ಬಳಲಿದ ನನಗೆ ಸ್ವಸ್ತಿವಾಯನ [ಮೃಷ್ಟಾನ್ನದ ಕಾಣಿಕೆ] ಸಿಕ್ಕಂತೆ ದೈವಯೋಗದಿಂದ ನಿನಗೀಗ ಸ್ವಲ್ಪ ಸಮಾಧಾನ ದೊರಕಿತು [ಈ ಭೂರ್ಜಪತ್ರದಿಂದ ನಿನ್ನ ನೊಂದಮನಕ್ಕೆ ಸ್ವಲ್ಪ ಸಮಾಧಾನವಾಗುವದು.]

ರಾಜಾ— ಇದು ಕೇವಲ ಸಮಾಧಾನವೆಂದೇಕೆ ಅನ್ನುವಿ ?

ನನ್ನಷ್ಟೇ ಉತ್ಕಟವಾದ ಅವಳ ಅನುರಾಗ ಸೂಚಕವಾದ, ಲಲಿತವಾದ ಅರ್ಥವುಳ್ಳ, ಈ ಭೂರ್ಜಪತ್ರದ ಮೇಲೆ ಬರೆಯಲ್ಪಟ್ಟ, ಆ ಪ್ರಿಯತಮೆಯ, ಈ ಪದ್ಯವು, ಆ ಮದಿರಾಕ್ಷಿಯ ತೆರೆದ ಕಣ್ಣುಗಳುಳ್ಳ ಮುಖವು ಈಗ ನನ್ನ ಮೊಗಕ್ಕೆ ಮುತ್ತಿಡುವದೋ ಏನೋ ಎಂಬಂತೆ ಕಾಣುವದು ॥ ೧೪ ॥

ಊರ್ವಶೀ— ಈಗ ನಮ್ಮೀರ್ವರ ಪ್ರೇಮವು ಸಮಾನವಾದದ್ದು.

ರಾಜಾ — ಮಿತ್ರನೆ, ನನ್ನ ಕೈಬೆರಳುಗಳ ಬೆವರಿನಿಂದ ಈ ಅಕ್ಷರಗಳು ಅಳಿಸಿ ಹೋಗಬಹುದು ಕಾರಣ, ನನ್ನಿನಿಯಳ ಈ ಪತ್ರವನ್ನು ನಿನ್ನ ಕೈಯಲ್ಲಿ ಹಿಡಿದುಕೊ.

विदूषक – (गृहीत्वा) किमदानी तत्रभवत्युर्वशी भवतो मनोरथाना कुसुम दर्शयित्वा फले विसवदति । [किं दाणि तत्तभोदी उव्वसी भवदो मणोरहाण कुसुम दसिअ फले विसवदति ।]

उर्वशी – हला यावदुपगमनकातर हृदय पर्यवस्थापयामि तावत्त्वमस्मै आत्मान दर्शयित्वा यन्मम क्षम तद्भण । [हला जाव उवगमणकादर हिअअ पज्जवत्थावेमि दाव तुम से अत्ताण दसिअ ज मे खम त भणाहि ।]

चित्रलेखा — तथा । [तह ।] (इति तिरस्करिणीमपनीय राजानमुपसृत्य) जयतु जयतु महाराज । [जेदु महाराओ ।]

राजा -- (ससभ्रमादरगर्भम्) स्वागत भवत्यै । (पार्श्वमवलोक्य) भद्रे

त तथा नन्दयसि मा सख्या विरहिता तया ।
सगमे पूर्वदृष्टेव यमुना गङ्गया विना ॥ १५ ॥

चित्रलेखा — ननु प्रथम मेघराजिर्दृश्यते पश्चाद्विद्युल्लता । [ण पढम मेहराई दीसदि पच्छा विज्जुल्लदा ।]

ವಿದೂಷಕ – (ಅದನ್ನು ತೆಗೆದುಕೊಂಡು)

ಮಾನ್ಯಳಾದ ಆ ಉರ್ವಶಿಯು ನಿನ್ನ ಮನೋರಥವೆಂಬ ಗಿಡಕ್ಕೆ [ಈ ಲೇಖದ ಮುಖಾಂತರ] ಹೂವುಗಳನ್ನು ತೋರಿಸಿ ಈಗ ಅದರ ಫಲವನ್ನು ತೋರಿಸಲು ತಪ್ಪ ಬಹುದೊ ? [ಹೂ ಬಿಟ್ಟ ನಿನ್ನ ಮನೋರಥವು ತೀವ್ರವೇ ಫಲಿಸುವದರಲ್ಲಿ ಸಂಶಯವಿಲ್ಲ ಅಂದರೆ— ಉರ್ವಶಿಯ ಪೇಮಪತ್ರವು ನಾಯಕನ ಬಯಕೆಗಳಿಗೆ ಹೂವಿದ್ದಂತೆ. ಅವಳ ಸಮಾಗಮವೆಂಬ ಫಲವು ಬೇಗನ ಒದಲಿದೆಯೆಂದು ವಿದೂಷಕನು ಸೂಚಿಸುವನು]

ಉರ್ವಶೀ— ಗೆಳತಿ, ಇವನ ಹತ್ತಿರ ಹೋಗಲು ಕಾತರಗೊಂಡ ನನ್ನ ಮನಸ್ಸನ್ನು ನಾನು ಸಮಾಧಾನ ಪಡಿಸುವಷ್ಟರಲ್ಲಿ ನೀನು ಇವನ ಬಳಿಗೆ ಹೋಗಿ [ಶಬ್ದಶಃ– ನಿನ್ನನ್ನು ಕಾಣಿಸಿಕೊಂಡು] ನನ್ನ ಪರವಾಗಿ ಪ್ರಸಂಗೋಚಿತವಾದ ಮಾತನ್ನಾಡು

ಚಿತ್ರಲೇಖಾ — ಹಾಗೇ ಆಗಲಿ (ಎಂದು ತಿರಸ್ಕರಿಣಿಯನ್ನು — ಮಾಯೆಯ ಹೊದಿಕೆ ಯನ್ನು — ದೂರಮಾಡಿ ರಾಜನ ಬಳಿಗೆ ಬಂದು) ಮಹಾರಾಜನಿಗೆ ಜಯವಾಗಲಿ, ಜಯ ವಾಗಲಿ

ರಾಜಾ— (ಸಂಭ್ರಮಾದರಗಳಿಂದ) ಪೂಜ್ಯಳೆ, ನಿನಗೆ ಸ್ವಾಗತವು (ಅವಳ ಬದಿಗೆ ನೋಡಿ) ಮಾನ್ಯಳೇ —

ಗಂಗೆಯ ಸಂಗಮದಲ್ಲಿ ಮೊದಲು ಆಹ್ಲಾದಕರವಾಗಿ ಕಂಡ ಯಮುನೆಯು ಗಂಗೆಯ ನುಳಿದು ಹೇಗೆ ಆನಂದವನ್ನುಂಟು ಮಾಡುವದಿಲ್ಲವೋ, ಹಾಗೆ [ಹಿಂದೆ ನಿನ್ನ ಪ್ರಿಯ ಸಖಿಯಾದ ಉರ್ವಶಿಯೊಂದಿಗೆ ಕಂಡಾಗ ಆನಂದ ಕೊಟ್ಟಷ್ಟು] ಆ ನಿನ್ನ ಪ್ರಿಯಸಖಿಯನ್ನ ಗಲಿದ ನೀನು ಈಗ ನನ್ನ ಮನಸ್ಸಿಗೆ ಆನಂದವನ್ನೀಯುವದಿಲ್ಲ ॥೧೫॥

ಚಿತ್ರಲೇಖಾ— ಮೋಡಗಳನ್ನು ಕಂಡಮೇಲಲ್ಲವೆ ಮಿಂಚನ್ನು ಕಾಣುವದು?

विदूषक – (अपवार्य) कथं नैषा उर्वशी । तस्यास्तत्रभवत्या अभिमता सहचरी । [कह ण एसा उव्वसी । ताए तत्तहोदीए अहिमदा सहअरी ।]

राजा –– एतदासनमास्यताम् ।

चित्रलेखा –– (उपविश्य) उर्वशी महाराज शिरसा प्रणम्य विज्ञापयति । [उव्वसी महाराअ सिरसा पणमिअ विण्णवेदि ।]

राजा – किमाज्ञापयति ।

चित्रलेखा – मम तस्मिन्सुरारिसंभवे दुर्णये महाराज एव शरणमासीत् । साहं तव दर्शनसमुत्थितेन मदनेन बलवद्बाध्यमाना भूयोऽपि महाराजेनानुकम्पनीयेति । [मह तस्सिं सुरारिसंभवे दुण्णए महाराओ एव्व सरणं आसि । सा अहं तुह दंसणसमुत्थेण मअणेण बलिअं बाहीअमाणा भूओवि महाराएण अणुकम्पणीअत्ति ।]

राजा – भद्रमुखि ।

पर्युत्सुका कथयसि प्रियदर्शना ता-
मार्तं न पश्यसि पुरूरवसं तदर्थे ।
साधारणोऽयमुभयोः प्रणयो यतस्व
तप्तेन तप्तमयसा घटनाय योग्यम् ॥ १६ ॥

ವಿದೂಷಕ — (ಮರೆಯಾಗಿ ಹಿಂತಿರುಗಿಕೊಂಡು ರಾಜನನ್ನುದ್ದೇಶಿಸಿ) ಏನು ? ಇವಳು ಉರ್ವಶಿಯಲ್ಲವೆ? ಅವಳ ಪ್ರಿಯಗೆಳತಿಯೋ ಇವಳು !

ರಾಜಾ— ಮಾನ್ಯಳೇ, ಈ ಆಸನವನ್ನಲಂಕರಿಸಬೇಕು.

ಚಿತ್ರಲೇಖಾ — (ಆಸನದ ಮೇಲೆ ಕುಳಿತುಕೊಂಡು) ಉರ್ವಶಿಯು ಮಹಾರಾಜರಿಗೆ ಶಿರಬಾಗಿ ವಿಜ್ಞಾಪಿಸಿಕೊಳ್ಳುವದೇನಂದರೆ —

ರಾಜಾ — ಏನಾಜ್ಞಾಪಿಸುವಳು ?

ಚಿತ್ರಲೇಖಾ — ‘ ನನಗೆ ಅಸುರರಿಂದ ಬಾಧೆಯುಂಟಾದಾಗ ಮಹಾರಾಜರೇ ನನ್ನ ಮೇಲೆ ದಯೆತೋರಿ ನನ್ನನ್ನು ಪಾರು ಮಾಡಿದರು. ಆದ್ದರಿಂದ, ನಿಮ್ಮ ದರ್ಶನದಿಂದ ಹುಟ್ಟಿದ ಮದನಬಾಧೆಯಿಂದ ಬಳಲುತ್ತಿರುವ ನನ್ನನ್ನು ಈಗ ಪುನಃ ಮಹಾರಾಜರೇ ದಯಮಾಡಿ ಈ ಮದನ ಬಾಧೆಯಿಂದ ಪಾರುಮಾಡಬೇಕು. ’ ಎಂದು ಅವಳು ತಮಗೆ ವಿಜ್ಞಾಪಿಸಿರುವಳು

ರಾಜಾ — ಮಂಗಲಾಂಗಿಯೆ —

ನೀನು ಆ ಶೋಭನಾಂಗಿಯು ಕಾಮಪೀಡೆಯಿಂದ ಯಾತನೆಪಡುತ್ತಿರುವಳೆಂದು ಮಾತ್ರ ಹೇಳುವಿ; ಅವಳ ಸಲುವಾಗಿ ತಾಪಪಡುವ ಈ ಪುರೂರವನನ್ನು (ನನ್ನನ್ನು) ನೀನು ನೋಡುವದಿಲ್ಲ ನಮ್ಮೀರ್ವರಲ್ಲಿ ಪರಸ್ಪರ ಪ್ರೇಮವಿದ್ದು ಈ ಪ್ರಾರ್ಥನೆಯು ಇಬ್ಬರಿಗೂ ಅನ್ವಯಿಸುವದು ಕಾರಣ, ನಮ್ಮನ್ನು ಕೂಡಿಸಲು ಪ್ರಯತ್ನಮಾಡು. ಏಕೆಂದರೆ ಕಾದ ಕಬ್ಬಿಣವನ್ನು ಕಾದಕಬ್ಬಿಣದಲ್ಲಿ ಕೂಡಿಸುವದು (ಬೆಸೆಯುವದು) ಉಚಿತವು॥ ೧೬ ॥

चित्रलेखा — (उर्वशीमुपेत्य) हला एहि। त्वत्तोऽपि निर्दयतर मदन दृष्ट्वा प्रियतमस्य ते दूत्यस्मि संवृत्ता। [हला एहि। तुवत्तोवि णिद्दवदर मअण देक्खिअ पिअअमस्स दे दूदिह्मि-संवुत्ता।]

उर्वशी — (तिरस्करिणीमपनीय) अयि अनवस्थिते लघु त्वयोज्झितास्मि। [अयि अणवत्थिदे लहुअ तुए उज्झिदम्हि।]

चित्रलेखा — (सस्मितम्) इतो मुहूर्तात् ज्ञास्यामि का कामुज्झिष्यतीति। आचार तावत्प्रतिपद्यस्व। [इदो मुहुत्तादो जाणिस्स का क उज्झिस्सदिति। आआर दाव पडिवज्ज।]

उर्वशी — (ससाध्वसमुपसृत्य सव्रीडम्) जयतु जयतु महाराजः। [जेदु जेदु महारओ।]

राजा — सुन्दरि

> मया नाम जितं यस्य त्वयायं समुदीर्यते।
> जयशब्दः सहस्राक्षादागतः पुरुषान्तरम् ॥ १७ ॥

(हस्ते गृहीत्वा एनामुपवेशयति)

ಚಿತ್ರಲೇಖಾ — (ಊರ್ವಶಿಯ ಬಳಿಗೆ ಬಂದು) ಎಲೈ ಗೆಳತಿ, ಬಾ ಮದನನು ನಿನಗಿಂತಲೂ ನಿನ್ನ ಇನಿಯನನ್ನೇ ಹೆಚ್ಚು ನಿರ್ದಯನಾಗಿ ಪೀಡಿಸುತ್ತಿರುವದನ್ನು ನೋಡಿ ನಾನೀಗ ಅವನ ದೂತಿಯಾಗಿ ಬಂದಿರುವೆನು.

ಊರ್ವಶೀ — (ತಿರಸ್ಕರಿಣಿಯನ್ನು ದೂರಮಾಡಿ) ಎಲೆ ಅಸ್ಥಿರಳೆ, ಇಷ್ಟುಬೇಗ ನೀನು ನನ್ನನ್ನು ಬಿಟ್ಟುಬಿಟ್ಟೆಯಾ ?

ಚಿತ್ರಲೇಖಾ — (ಮುಗುಳುನಗೆ ನಗುತ್ತ) ಇನ್ನು ಕೆಲವೇ ನಿಮಿಷಗಳಲ್ಲಿ ಯಾರು ಯಾರನ್ನು ಬಿಡುವರೆಂಬದು ತಾನೇ ತಿಳಿಯುವದು. ಈಗ ಮೊದಲು ಮಹಾರಾಜನಿಗೆ ತಕ್ಕ ಮರ್ಯಾದೆಯನ್ನು ಮಾಡು.

ಊರ್ವಶೀ — (ಭಯದಿಂದ ಮುಂದೆ ಹೋಗಿ ಲಜ್ಜೆಯಿಂದ) ಮಹಾರಾಜನಿಗೆ ಜಯವಾಗಲಿ, ಜಯವಾಗಲಿ.

ರಾಜಾ — ಎಲೈ ಸುಂದರಿ,

ಸುರಪತಿಯಾದ ಇಂದ್ರನ ಹೊರತಾಗಿ ಬೇರೆ ಯಾರಿಗೂ ಅನ್ವಯಿಸದ ಈ 'ಜಯ' ಶಬ್ದವನ್ನು ನೀನು ನನ್ನನ್ನುದ್ದೇಶಿಸಿ ಉಚ್ಚರಿಸಿರುವಿಯೆಂದ ಮೇಲೆ ನಾನು ನಿಜವಾಗಿಯೂ ಜಯಶಾಲಿಯು ॥ ೧೭ ॥

(ಎಂದು ಅವಳ ಕೈಹಿಡಿದು ಕೂಡಿಸುವನು.)

विदूषक — भवति राज्ञ प्रियवयस्यौ ब्राह्मण कि न वन्द्यते। [भोदि रण्णो पिअवअस्सो बह्मणो कि ण वन्दीअदि।] (उर्वशी सस्मित प्रणमति)

विदूषक — स्वस्ति भवत्यै। [सथ्थि भोदीए।]

(नेपथ्ये देववूतः) चित्रलेखे त्वरयोर्वशीम्।

मुनिना भरतेन य प्रयोगो
भवतीष्वष्टरसाश्रयो नियुक्तः।
ललिताभिनय तमद्य भर्ता
मरुता द्रष्टुमना सलोकपाल ॥ १८ ॥

(सर्वे कर्णं ददति। उर्वशी विषाद नाटयति)

चित्रलेखा – श्रुत प्रियसख्या देवदूतस्य वचनम्। अनुमान्यता महाराज्ञ। [सुद पिअसहीए देवदूदस्य वअण। अणुमाणीअदु महाराओ।]

उर्वशी – नास्ति मे वाचा। [णथ्थि मे वाआ।]

चित्रलेखा– महाराज उर्वशी विज्ञापयति परवशोऽय जन। तन्महाराजेनाभ्यनुज्ञाता इच्छामि देवदेवस्यानपराद्धमात्मान कर्तुम्। [महाराअ उव्वसी विण्णवेदि परवसो अअ जणो। ता महाराएण अभ्भणुण्णादा इछ्छामि देअदेअस्स अणवरध्व अत्ताणअ कादु।]

ವಿದೂಷಕ — ಪೂಜ್ಯಳೇ, ಮಹಾರಾಜನ ಪ್ರಿಯಮಿತ್ರನಾದ ನನಗೆ ನಮಸ್ಕಾರ ಮಾಡುವದಿಲ್ಲವೇ ?

(ಉರ್ವಶಿಯು ನಸುನಗುತ್ತ ನಮಸ್ಕರಿಸುವಳು.)

ವಿದೂಷಕ — ನಿನಗೆ ಕಲ್ಯಾಣವಾಗಲಿ.

(ತೆರೆಯಲ್ಲಿ ದೇವದೂತನು) ಚಿತ್ರಲೇಖೆ, ಉರ್ವಶಿಯನ್ನು ತ್ವರೆಗೊಳಿಸು—

ನಾಟ್ಯಾಚಾರ್ಯರಾದ ಭರತಮುನಿಗಳು [ಶೃಂಗಾರಾದಿ] ಅಷ್ಟರಸಗಳಿಂದ ಕೂಡಿದ ಯಾವ ರೂಪಕವನ್ನು ನಿಮಗೆ ಕಲಿಸಿರುವರೊ, ಲಲಿತವಾದ ಅಭಿನಯವುಳ್ಳ ಆ ನಾಟಕದ ಪ್ರಯೋಗವನ್ನು ದೇವೇಂದ್ರನು ಉಳಿದೆಲ್ಲ ದಿಕ್ಪಾಲಕರೊಂದಿಗೆ ಇಂದು ನೋಡ ಬಯಸುವನು ॥ ೧೮॥

(ಎಲ್ಲರೂ ಕಿವಿಗೊಟ್ಟು ಕೇಳುವರು ಉರ್ವಶಿಯು ವಿಷಾದವನ್ನು ನಟಿಸುವಳು)

ಚಿತ್ರಲೇಖಾ — ಗೆಳತಿ, ದೇವದೂತನ ಮಾತನ್ನು ಕೇಳಿದೆಯಲ್ಲವೆ ? ಮಹಾರಾಜನ ಸಮ್ಮತಿಯನ್ನು ಪಡೆ [ಹೋಗೋಣ]

ಉರ್ವಶೀ— ಮಾತನಾಡಲು ನನಗೆ ಬಾಯಿಯೇ ಇಲ್ಲದಾಗಿದೆ.

ಚಿತ್ರಲೇಖಾ — ಮಹಾರಾಜನೆ , ಉರ್ವಶಿಯು ಪರಾಧೀನಳಾಗಿರುವದರಿಂದ ಮಹೇಂದ್ರನ ಆಜ್ಞೆಯನ್ನು ಮೀರುವಂತಿಲ್ಲ. ಕಾರಣ ತಮ್ಮ ಅಪ್ಪಣೆಯಾದರೆ ಹೋಗಿ ಬರುವೆನೆಂದು ವಿಜ್ಞಾಪಿಸುವಳು.

राजा – (कथं कथमपि वचनं संस्थाप्य) नास्मि भवत्योरीश्वरनियोगप्रत्यर्थी । स्मर्तव्यस्त्वया जनः ।

(उर्वशी वियोगदुःखं रूपयन्ती राजानं पश्यन्ती सह सख्या निष्क्रान्ता)

राजा – (सनिश्वासम्) सखे वैयर्थ्यमिव चक्षुषः सम्प्रति ।

विदूषकः – (पत्रं दर्शयितुकामः) नन्वेतत्– (इत्यर्धोक्ते आत्मगतम्) हा धिक् हा धिक् उर्वशीदर्शनविस्मितेन मया तद्भूर्जपत्रं प्रभ्रष्टमपि हस्तात्प्रमादेन न विज्ञातम् । [ण एदं – हद्धी हद्धी उव्वसीदंसणविह्मिदेण मए तं भुज्जवत्तअं पब्भट्ठंपि हत्थादो पमादेण ण विण्णादं ।]

राजा – भद्र किमसि वक्तुकाम इव ।

विदूषकः – वयस्य एतदस्मि वक्तुकामः । मा भवानङ्गानि मुञ्चतु । दृढं खलु त्वयि बद्धभावा उर्वशी । न सा इतोगतमनुरागं शिथिलयति । [वअस्स एदह्मि वत्तुकामो । मा भवं अङ्गाइं मुञ्चदु । दढं खु तुइ बद्धभावा उव्वसी । ण सा इदोगदं सिढिलेदि ।]

ರಾಜಾ — (ಹೇಗೊ ಪ್ರಯಾಸದಿಂದ ಶಬ್ದಗಳನ್ನು ಹೊಂದಿಸಿಕೊಂಡು) ನೀವು ನಿಮ್ಮ ಒಡೆಯನ ಅಪ್ಪಣೆಯನ್ನು ಪಾಲಿಸುವದಕ್ಕೆ ನಾನು ಆತಂಕ ಮಾಡುವದಿಲ್ಲ ಆದರೆ, ನನ್ನನ್ನು ಮರೆಯಬಾರದು.

(ಉರ್ವಶಿಯು ವಿಯೋಗದುಃಖವನ್ನು ನಟಿಸಿ ರಾಜನನ್ನು ನೋಡುತ್ತ ತನ್ನ ಗೆಳತಿಯೊಡನೆ ಹೊರಟು ಹೋಗುವಳು)

ರಾಜಾ— (ನಿಟ್ಟುಸಿರುಬಿಟ್ಟು) ಗೆಳೆಯನೆ, ಈಗ ಈ ಕಣ್ಣುಗಳು ವ್ಯರ್ಥವಾದಂತೆಯೇ ಸೈ.

ವಿದೂಷಕ—(ಭೂರ್ಜಪತ್ರವನ್ನು ತೋರಿಸಲು ಯತ್ನಿಸಿ) ಇಕೋ ಈ (ಎಂದು ಅರ್ಧಕ್ಕೇ ನಿಂತು, ತನ್ನಲ್ಲಿಯೇ) ಅಯ್ಯೋ ! ನಾನು ಬಹಳೇ ಆಶ್ಚರ್ಯಚಕಿತನಾಗಿ ಆ ಉರ್ವಶಿಯ ಸೌಂದರ್ಯವನ್ನು ನೋಡುತ್ತಿದ್ದಾಗ ಆ ಭೂರ್ಜಪತ್ರವು ಎಲ್ಲಿಯೊ ನನ್ನ ಕೈಯಿಂದ ಕಳಚಿ ಬಿದ್ದುಹೋದರೂ ಪ್ರಮಾದದಿಂದ ನನಗೆ ಅದು ಗೊತ್ತೇ ಆಗಿಲ್ಲ ! [ಇನ್ನೇನು ಗತಿ ?]

ರಾಜಾ — ಮಿತ್ರನೆ, ಏನು ಮಾತನಾಡಬೇಕೆಂದಿರುವೆ ?

ವಿದೂಷಕ— ಮಿತ್ರನೆ, ನಾನು ಹೇಳಬಯಸಿದ್ದೇನೆಂದರೆ—ನೀನು ಹೀಗೆ ನಿರಾಶನಾಗತಕ್ಕದ್ದಲ್ಲ ಏಕೆಂದರೆ ಆ ಉರ್ವಶಿಯು ನಿನ್ನಲ್ಲಿ ದೃಢವಾಗಿ ಅನುರಕ್ತಳಾಗಿರುವಳು, ಎಂದಮೇಲೆ, ಅವಳು ನಿನ್ನ ಮೇಲಿನ ಅನುರಾಗವನ್ನು ಕಡಿಮೆ ಮಾಡಲಾರಳು.

राजा — ममाप्येतदाशसि मन । तया खलु प्रस्थाने

अनीशया शरीरस्य हृदय स्ववशं मयि ।

स्तनकम्पक्रियालक्ष्यैर्न्यस्त नि श्वसितैरिव ॥ १९ ॥

विदूषक – (आत्मागतम्) वेपते मे हृदयमिमा वेला तत्रभवता तस्य भूर्जपत्रस्य नाम ग्रहीतव्य भविष्यतीति ! [वेवदि दे हिअअ इम वेल तत्तभवदा तस्स भुज्जवत्तस्स णाम गेण्हिदव्व भविस्सदित्ति ।]

राजा— वयस्य केनेदानीमुन्मनसमात्मान विनोदयामि । (स्मृत्वा) उपनय भूर्जपत्रम् ।

विदूषकः— (विषाद नाटयति) हन्त न दृश्यते । भो· दिव्य खलु तद्भूर्जपत्र गतमुर्वश्या मार्गेण । [हन्ण ण दीसदि । भो दिव्व खु त भुज्जवत्त गद उव्वसीए मग्गेण ।]

राजा — सर्वत्र प्रमादी वैधेय । ननु विचिनोतु भवान् ।

विदूषकः— (उत्थाय) नन्वितो भवेदितो भवेन । [ण इदो भवे ण इदो भवे ।]

(इति विचेतव्य नाटयति)

ರಾಜಾ— ನನ್ನ ಮನಸ್ಸಿಗೂ ಹಾಗೇ ಎನಿಸುವದು. ಏಕೆಂದರೆ, ಅವಳು ಹೋಗುವಾಗ—

ಅವಳ ದೇಹವು ಅವಳ ಅಂಕಿತದಲ್ಲಿಲ್ಲದ್ದರಿಂದ ತನ್ನ ವಶದಲ್ಲಿದ್ದ ಮನಸ್ಸನ್ನು, ಕುಚಕಂಪನದಿಂದ ಸೂಚಿಸಲ್ಪಟ್ಟ ಅವಳ ನಿಟ್ಟುಸುರಿನ ಮುಖಾಂತರ ನನ್ನಲ್ಲಿಟ್ಟುಹೋದಳೋ ಏನೊ ಎಂದೆನಿಸುವದು ॥ ೧೯ ॥

ವಿದೂಷಕ — (ತನ್ನಲ್ಲಿಯೇ) ಈ ವೇಳೆಗೆ ಮಹಾರಾಜನು ಭೂರ್ಜಪತ್ರದ ಹೆಸರನ್ನೆಲ್ಲಿ ಎತ್ತುವನೋ ಎಂದು ನನ್ನ ಹೃದಯವು ಗಾಬರಿಯಿಂದ ನಡುಗುತ್ತಿರುವದು.

ರಾಜಾ— ಮಿತ್ರನೆ, ನೊಂದ ನನ್ನ ಮನಸ್ಸನ್ನೀಗ ಎಲ್ಲಿ ವಿನೋದವಡಿಸಲಿ? (ನೆನಪಿಗೆ ತಂದುಕೊಂಡು) ಆ ಭೂರ್ಜಪತ್ರವನ್ನಾದರೂ ತಾ

ವಿದೂಷಕ —(ವಿಷಾದವನ್ನು ನಟಿಸುವನು) ಅಯ್ಯೋ! ಅದು ಎಲ್ಲಿಯೂ ಕಾಣುವದಿಲ್ಲವಲ್ಲs! ಮಿತ್ರನೆ, ಆ ಭೂರ್ಜಪತ್ರವೂ ಕೂಡ ದೇವಲೋಕದ್ದೇ ಅದದ್ದರಿಂದ ಉರ್ವಶಿಯು ಹೋದ ಹಾದಿಯಿಂದಲೇ ಅದೂ ಹೋಗಿಬಿಟ್ಟಿತು.

ರಾಜಾ— ನಿನ್ನಂಥ ತಿಳಿಗೇಡಿಗಳು ಯಾವಾಗಲೂ ಹೀಗೆ ಎಚ್ಚರಗೇಡಿಗಳೆ. ಆದರೂ ಅದನ್ನು ಹುಡುಕು ಅಂದೆ. ದ

ವಿದೂಷಕ– (ಎದ್ದು) ಅದು ಇಲ್ಲಿರಬಹುದು, ಅಲ್ಲಿರಬಹುದು.

(ಎನ್ನುತ್ತ, ಹುಡುಕುವಂತೆ ನಟಿಸುವನು)

(ततः प्रविशति काशीराजपुत्री सपरिवारा देवी)

देवी — हञ्जे निपुणिके सत्यं लतागृहं प्रविशन्नार्यमाणवकसहायो दृष्टस्त्वया आर्यपुत्रः । [हञ्जेणिउणिए सच्चं लदाघरं पविसन्तो अज्जमाणवअसहाओ दिठ्ठो तुए अज्जउत्तो ।]

निपुणिका – अलीकं किं मया भट्टिनी विज्ञापितपूर्वा । [अलीअं किं मए भट्टिनी विण्णविदपुव्वा ।]

देवी – तेन हि लतान्तरिता श्रोष्यामि तावदस्य विश्रब्धामन्त्रितानि यत्त्वया कथितं तत्सत्यं न वेति । [तेण हि लदन्तरिदा सुणिस्सं दाव से वीसद्धामन्तिदाणि जं तुए कहिदं तं सच्चं ण वत्ति ।]

निपुणिका – यद्देव्यै रोचते । [जं देवीए रुच्चदि ।]

देवी – (परिक्रम्य पुरस्तादवलोक्य च) निपुणिके किमेतज्जीर्णचीरमिव इतोमुखं दक्षिणमारुतेनानीयते । [णिउणिए किं एदं जिण्णचीरं विअ इदोमुहं दक्खिणमारुदेण आणीअदि ।]

नितुणिका - (विभाव्य) भट्टिनि परिवर्तनविभाविताक्षरं भूर्जपत्रं खल्वेतत् । हन्त भत्र्या एव नूपुरकोट्या लग्नम् । (गृहीत्वा) कथम् । वाच्यताम् । [भट्टिणि पडिवत्तण-विभाविदक्खरं भुज्जवत्तं खु एदं । हन्त भट्टिणीए एव्व णेउरकोडीए लग्गं । .... कहं । वाईअदु ।]

(ಬಳಿಕ ಕಾಶೀರಾಜಪುತ್ರಿಯಾದ ಮಹಾರಾಣಿಯು ತನ್ನ ಪರಿವಾರದೊಂದಿಗ ಪ್ರವೇಶಿಸುವಳು)

ದೇವಿ [ಮಹಾರಾಣಿಯು] — ಎಲ್ಲೈ ನಿಪುಣಿಕೆ, ಆರ್ಯಪುತ್ರನು ಪೂಜ್ಯ ಮಾಣವಕನೊಡನೆ ಲತಾಮಂಟಪದೊಳಗೆ ಹೋದದ್ದನ್ನು ನೀನು ಸತ್ಯವಾಗಿಯೂ ನೋಡಿದಿಯಾ?

ನಿಪುಣಿಕಾ — ನಾನು ಹೀಗೆ ಎಂದಾದರೂ ಮಹಾರಾಣಿಗೆ ಸುಳ್ಳು ಹೇಳಿರುವೆನೆ ?

ದೇವಿ— ಹಾಗಾದರೆ ಈ ಬಳ್ಳಿಯ ಮರೆಗೆ ನಿಂತು ಆರ್ಯಪುತ್ರನ ಗುಪ್ತಾಲೋಚನೆಯ ಮಾತುಗಳನ್ನು ಕೇಳುವೆನು ಅಂದರೆ, ನೀನು ಹೇಳಿದ್ದು ಸತ್ಯವೊ ಅಲ್ಲವೊ ಎನ್ನುವದು ಗೊತ್ತಾಗುವದು

ನಿಪುಣಿಕಾ— ಮಹಾರಾಣಿಯ ಇಷ್ಟವಿದ್ದಂತೆ ಆಗಲಿ

ದೇವಿ-- (ಪರಿಕ್ರಮಿಸಿ ಮುಂದೆ ನೋಡುತ್ತ) ನಿಪುಣಿಕೆ, ಇದೇನು? ಹರಕು ಅರಿವೆಯ ಚಿಂದೆಯಂತೆ ಕಾಣುವ ಇದು ದಕ್ಷಿಣದ ಗಾಳಿಯಿಂದ ಇತ್ತ ಕಡೆಗೇ ತೂರಿಕೊಂಡು ಬರುತ್ತಿರುವದು

ನಿಪುಣಿಕಾ — (ಪರೀಕ್ಷಿಸಿ) ಮಹಾರಾಣಿಯೆ, ಇದು ಭೂರ್ಜಪತ್ರವು. ಗಾಳಿಯಿಂದ ಇದು ತಿರುವಿಬೀಳಲು ಇದರ ಮೇಲಿನ ಅಕ್ಷರಗಳು ಕಾಣುವವು ಓಹೋ ! ಮಹಾರಾಣಿಯ ನೂಪುರದ ಕೊಂಡಿಗೆ ಸಿಕ್ಕಿಕೊಂಡಿತು. (ಅದನ್ನು ತೆಗೆದುಕೊಂಡು) ಏನು ! ಮಹಾರಾಣಿಯೇ ಇದನ್ನೋದಬೇಕು.

देवी – अनुवाचय तावदेतत् । यदि अविरुद्ध तत श्रोष्यामि । [अणुवाएहि दाव ण । जदि अविरुध्द तदो सुणिस्स ।]

निपुणिका – भट्टिनि तदेव कौलीन विजृम्भते । भर्तारमुद्दिश्य उर्वश्या काव्यबन्ध इति तर्कयामि । आर्यमाणवकप्रमादेनावयोर्हस्त गत इति । [भट्टिणि त एव्व कोलीण विजिम्भदि । भट्टारअ उद्दिशिअ उव्वसीए कव्वबन्धोत्ति तक्केमि ।]

देवी — तेन ह्यस्य गृहीतार्था भवामि । [तेण हि से गहिदत्था होमि ।]

(निपुणिका राज्ञा पूर्ववाचित वाचयति)

देवी -- अनेनैवोपहारेण तमप्सर कामुक पश्यामि । [इमिणा एव्व उवहारेण त अच्छरायुअ पेक्खामि ।] (इति परिजनसहिता लतागृह परिक्रामति)

विदूषक -भो वयस्य किमेतत्पत्रवनवशगामि प्रमदवनसमीपगतक्रीडापर्वतपर्यन्ते दृश्यते । [भो वअस्स कि एद पत्तणवसगामि पमदवणसमीवगदकीलापव्वदपज्जन्ते दोसदि ।]

राजा – (उत्थाय) भगवन् वसन्तप्रिय दक्षिणवायो

वासार्थ हर सभृत सुरभिणा पौष्प रजो वीरुधा
कि कार्य भवतो हृतेन दयितास्नेहस्वहस्तेन मे ।

ದೇವಿ --; ಮೊದಲು ನೀನು ನಿನ್ನ ಮನಸ್ಸಿನಲ್ಲಿ ಓದು. ಆಕ್ಷೇಪಾರ್ಹವಿಲ್ಲದಿದ್ದರೆ ನಾನು ಕೇಳುವೆನು

ನಿಪುಣಿಕಾ- ಮಹಾರಾಣಿಯೆ, ಇದು ಅದೇ ನಿಂದಾಸ್ಪದವಾದ ಮಾತನ್ನೇ ಬಲಪಡಿಸುವದು ಇದು, ಉರ್ವಶಿಯು ಮಹಾರಾಜನನ್ನುದ್ದೇಶಿಸಿ ಬರೆದ ಪದ್ಯವಿರಬೇಕೆಂದು ನನ್ನ ಊಹೆ ಆರ್ಯ ಮಾಣವಕನ ಪ್ರಮಾದದಿಂದ [ಎಲ್ಲಿಯೋ ಕೆಳಗೆ ಬಿದ್ದು] ಈಗ ನಮ್ಮ ಕೈಸೇರಿದ.

ದೇವಿ -- ಹಾಗಿದ್ದರೆ ಓದು, ಅದರಲ್ಲಿಯ ವಿಷಯವನ್ನು ತಿಳಿದುಕೊಳ್ಳುವೆನು.

(ರಾಜನು ಹಿಂದೆ ಓದಿದ್ದನ್ನೇ ನಿಪುಣಿಕೆಯು ಓದುವಳು)

ದೇವಿ -- ಈ ಕಾಣಿಕೆಯನ್ನೇ ತೆಗೆದುಕೊಂಡು ಅಪ್ಸರೆಯನ್ನು ಕಾಮಿಸಿದ ಆರ್ಯಪುತ್ರನನ್ನು ಕಾಣುವೆನು

(ಎಂದು ತನ್ನ ಪರಿವಾರದೊಂದಿಗೆ ಲತಾಮಂಟಪದ ಹತ್ತಿರ ಬರುವಳು.)

ವಿದೂಷಕ -- ಎಲೈ ಮಿತ್ರನೆ, ಇದೇನು ಕಾಣುವದು ? ಪ್ರಮದವನದ ಹತ್ತಿರ-ವಿರುವ ಈ ಕ್ರೀಡಾಪರ್ವತದ ಮೇಲೆ ಗಾಳಿಯಿಂದ ಹಾರಾಡುತ್ತಿರುವದು ?

ರಾಜಾ — (ಎದ್ದುನಿಂತು) ಎಲೈ ವಸಂತ ಮಿತ್ರನಾದ ಮಲಯ ಮಾರುತವೆ ? ಪರಿಮಳದ ಸಲುವಾಗಿ, ಈ ವಸಂತಮಾಸವು ಕೂಡಿಹಾಕಿದ ಹೂವುಗಳ ಪರಾಗವನ್ನು ತೆಗೆದುಕೊಂಡು ಹೋಗು, ನನ್ನಿನಿಯಳ ಈ ಪ್ರೇಮಪತ್ರವನ್ನು ಅಪಹರಿಸಿಕೊಂಡು

जानीते हि मनोविनोदनफलैरेवविधैर्धारित
कामार्त जनमञ्जना प्रति भवानालक्षितप्रार्थन ॥ २० ॥

निपुणिका – भट्टिनि एतस्यैवान्वेषणा वर्तते । [भट्टिणि एदस्स एव्व अण्णेसणा वट्टदि ।]

देवी – प्रेक्षे । [पेक्खामि ।]

विदूषक – भो म्लायमानकेसरच्छविना मयूरपिच्छेन विप्रलब्धोऽस्मि । [भो मिलाअमाणकेसरच्छविणा मोरपिच्छेण विप्पलध्धो ह्मि ।]

राजा – सर्वथा हतोऽस्मि मन्दभाग्य ।

देवी – (सहसोपसृत्य) आर्यपुत्र अलमावेगेन । एतत्तद्भूर्जपत्रम् । [अज्जउत्त अल आवेएण । एद त भुज्जवत्त ।]

राजा – (ससम्भ्रमम्) अये देवी । स्वगत देव्यै ।

देवी – दुरागतमिदानी सवृतम् । [दुरागद दाणि सवुत्त ।]

राजा – (जनान्तिकम्) वयस्य किमत्र प्रतिविधेयम् ।

विदूषक – (जनान्तिकम्) लोत्रेण गृहीतस्य कुम्भीलकस्य अस्ति वा प्रतिवचनम् । [लोत्तेण गहिदस्स कुम्भिलअस्स अत्थि वा पडिवअण ।]

ಹೋಗುವದರಿಂದ ನಿನಗೇನು ಪ್ರಯೋಜನ ? ಏಕೆಂದರೆ ನನ್ನಂಥ ಕಾಮಪೀಡಿತರಿಗೆ ಅವರ ನೊಂದಮನಸ್ಸಿಗೆ, ಸ್ವಲ್ಪಾದರೂ ನೆಮ್ಮದಿಯನ್ನುಂಟುಮಾಡುವ ಇಂಥ ವಸ್ತುಗಳೇ, ಜೀವಾಳ ವೆಂಬುದನ್ನು, ಅಂಜನೆಯನ್ನು ಪ್ರೀತಿಸಿದ ನೀನು ಬಲ್ಲೆ ॥ ೨೦ ॥

ನಿಪುಣಿಕಾ— ಇದರ ಸಲುವಾಗಿಯೇ ಈಗ ಶೋಧನಡದಿದೆ

ದೇವೀ —ನಾನು ನೋಡುತ್ತಿರುವೆನು.

ವಿದೂಷಕ—ಬಾಡಿದ ಕೇಸರವುಷ್ಪದಂತೆ ಕಾಣುವ ಈ ನವಿಲುಗರಿಯನ್ನು ನೋಡಿ ನಾನು ಮೋಸಹೋದೆನು

ರಾಜಾ— ದುರ್ಭಾಗ್ಯನಾದ ನನಗೆ ಎಲ್ಲ ವಿಧದಿಂದಲೂ ನಿರಾಶೆ ದುಃಖ.

ದೇವೀ— (ಒಮ್ಮೆಲೆ ಸಮೀಪಕ್ಕೆ ಬಂದು) ಆರ್ಯಪುತ್ರನೆ, ಆತುರನಾಗಬೇಡ ಇದೊ, ಆ ಭೂರ್ಜಪತ್ರವು.

ರಾಜಾ— (ಗಾಬರಿಯಿಂದ) ಏನು! ಮಹಾರಾಣಿ! ಮಹಾರಾಣಿಗೆ ಸ್ವಾಗತವು.

ದೇವೀ—ಆದರೀಗದು 'ದುರಾಗತ' ವಾಯಿತು. [ಅಂದರೆ ನನ್ನ ಈ ಆಗಮನದಿಂದ ನಿನಗೆ ಸುಖವಾಗದೆ ದುಃಖವೇ ಆಯಿತು.]

ರಾಜಾ— (ಮರೆಯಲ್ಲಿ ವಿದೂಷಕನನ್ನುದ್ದೇಶಿಸಿ) ಗೆಳೆಯನೆ, ಈಗೇನು ಮಾಡಬೇಕು ?

ವಿದೂಷಕ — (ಮರೆಯಲ್ಲಿ–ರಾಜನನ್ನುದ್ದೇಶಿಸಿ) ಕಳವಿನ ಮಾಲುಸಹಿತ ಸಿಕ್ಕ [Caught red–handed] ಕಳ್ಳನೇನು ಉತ್ತರಕೊಡಬಲ್ಲ ?

राजा – (अपवार्य) मूढ नाय परिहासकाल । (प्रकाशम्) देवि नेद मया मृग्यते। तत्खलु मन्त्रपत्र यदन्वेषणाय ममायमारम्भ. ।

देवी — युज्यत आत्मन सौभाग्य प्रच्छादयितुम् । [जुज्जदि अत्तणो सोहग्ग पच्छादेदु ।]

विदूषकः – भवति त्वरयास्य भोजन येन पित्तोपशमनेन स्वस्थो भवति । [भोदि तुवरेहि से भोअण जेण पित्तोवसमणेण सुत्थो होदि ।

देवी – निपुणिके शोभन खलु आश्वासित प्रियवयस्यो ब्राह्मणेन । किमन्यत् । अन्नचिन्तायामावेशित. प्रिय खिद्यते । [णिउणिए सोहण खु आसासिदो पिवअस्सो बह्मणेण । किं अण्ण , अण्णचिन्ताए आवेसिदो पिओ खिज्जदि ।]

विदूषक भवति ननु पश्य आश्वासित पिशाचोऽपि भोजनेन । [भोदि ण पेख्ख आसासिदो पिसाचोयि भोअणेण ।]

राजा – मूर्ख बलादपराधिन मा प्रतिपादयसि ।

देवी – नास्ति भवतोऽपराध । अहमेवात्रापराद्धा या प्रतिकूलदर्शना भूत्वा अग्रतस्ते तिष्ठामि । इतोऽह गमिष्यामि । [णत्थि भवदो अवराहो । अह एव्व एत्थ अवरध्दा । जा पडिऊलदसणा भविअ अग्गदो दे चिट्ठामि । इदो अह गमिस्स ।]

(कोप नाटयित्वा प्रस्थिता)

ರಾಜಾ — (ಮರೆಯಲ್ಲಿ) ಮೂರ್ಖನೆ, ಇದು ಪರಿಹಾಸ ಮಾಡತಕ್ಕ ಸಮಯವಲ್ಲ. (ಪ್ರಕಾಶವಾಗಿ) ಮಹಾರಾಣಿಯೆ, ನಾನು ಇದನ್ನು [ಈ ಭೂರ್ಜಪತ್ರವನ್ನು] ಹುಡುಕುತ್ತಿದ್ದಿಲ್ಲ ಒಂದು ಬಹಳೇ ಮಹತ್ವವಾದ ರಾಜಕೀಯ ಪತ್ರವನ್ನು ಹುಡುಕುತ್ತಿದ್ದನು.

ದೇವೀ — ನಿನ್ನ ಅದೃಷ್ಟವನ್ನು ನೀನು ಹೀಗೆ ಬಚ್ಚಿಡುವದು ಯುಕ್ತವೆ ?

ವಿದೂಷಕ — ಪೂಜ್ಯಳೆ, ಇವನಿಗೆ ಬೇಗ ಊಟಮಾಡಿಸು ಅಂದರೆ, ಪಿತ್ತವು ಶಾಂತವಾಗಿ ಇವನು ಸ್ವಸ್ಥನಾಗುವನು.

ದೇವೀ — ನಿಪುಣಿಕೆ, ಈ ಬ್ರಾಹ್ಮಣನು ತನ್ನ ಗೆಳೆಯನಿಗೆ ಒಳ್ಳೆ ಸಮಾಧಾನ ಹೇಳಿದನು. ಮತ್ತೇನು, ಕಾಮಪೀಡಿತನು ಅನ್ನದ ವಿಚಾರದಿಂದ ಬಹಳ ಕಂಗಾಲಾಗಿರುವನು

ವಿದೂಷಕ — ಅವ್ವಾ, ನೋಡು ಆಹಾರದಿಂದ ಪಿಶಾಚಿಯನ್ನೂ ಸಮಾಧಾನ ಗೊಳಿಸಬಹುದು

ರಾಜಾ — ಛೀ ಮೂರ್ಖಾ! ನೀನು ಬಲತ್ಕಾರದಿಂದ ನನ್ನ ಮೇಲೆ ಈ ಅಪರಾಧ ವನ್ನು ಹೇರುತ್ತಿರುವಿ.

ದೇವೀ–ಇದು ನಿನ್ನ ಅಪರಾಧವಲ್ಲ. ನಿನ್ನ ಇಚ್ಛೆಯ ವಿರುದ್ಧವಾಗಿ ನಿನ್ನೆದುರಿಗೆ ಬಂದು ನಿಂತಕೊಂಡದ್ದು ನನ್ನದೇ ಅಪರಾಧವು. ಇಗೊ, ನಾನಿಲ್ಲಿಂದ ಹೋಗುವೆನು.

(ಎಂದು ಕೋಪದಿಂದ ಹೊರಡುವಳು)

राजा — अपराधी नामाह् प्रसीद रम्भोरु विरम संरम्भात् ।
सेव्यो जनश्च कुपितः कथं नु दासो निरपराधः ॥ २१ ॥
(इति पादयोः पतति)

देवी – (आत्मगतम्) मा खलु लघुहृदया अहमनुनयं बहु मन्ये । किं तु अदाक्षिण्य-कृतात्पश्चात्तापाद्बिभेमि । [मा खु लहुहिअआ अहं अणुणअं बहु मण्णे । किं दु अदक्खिण-किदस्स पच्छादावस्स भाएमि ।] (राजानमपहाय सपरिवारा निष्क्रान्ता)

विदूषक – प्रावृण्नदीव अप्रसन्ना गता देवी । ननूत्तिष्ठ । [पाउसणदी विअ अप्पसण्णा गदा देवी । ण उट्ठेहि ।]

राजा – (उत्थाय) वयस्य नेदमनुपपन्नम् । पश्य
प्रियवचनकृतोऽपि योषितां दयितजनानुनयो रसादृते ।
प्रविशति हृदयं न तद्विदां मणिरिव कृत्रिमरागयोजितः ॥ २२ ॥

विदूषक – अनुकूलमत्रभवत एतत् । न खल्वक्षिदुःखितोऽभिमुखे दीपशिखां सहते । [अणुऊलं एत्थ भवदो एदं । ण हु अक्खिदुक्खिदो अहिमुहे दीवसिहं सहेदि ।]

ರಾಜಾ — ಪ್ರಿಯೆ, ನಿಜವಾಗಿಯೂ ನಾನು ಅಪರಾಧಿಯು. ಕ್ಷಮಿಸು ಸಿಟ್ಟಿಗೆಳದಿರು ನೇವೆಮಾಡಿಸಿಕೊಳ್ಳುವವರೇ ಸಿಟ್ಟಿಗೆದ್ದರೆ ಸೇವಕನು ನಿರಪರಾಧಿಯಾಗುವ ಬಗೆ ಹೇಗೆ ? ॥ ೨೧ ॥ (ಎಂದು ಪಾದಗಳಿಗೆರಗುವನು)

ದೇವೀ - (ತನ್ನಲ್ಲಿಯೇ)
ಇವನೀ ಬಿನ್ನಹವನ್ನು ಮನ್ನಿಸುವಷ್ಟು ಅಲ್ಪ ಮನಸ್ಸಿನವಳು ನಾನಾಗುವದು ಬೇಡ ವಾದರೂ ನನ್ನೀ ನಿರ್ದಾಕ್ಷಿಣ್ಯದಿಂದ ಉಂಟಾದ ಪಶ್ಚಾತ್ತಾಪಕ್ಕೆ ಹೆದರುವೆನು
(ಅರಸನನ್ನು ಅಲ್ಲಿಯೇ ಬಿಟ್ಟು ತನ್ನ ಪರಿವಾರದೊಂದಿಗೆ ಹೋಗುವಳು)

ವಿದೂಷಕ— ಮಹಾರಾಜನೆ, ಮಳೆಗಾಲದಲ್ಲಿಯ ಹೊಳೆಯಂತೆ ಮಹಾರಾಣಿಯು ಪ್ರಸನ್ನಳಾಗದೇ ಹಾಗೇ ಹೊರಟುಹೋದಳು ಏಳೀಗ

ರಾಜಾ — (ಎದ್ದು) ಇದೇನೂ ಅಯೋಗ್ಯವಲ್ಲ ನೋಡು—
ಕೃತ್ರಿಮಬಣ್ಣಬಳಿದ ರತ್ನವು ರತ್ನಪರೀಕ್ಷಕರಿಗೆ ಹೃದಯಂಗಮವೆನಿಸದಂತೆ ಮನಸ್ಸಿನಲ್ಲಿ ನಿಜವಾದ ಒಲವಿಲ್ಲದೆ ಪ್ರಿಯರು ಎಷ್ಟೇ ಮಧುರಾಕ್ಷರಗಳಿಂದ ತಮ್ಮ ಪ್ರಿಯತಮೆಯರನ್ನು ಒಲಿಸಲಿಕ್ಕೆ ಪ್ರಯತ್ನಸಿದರೂ ಕೂಡ ಅದು ಅವರ [ಪ್ರಿಯರ] ಕೃತ್ರಿಮಪ್ರೇಮವನ್ನು ಬಲ್ಲ ಆ ಸ್ತ್ರೀಯರನ್ನು ತಣಿಸಲಾರದು. ॥ ೨೨ ॥

ವಿದೂಷಕ -- ಇದು [ರಾಣಿಯು ಹೀಗೆ ಹೋದದ್ದು] ನಿನಗೆ ಅನುಕೂಲವೇ. ಕಣ್ಣುಬೇನೆ ಬಂದವನು ತನ್ನೆದುರಿಗೆ ದೀಪದ ಉರಿಯನ್ನು ಸಹಿಸಲಾರನು.

राजा – मा मैवम् । उर्वशीगतमनसोऽपि मे स एव देव्या बहुमान । किं तु प्रणिपातलङ्घनादहमस्या धैर्यमवलम्बिष्ये ।

विदूषक – तिष्ठतु तावद्भवतो धीरता । बुभुक्षितस्य ब्राह्मणस्य जीवितमवलम्बता भवान् । समय खलु स्नानभोजन सेवितुम् । [चिट्ठदु दाव भवदो धीरदा । बुभुक्खिदस्स-बह्मणस्स जीविद अवलम्बदु भव । समओ खु ण्हाणभोअण सेविदु ।]

राजा – (ऊर्ध्वमवलोक्य) गतमर्धं दिवसस्य ।

उष्णालुः शिशिरे निषीदति तरोर्मूलालवाले शिखी
निर्भिद्योपरि कर्णिकारमुकुलान्याशेरते षट्पदा ।
तप्त वारि विहाय तीरनलिनी कारण्डव सेवते
क्रीडावेश्मनि चैष पञ्जरशुक· क्लान्तो जल याचते ।। २३ ।।

(इति निष्क्रान्तौ)

इति द्वितीयोऽङ्क ।

ರಾಜಾ— ಹಾಗಲ್ಲ ನಾನು ಈಗ ಉರ್ವಶಿಯಲ್ಲಿ ಅನುರಕ್ತನಾಗಿದ್ದರೂ ರಾಣಿಯ ವಿಷಯವಾಗಿ ಮೊದಲಿನಂತೆಯೆ ಆದರವಿದೆ ಆದರೆ ನಾನು ಅಂಗಲಾಚಿ ಬೇಡಿಕೊಂಡರೂ ಅದನ್ನು ಲೆಕ್ಕಿಸದೆ ರಾಣಿಯು ಹೊರಟುಹೋದದ್ದರಿಂದ ನಾನೀಗ ಅವಳ ವಿಷಯವಾಗಿ ಬಿಗುವಿನಿಂದಿರುವೆನು.

ವಿದೂಷಕ— ನಿನ್ನ ಬಿಗುವು ಹಾಳಾಗಲಿ, ಹಸಿವೆಯಿಂದ ಬಳಲುತ್ತಿರುವ ಈ ಬಡ ಬ್ರಾಹ್ಮಣನ [ನನ್ನ] ಪ್ರಾಣವನ್ನು ಉಳಿಸು ಸ್ನಾನಮಾಡಿ ಊಟಮಾಡುವ ವೇಳೆ ಯಾಯಿತು

ರಾಜಾ – (ಮೇಲೆ ನೋಡಿ) ಒಹೋ! ಈಗಾಗಲೆ ಮಧ್ಯಾಹ್ನವಾಯಿತಲ್ಲ !

[ಶಬ್ದಶಃ— ದಿನದ ಅರ್ಧಭಾಗವು ಗತಿಸಿಹೋಯಿತಲ್ಲ !] ಈಗ— ಮಧ್ಯಾಹ್ನದ ಈ ಕಡುಬಿಸಿಲಿನ ಬೇಗೆಯನ್ನು ತಾಳಲಾರದೆ, ನವಿಲು ಮರದಡಿಯಲ್ಲಿಯ ತಂಪಾದ ಮಡಿಯಲ್ಲಿ ಕುಳಿತುಕೊಂಡಿದೆ, ಇತ್ತ, ಈ ಭ್ರಮರಗಳು ಕರ್ಣಿಕಾರ ಬೆಟ್ಟದಾವರೆ [ಪುಷ್ಪ] ಗಳ ಮೊಗ್ಗೆಗಳನ್ನು ತುದಿಯಲ್ಲಿ ಕೊರೆದು ಅವುಗಳೊಳಗೆ ಹೋಗಿ ಸ್ವಸ್ಥವಾಗಿ ಮಲಗಿವೆ. ಇತ್ತ, ಈ ಕಾರಂಡವ ಪಕ್ಷಿಯು (ಬಾತುಕೋಳಿ) ಕೊಳದಲ್ಲಿಯ ಕಾದ ನೀರನ್ನು ಬಿಟ್ಟು ದಂಡೆಯ ಮೇಲಿನ ತಾವರೆಯ ಬಳ್ಳಿಯ ಆಶ್ರಯ ಪಡೆದಿರುವದು, ಮತ್ತು ಕ್ರೀಡಾಗಾರದಲ್ಲಿದ್ದ ಈ ಪಂಜರದೊಳಗಿನ ಗಿಳಿಯು ಬಾಯಾರಿ ದೈನ್ಯದಿಂದ ನೀರನ್ನು ಬೇಡುತ್ತಿದೆ ॥ ೨೩ ॥

(ಎಂದು ಹೊರಟು ಹೋಗುವರು)

ಇಲ್ಲಿಗೆ ಎರಡನೆಯ ಅಂಕು ಮುಗಿದುದು.

तृतीयोऽङ्कः ।

(तत प्रविशतो भरतशिष्यौ)

प्रथम – सखे पैलव महेन्द्रसदन गच्छतोपाध्यायेन त्वमासन प्रतिग्राहित । अहमग्निशरणरक्षार्थं स्थापित । अत खलु पृच्छामि । अपि गुरो प्रयोगेण दिव्या परिषदाराधिता ।

द्वितीय – गालव न जाने आराधिता न वेति । तस्मिन्पुन सरस्वतीकृतकाव्यबन्धे लक्ष्मीस्वयवरे तेषु तेषु रसान्तरेषु तन्मयी असीत् । कि तु – [गालव ण आणे आराहिदा ण वत्ति । तस्सि उण सरस्सईकिदकव्वबन्धे लच्छीसअवरे तेसु तेसु रसतरेसु तम्मआ आसि । कि तु–]

प्रथम – सदोपावकाश इवे ते वाक्यशेष ।

द्वितीय – आम । तस्मिन्नुर्वश्या वचन प्रमादस्खलितमासीत् । [आम तहि उव्वसीए वअण पमादस्खलिद आसि ।]

प्रथम — कथमिव ।

ಅಂಕ ೩.

(ಬಳಿಕ ಭರತಮುನಿಯ ಇಬ್ಬರು ಶಿಷ್ಯರು ಪ್ರವೇಶಿಸುವರು

ಮೊದಲನೆಯವ — ಎಲೈ ಗಳೆಯ ಪೇಲವನೆ, ನಮ್ಮ ಗುರುಗಳು ಮಹೇಂದ್ರ ಭವನಕ್ಕೆ ಹೋಗುವಾಗ ತಮ್ಮ ಆಸನವನ್ನು ತೆಗೆದುಕೊಂಡು ಬರಲು ನಿನಗೆ ಹೇಳಿದರು ನನ್ನನ್ನು ಅಗ್ನಿಶಾಲೆಯ ರಕ್ಷಣೆಯ ಸಲುವಾಗಿ ಇಲ್ಲಿಯೇ ಇರಿಸಿದರು ಆದ್ದರಿಂದಲೇ ಕೇಳುವೆನು ನಮ್ಮ ಗುರುಗಳು ಆಡಿಸಿದ ಆ ನಾಟಕದ ಪ್ರಯೋಗದಿಂದ ದೇವಸಭೆಯಲ್ಲ ಮೆಚ್ಚಿತಲ್ಲವೆ ?

ಎರಡನೆಯವ — ಗೆಳೆಯ ಗಾಲವನೆ, ದೇವಸಭೆಯು ಮೆಚ್ಚಿತೊ ಅಥವಾ ಇಲ್ಲವೊ – ಎಂಬುದನ್ನು ನಾನು ಹೇಳಲಾರೆ. ಆದರೆ ಇಡೀ ಪ್ರೇಕ್ಷಕ ವರ್ಗವು ಸರಸ್ವತಿಯಿಂದ ರಚಿತವಾದ ಆ 'ಲಕ್ಷ್ಮೀಸ್ವಯಂವರ' ವೆಂಬ ನಾಟಕದಲ್ಲಿಯ ವಿವಿಧ ರಸಗಳಲ್ಲಿ ತನ್ಮಯವಾಗಿತ್ತು. ಆದರೆ.. ...

ಮೊದಲನೆಯವ — ನಿನ್ನ ಮಾತಿನ ಉಳಿದಭಾಗವು ದೋಷಯುಕ್ತವಾಗಿದ್ದಂತೆ ತೋರುತ್ತದೆ.

ಎರಡನೆಯವ — ಹೌದು. ಆ ನಾಟಕದಲ್ಲಿ ಅಜಾಗರೂಕತೆಯಿಂದ ಉರ್ವಶಿಯು ಮಾತಿನಲ್ಲಿ ಒಂದು ತಪ್ಪಾಯಿತು.

ಮೊದಲನೆಯವ — ಅದಾವುದು ?

द्वितीय — लक्ष्मीभूमिकाया वर्तमाना उर्वशी वारुणीभूमिकाया वर्तमानया मेनकया पृष्ठा। सखि समागता एते त्रैलोक्यसुपुरुषा सकेशवा लोकपाला । कतमस्मिस्ते भावाभिनिवेश इति। [लच्छीभूमिआए वट्टमाणा उव्वसी वारुणीभूमिआए वट्टमाणाए मेणआए पुच्छिदा । सहि समाअदा एदे तेलोक्कसुपुरिसा सकेसवा लोअवाला । कदमस्सि दे भावाहिणिवेसोत्ति ।]

प्रथमः– ततस्तत ।

द्वितीय – ततस्तया पुरुषोत्तम इति भणितव्ये पुरूरवसीति निर्गता वाणी । [तदो ताए पुरिसोत्तमेत्ति भणिदव्वे पुरूरवेत्ति णिग्गदा वाणी ।]

प्रथम - भवितव्यतानुविधायीनीन्द्रियाणि । न खलु तामभिक्रुद्धो गुरु ।

द्वितीय – सा खलु शप्ता उपाध्यायेन । महेन्द्रेण पुनरनुगृहीता । [सा खु सत्ता उवज्झाएण । महिन्देण उण अणुगहिदा ।]

प्रथम – कथमिव ।

द्वितीयः -- येन ममोपदेशस्त्वया लङ्घितस्तेन न ते दिव्य स्थान भविष्यतीति उपाध्यायस्य शाप । महेन्द्रेण पुन प्रेक्षणावसाने लज्जावनतमुखी भणिता यस्मिन्बद्धभावासि तस्य मे रणसहायस्य राजर्ष प्रियमत्रकरणीयम् ।

ಎರಡನೆಯು — [ಆ ನಾಟಕದಲ್ಲಿ] ವಾರುಣಿಯ ಪಾತ್ರವನ್ನು ವಹಿಸಿದ್ದ ಮೇನಕೆಯು ಲಕ್ಷ್ಮಿಯ ಪಾತ್ರವನ್ನು ವಹಿಸಿದ್ದ ಉರ್ವಶಿಯನ್ನು ಕುರಿತು 'ಎಲೈ ಸಖಿಯೆ, ಮೂರೂ ಲೋಕಗಳಲ್ಲಿಯ ಎಲ್ಲ ಶ್ರೇಷ್ಠ ಪುರುಷರೂ ಎಲ್ಲ ಲೋಕಪಾಲಕರೂ, ನಾರಾಯಣನೂ, ಇಲ್ಲಿ ಸೇರಿರುವರು. ಇವರೊಳಗೆ ಯಾರಲ್ಲಿ ನಿನ್ನ ಅನುರಾಗವಿದೆ ? ಎಂದು ಕೇಳಿದಳು

ಮೊದಲನೆಯುವ — ಮುಂದೇನಾಯಿತು?

ಎರಡನೆಯುವ — ಆಗ ಉರ್ವಶಿಯು 'ಪುರುಷೋತ್ತಮನಲ್ಲಿ' ಎಂದು ಹೇಳಬೇಕಾಗಿತ್ತು. ಆದರೆ! ತಪ್ಪಿ 'ಪುರೂರವನಲ್ಲಿ' ಎಂಬ ಶಬ್ದವು ಆವಳ ಬಾಯಿಂದ ಹೊರಬಿದ್ದಿತು

ಮೊದಲನೆಯು — ಮಾನವನ ಇಂದ್ರಿಯಗಳೂ ಕೂಡ ದೈವವನ್ನೇ ಅವಲಂಬಿಸಿರುತ್ತವೆ [ಅಂದರೆ-- ಇಂದ್ರಿಯಗಳೂ ಮುಂದಿನ ಆಗುಹೋಗುಗಳಂತೆಯೇ ನಡೆಯುತ್ತವೆ] ಗುರುಗಳು ಅವಳ ಮೇಲೆ ಕೋಪಿಸಿಕೊಳ್ಳಲಿಲ್ಲವೆ ?

ಎರಡನೆಯುವ – ಗುರುಗಳು ಅವಳಿಗೆ ಶಾಪಕೊಟ್ಟರು. ಆದರೂ ಮಹೇಂದ್ರನು ಅವಳ ಮೇಲೆ ಮತ್ತೆ ಅನುಗ್ರಹ ಮಾಡಿದನು.

ಮೊದಲನೆಯುವ -- ಅದು ಹೇಗೆ ?

ಎರಡನೆಯುವ – 'ನಾನು ಹೇಳಿಕೊಟ್ಟಿದ್ದನ್ನು ನೀನು ತಪ್ಪಿದ್ದರಿಂದ ನಿನಗೆ ಇನ್ನ ಮೇಲೆ ದೇವಲೋಕದಲ್ಲಿಯ ವಾಸವು ತಪ್ಪಲಿ' ಎಂದು ಗುರುಗಳು ಶಾಪಕೊಟ್ಟರು. ಆದರೆ! ನಾಟಕದ ಪ್ರಯೋಗವು ಮುಗಿದ ಮೇಲೆ ನಾಚಿಕೆಯಿಂದ ಮುಖಕೆಳಗೆ-

सा त्व यथाकाम पुरूरवसमुपतिष्ठस्व यावत्स त्वयि दृष्टसतानो भवेदिति । [जेण मम उवदेसो तुए लङ्घिदो तेण ण दे दिव्व ठाण हविस्सदित्ति उवज्झाअस्स सावो । महिन्देण उण पेक्खणावसाणे लज्जावणदमुही भणिदा जस्सि बद्धभावा मि तस्स मे रणसहाअस्स राएसिणो पिअ एथ्थ करणिज्ज । सा तुम जहाकाम पुरूरवस उवचिट्ठ जाव सो तुइ दिट्ठसताणो भोदित्ति ।]

प्रथम — सदृश पुरुषान्तरविदो महेन्द्रस्य ।

द्वितीयः — (सूर्यमवलोक्य) कथाप्रसङ्गेनास्माभिरपराद्धा अभिषेकवेला खलूपाध्यायस्य । तदेह्यस्य पार्श्वपरिवर्तिनौ भवाव । [कधापसङ्गेण अम्हेहि अवरध्धा अहिसेअवेला खु उवज्झाअस्स । ता एहि से पासपरिवत्तिणो होम ।] (इति निष्क्रातौ)

मिश्रविष्कम्भक ।

(तत प्रविशति कञ्चुकी)

कञ्चुकी — सर्व कल्ये वयसि यतते लब्धुमर्थान्कुटुम्बो
पश्चात्पुत्रैरपहृतभर कल्पते विश्रमाय ।

ಹಾಕಿಕೊಂಡು ನಿಂತಿದ್ದ ಉರ್ವಶಿಯನ್ನು ನೋಡಿ ಮಹೇಂದ್ರನು, ' ಎಲೈ ಉರ್ವಶೀ, ನೀನು ಯಾರಲ್ಲಿ ಅನುರಕ್ತಳಾಗಿರುವಿಯೋ ಆ ಪುರೂರವಮಹಾರಾಜನು ನನಗೆ ಯುದ್ಧದಲ್ಲಿ ಸಹಾಯಕನಾಗಿರುವನು ಆದ್ದರಿಂದ ನಾನು ಈ ವಿಷಯದಲ್ಲಿ ಅವನಿಗೆ ಹಿತವನ್ನು ಮಾಡಬೇಕು. ಆದ್ದರಿಂದ ಅವನಿಗೆ ನಿನ್ನಲ್ಲಿ ಹುಟ್ಟಿದ ಮಗನ ದರ್ಶನವು ಆಗುವವರೆಗೆ ನಿನ್ನಿಚ್ಛೆಯ ಮೇರೆಗೆ ಆ ಪುರೂರವನ ಸೇವೆಯನ್ನು ಮಾಡು ' ಎಂದು ಶಾಪಪರಿಹಾರದ ವರವನ್ನು ಕೊಟ್ಟನು.

ಮೊದಲನೆಯವ— ಬೇರೆಯವರ ಮನಸ್ಸಿನಲ್ಲಿಯ ಭಾವನೆಗಳನ್ನು ಬಲ್ಲ ಇಂದ್ರನಿಗೆ ಇದು ಒಪ್ಪುವದು.

ಎರಡನೆಯವ — (ಸೂರ್ಯನನ್ನು ನೋಡಿ) ಈ ಮಾತಿನ ಭರದಲ್ಲಿ ನಾವು ಗುರುಗಳ ಸ್ನಾನಮಾಡುವ ವೇಳೆಯಾದದ್ದನ್ನೇ ಮರೆತು ಬಿಟ್ಟೆವು ಆದ್ದರಿಂದ ಬಾ, ಹೋಗೋಣ. ಅವರ ಹತ್ತಿರವೇ ಇರೋಣ (ಎಂದು ಹೊರಟು ಹೋಗುವರು)

ಮಿಶ್ರವಿಷ್ಕಂಭಕವು ಮುಗಿಯಿತು

(ಬಳಿಕ ಕಂಚುಕಿಯು ಪ್ರವೇಶಿಸುವನು)

ಕಂಚುಕೀ — ಪ್ರತಿಯೊಬ್ಬ ಕುಟುಂಬಸ್ಥನು ತಾರುಣ್ಯದಲ್ಲಿ ಸಂಪತ್ತಿಯನ್ನು ಗಳಿಸಲು ಹೆಣಗುವರು. ಮುಂದೆ ಇಳಿವಯಸ್ಸಿನಲ್ಲಿ ಅವನ ಮಕ್ಕಳು ಅವನ ಮೇಲಿನ ಕುಟುಂಬದ ಭಾರವನ್ನು ಇಳಿಸಲು ಅವನು ವಿಶ್ರಾಂತಿಯನ್ನು ಪಡೆಯಲು ಅರ್ಹನಾಗು

अस्माकं तु प्रतिदिनमियं साधयन्ती प्रतिष्ठां
सेवाकारा परिणितिरहो स्त्रीषु कष्टोऽधिकारः ॥ १ ॥

(परिक्रम्य) आदिष्टोऽस्मि सनियमया काशिराजपुत्र्या व्रतसंपादनार्थं मया मानमुत्सृज्य निपुणिकामुखेन पूर्वं याचितो महाराजः । तदेव मद्वचनाद्विज्ञापय इति । यावदिदानीमवसितसंध्याजाप्यं महाराजं पश्यामि । (परिक्रम्यावलोक्य च) रमणीयः खलु दिवसावसानवृत्तान्तो राजवेश्मनि । इह हि

उत्कीर्णा इव वासयष्टिषु निशानिद्रालसा बर्हिणो
धूपैर्जालविनिःसृतैर्वडभयः संदिग्धपारावताः ।
आचारप्रयतः सपुष्पबलिषु स्थानेषु चार्चिष्मतीः
संध्यामङ्गलदीपिका विभजते शुद्धान्तवृद्धाजनः ॥ २ ॥

ವನು ಆದರೆ ನಮ್ಮ ಈ ಮುಪ್ಪು ಮಾತ್ರ ದಿನದಿವಕ್ಕೆ ನಮ್ಮ ಸ್ಥಾನವನ್ನು ಭದ್ರಪಡಿಸುತ್ತ ಸೇವೆಯ ರೂಪವನ್ನೇ ತಾಳಿದೆ [ಅಂದರೆ ನಮಗೂ ಸೇವೆಗೂ ಕಡೆತನಕ ಗಂಟು] ಅಯ್ಯೋ ! ಸ್ತ್ರೀಯರನ್ನು ರಕ್ಷಿಸುವ [ಅಂತಃಪುರ ರಕ್ಷಣೆಯು] ಈ ಕೆಲಸವು ಬಹಳ ಕಷ್ಟವಾದುದ್ದು ॥ ೧ ॥

(ಸ್ವಲ್ಪ ತಿರುಗಾಡಿ) ವ್ರತವನ್ನಾಚರಿಸುತ್ತಿರುವ ಕಾಶೀರಾಜಪುತ್ರಿಯಾದ ನಮ್ಮ ಮಹಾರಾಣಿಯು ನನಗೆ, 'ನಾನೀಗಾಗಲೆ ಕೋಪವನ್ನು ಬಿಟ್ಟು ನಿಪುಣಿಕೆಯ ಮುಖಾಂತರ ನನ್ನ ವ್ರತವನ್ನು ಪೂರ್ಣಗೊಳಿಸಲು ಮಹಾರಾಜನಿಗೆ ಬಿನ್ನವಿಸಿಕೊಂಡಿರುವೆನು ನೀನೀಗ ನಮಕ್ಷಮ ಹೋಗಿ ನನ್ನ ಪರವಾಗಿ ಮತ್ತೊಮ್ಮೆ ಮಹಾರಾಜನಿಗೆ ಅದೇ ವಿಜ್ಞಾಪನೆಯನ್ನು ಮಾಡು ' ಎಂದು ಆಜ್ಞಾಪಿಸಿದಳು ನಾನೀಗ ಸಾಯಂಕಾಲದ ಪ್ರಾರ್ಥನೆಗಳನ್ನು ಮುಗಿಸಿದ ಮಹಾರಾಜನನ್ನು ಭೆಟ್ಟಿಯಾಗುವೆನು. (ಅಲ್ಲಿಯೇ ತಿರುಗಾಡುತ್ತ ನೋಡಿ) ಈ ಅರಮನೆಯಲ್ಲಿ ಸಾಯಂಕಾಲದ ದೃಶ್ಯವು ಎಷ್ಟು ಚಂದ ಕಾಣುವದು! ಏಕೆಂದರೆ —

ರಾತ್ರಿಯಾದದ್ದರಿಂದ ನಿದ್ರೆಯಿಂದ ಉದಾಸೀನವಾದ ಈ ನವಿಲುಗಳು ಕೆತ್ತಿದ ಗೊಂಬೆಗಳಂತೆ, ತಮ್ಮ ಇಕ್ಕೆಯ ಕೋಲಿನ ಮೇಲೆ ಕುಳಿತುಕೊಂಡಿರುವವು ಅತ್ತ ಮೇಲೆ ಚಪ್ಪರದಲ್ಲಿ ಪಾರಿವಾಳಗಳು ಇದ್ದರೂ ಕೂಡ ಕಿಡಿಕೆಗಳೊಳಗಿಂದ ಹೊರಗೆ ಬರುತ್ತಿರುವ ಧೂಪದ ಹೊಗೆಯು ಅವುಗಳ ವಿಷಯಗಳಲ್ಲಿ ಶಂಕೆಯನ್ನು ಹುಟ್ಟಿಸುವದು, ಅಲ್ಲಿ. ತಮ್ಮ ಪಾಡಿಕೆಯ ಆಚಾರಗಳಲ್ಲಿ ಕುಶಲರಾದ ಅಂತಃಪುರದಲ್ಲಿಯ ವೃದ್ಧ ಸ್ತ್ರೀಯರು ಪೂಜಾ ಪುಷ್ಪಗಳನ್ನು ಪಸರಿಸಿರುವ ಆಯಾ ಸ್ಥಳಗಳಲ್ಲಿ ಬೆಳಗುವ ಸಂಜೆಯ ಮಂಗಲದೀಪಗಳನ್ನು ಇಡುತ್ತಿರುವರು ॥ ೨ ॥

(नेपथ्याभिमुख दृष्टवा) अये इत एव प्रस्थितो देव ।

परिजनवनिताकरार्पिताभि

परिवृत एष विभाति दीपिकाभि ।

गिरिरिव गतिमानपक्षलोपा-

दनुतटपुष्पितकर्णिकारयष्टि ॥ ३ ॥

यावदेनमवलोकनमार्गे स्थित प्रतिपालयामि ।

(तत प्रविशति यथानिर्दिष्टो राजा विदूषकश्च)

राजा — (आत्मगतम्)

कार्यान्तरितोत्कण्ठ दिन मया नीतमनतिकृच्छ्रेण ।

अविनोददीर्घयामा कथ नु रात्रिर्गमयितव्या ॥ ४ ॥

कञ्चुकी — (उपगम्य) जयतु जयतु देव । देवी विज्ञापयति मणिहर्म्यपृष्टे सूदर्शनश्चन्द्र । तत्र सनिहितेन देवेन प्रतिपालयितुमिच्छामि यावद्रोहिणीसयोग इति ।

(ಪರದೆಯ ಕಡೆಗೆ ನೋಡಿ) ಓಹೋ! ಮಹಾರಾಜನು ಇತ್ತಕಡೆಗೇ ಹೊರಟಿರುವನು—

ಪರಿಚಾರಿಕೆಯರ ಕೈಯಲ್ಲಿದ್ದ ದೀವಟಿಗೆಗಳಿಂದ ಸುತ್ತುವರಿಯಲ್ಪಟ್ಟ [ಅಂದರೆ, ಕೈಯಲ್ಲಿ ದೀವಟಿಗೆಗಳನ್ನು ಹಿಡಿದುಕೊಂಡು ಅರಸನ ಸುತ್ತಲೂ ಇರುವ ಪರಿಚಾರಿಕೆಯರ ಮಧ್ಯದಲ್ಲಿದ್ದ] ಈ ಮಹಾರಾಜನು, ಸುತ್ತಲೂ ಇಳುಕಲಿನಗುಂಟ ಬೆಳೆದ ಹೂಬಿಟ್ಟ ಕರ್ಣಿಕಾರ ಗಿಡಗಳಿಂದ ಕೂಡಿದ ಮತ್ತು ರೆಕ್ಕೆಗಳನ್ನು ಕತ್ತರಿಸಲ್ಪಡದೆ ಇದ್ದುದರಿಂದ ಚಲಿಸುವ ಪರ್ವತದಂತೆ ಕಾಣುವನು ॥ ೩ ॥

ಈಗ ಇವನಿಗೆ ಕಾಣುವಂತೆ ಇಲ್ಲಿ ನಿಂತುಕೊಂಡು ಅವನ ದಾರಿ ಕಾಯುವೆನು

(ಬಳಿಕ ಮೇಲೆ ನಿರ್ದೇಶಿಸಿದಂತೆ ಇದ್ದ ರಾಜನೂ ವಿದೂಷಕನೂ ಪ್ರವೇಶಿಸುವರು)

ರಾಜಾ — (ತನ್ನಲ್ಲಿಯೇ)

ಇತರ ರಾಜ್ಯ ಕೆಲಸಗಳಲ್ಲಿ ನನ್ನ ಉತ್ಕಂಠತೆಯನ್ನು ಮರೆತು ಹಗಲನ್ನೇನೋ ತೊಂದರೆಯಿಲ್ಲದೆ ಕಳೆದನು. ಆದರೆ! ಮನಸ್ಸಿಗ ವಿನೋದವಿಲ್ಲದ್ದರಿಂದ ಪ್ರತಿಯೊಂದು ಜಾವವು ಸುದೀರ್ಘವಾಗಿ ಕಾಣುವ ರಾತ್ರಿಯನ್ನು ಕಳೆಯುವ ಬಗೆ ಹೇಗೆ ? ॥ ೪ ॥

ಕಂಚುಕೀ— (ಅರಸನ ಬಳಿಗೆ ಬಂದು) ಮಹಾರಾಜನಿಗೆ ಜಯವಾಗಲಿ, ಜಯವಾಗಲಿ. ಪ್ರಭೋ, ' ಮಣಿಹರ್ಮ್ಯದ ಉಪ್ಪರಿಗೆಯ ಮೇಲೆ ಚಂದ್ರನು ಬಹಳ [ಅಂದವಾಗಿ] ಸ್ಪಷ್ಟವಾಗಿ ಕಾಣುವನು. ಮಹಾರಾಜರ ಜೊತೆಯಲ್ಲಿದ್ದುಕೊಂಡು, ಚಂದ್ರನು ರೋಹಿಣಿಯ ಸಂಯೋಗದಲ್ಲಿರುವವರೆಗೆ ಅವನನ್ನು ನೋಡುತ್ತ ಅಲ್ಲಿ ಇರಬೇಕೆಂದು ಮಾಡಿರುವೆನು ' ಎಂದು ಮಹಾರಾಣಿಯು ತಮಗೆ ಬಿನ್ನವಿಸಿಕೊಂಡಿರುವಳು.

राजा — आर्य लातव्य विज्ञाप्यता देवी यस्ने छन्द इति ।

कञ्चुकी — यदाज्ञापयति देव । (इति निष्क्रान्त)

राजा — वयस्य किं प्रभार्थत एव देव्या व्रतनिमित्तोऽयमारम्भ स्यात् ।

विदूषक — भो तर्कयामि जातपश्चत्तापा तत्रभवती व्रतापदेशेन भवतः प्रणिपातलङ्घन प्रमार्ष्टुकामेति । [भो तक्केमि जादपच्छादावा तत्तभोदी वदावदेसेण भवदो पणिपादलङ्घण पमज्जिदुकामत्ति ।]

राजा — उपपन्न भवानाह । तथा हि

अवधूतप्रणिपाता पश्चात्सतप्यमानमनसोऽपि ।
निभृतैर्व्यपत्रपन्ते दयितानुनयैर्मनस्विन्य ॥ ५ ॥

तदादेशय मणिहर्म्यपृष्ठमार्गम् ।

विदूषक — इत इतो भवान् । एतेन गङ्गातरङ्गशिशिरेण स्फटिकमणिसोपानेनारोहतु भवान्प्रदोपावसररमणीय मणिहर्म्यम् । [इदो इदो भव । इमिणा गङ्गतरङ्गसिसिरेण फलिहमणिसोवाणेण आरोहदु भव पदोसावसररमणिज्ज मणिहम्मिअ ।]

ರಾಜಾ — ಆರ್ಯ ಲಾತವ್ಯನೆ, "ನಿನ್ನ ಇಚ್ಛೆಯಿದ್ದಂತೆ ಆಗಲಿ" ಎಂದು ದೇವಿಗೆ ತಿಳಿಸು.

ಕಂಚುಕೀ — ಮಹಾರಾಜನ ಅಪ್ಪಣೆ, (ಎಂದು ತೆರಳುವನು)

ರಾಜಾ— ಗೆಳೆಯನೆ, ರಾಣಿಯು ನಿಜವಾಗಿಯೂ ವ್ರತವನ್ನು ಕೊನಗಾಣಿಸಬೇಕೆಂದು ಈ ಕಾರ್ಯವನ್ನು ಕೈಕೊಂಡಿರುವಳೊ ?

ವಿದೂಷಕ —ಓಹೋ ! ರಾಣಿಗೆ ಈಗ ಪಶ್ಚಾತ್ತಾಪವಾದದ್ದರಿಂದ ಆಗ, ಕೋಪದಿಂದ ನಿನ್ನ ವಂದನೆಯನ್ನು ಉಲ್ಲಂಘಿಸಿದ ಅಪರಾಧವನ್ನು ಈ ವ್ರತದ ನೆವದಿಂದ ಪರಿಹರಿಸಿಕೊಳ್ಳಬೇಕೆಂದಿರುವಳೆಂದು ನನಗೆ ಅನಿಸುವದು.

ರಾಜಾ — ನೀನು ಹೇಳಿದ್ದು ನಿಜ. ಏಕೆಂದರೆ—

ಸಿಟ್ಟಿನ ಭರದಲ್ಲಿ, ತಮ್ಮ ಪ್ರಿಯರು ಅಂಗಲಾಚಿ ಬೇಡಿಕೊಂಡರೂ ಅವರ ವಂದನೆಗಳನ್ನು ಮನ್ನಿಸದ ಮಾನಿನಿಯರು, ಬಳಿಕ ಸಿಟ್ಟಿಳಿದ ಮೇಲೆ ತಮ್ಮ ಪ್ರಿಯರ ಅನುನಯಗಳಿಂದ ಮನಸ್ಸಿನೊಳಗೆ ನಾಚಿಕೆ ಪಡುವರು ॥ ೫ ॥

ಆದ್ದರಿಂದ ಮಣಿಹರ್ಮ್ಯದ ಮಾರ್ಗವನ್ನು ತೋರಿಸು

ವಿದೂಷಕ — ಮಹಾರಾಜನು ಇತ್ತಕಡೆಗೆ ದಯಮಾಡಿಸಬೇಕು ಮಹಾರಾಜನೆ, ಗಂಗಾನದಿಯ ತೆರೆಗಳಿಂದ [ಅಥವಾ ತೆರೆಗಳಂತೆ] ತಂಪಾದ ಸ್ಫಟಿಕಮಯವಾದ ಈ ಸೋಪಾನ ಮಾರ್ಗದಿಂದ ಸಾಯಂಕಾಲದಲ್ಲಿ ರಮಣೀಯವಾಗಿ ಕಂಗೊಳಿಸುವ ಈ ಮಣಿಹರ್ಮ್ಯವನ್ನು ಹತ್ತಬೇಕು.

राजा — आरोहाग्रतः । (सर्वे सोपानारोहणं नाटयन्ति)

विदूषक — (निरूप्य) भो प्रत्यासन्नेन चन्द्रोदयेन भवितव्यम् । यथा तिमिरेण रिच्यमानं पूर्वदिशामुखमालोहितप्रभं दृश्यते । [भो पच्चासण्णेण चन्दोदएण होदव्वं । जह तिमिरेण रेचीअमाणं पुव्वदिसामुहं आलोहिअप्पहं दीसदि ।]

राजा — सम्यगाह भवान् ।

उदयगूढशशाङ्कमरीचिभि-
स्तमसि दूरतरं प्रतिसारिते ।
अलकसयमनादिव लोचने
हरति मे हरिवाहनदिङ्मुखम् ॥ ६ ॥

विदूषक – ही ही । भो एष खण्डमोदकसदृश उदितो राजा ओषधीनाम् । [ही ही । भो एसो खण्डमोदअसरिसो उदिदो राआ ओसधीनाम् ।]

राजा – (सस्मितम्) सर्वत्रौदरिकस्याभ्यवहार्यमेव विषयः । (प्राञ्जलिः प्रणम्य) भगवन् क्षपानाथ ।

रविमाविशते सतां क्रियायै
सुधया तर्पयते पितॄन्सुरांश्च ।

ರಾಜಾ— ನೀನು ಮೊದಲು ಹತ್ತು.

(ಎಲ್ಲರೂ ಸೋಪಾನಗಳನ್ನು ಹತ್ತುವಂತೆ ನಟಿಸುವರು)

ವಿದೂಷಕ— (ನಿರೀಕ್ಷಿಸಿ) ಮಿತ್ರನೆ, ಪೂರ್ವದಿಗಂತವು ಕತ್ತಲೆ ದೂರಾಗಿ ಸ್ವಲ್ಪ ಕೆಂಪಾಗಿರುವದೆಂದಮೇಲೆ ಚಂದ್ರೋದಯವು ಬಹಳ ಸಮೀಪಿಸಿರಬೇಕೆಂದು ತೋರುವದು.

ರಾಜಾ — ನೀನು ಸರಿಯಾಗಿ ಹೇಳಿದೆ.

ಉದಯಾಚಲದಿಂದ ಮರೆಯಾದ ಚಂದ್ರನ ಕಿರಣಗಳಿಂದ ಕತ್ತಲೆಯು ಬಯಲಾಗಿ ಈ ಪೂರ್ವದಿಙ್ಮುಖವು ಈಗ ಹೆಳಲು ಹಾಕಿಕೊಳ್ಳುತ್ತಿರುವದೋ ಎನೋ ಎಂಬಂತೆ ನನ್ನ ಕಣ್ಣುಗಳನ್ನಾಕರ್ಷಿಸುತ್ತಿದೆ ॥ ೬ ॥

ವಿದೂಷಕ—ಹಿಹಿ ಹಿಽಽ ಅಹ! ಮುರಿದ ಮೋದಕದಂತೆ ಕಾಣುವ ಈ ಚಂದ್ರನು ಇಲ್ಲಿ ಉದಯಿಸಿದನು

ರಾಜಾ — (ನಗುತ್ತ) ಕೂಳಬಾಕ [ಭೋಜನಪ್ರಿಯ] ನಾದ ನಿನಗೆ ಯಾವಾಗಲೂ ಎಲ್ಲ ಕಡೆಗೂ ತಿನಸಿನ ಮಾತೇ ಮಾತು!

(ಕೈಮುಗಿದುಕೊಂಡು ನಮಸ್ಕರಿಸಿ) ಭಗವನ್, ನಿಶಾನಾಥನೆ,—

ಆರ್ಯರ ಧಾರ್ಮಿಕ ಕಾರ್ಯಗಳ ಸಲುವಾಗಿ [ಅವರು 'ದರ್ಶ' ಮೊದಲಾದ ಧರ್ಮಕಾರ್ಯಗಳನ್ನು ಮಾಡಲು ಅನುಕೂಲವಾಗುವಂತೆ, ಅಮಾವಾಸ್ಯೆಯ ದಿನ] ಸೂರ್ಯನಲ್ಲಿ ಲೀನವಾಗುವ, ಅಮೃತದಿಂದ ದೇವತೆಗಳನ್ನೂ ಪಿತೃಗಳನ್ನೂ ಸಂತೃಪ್ತಿ-

तमसा निशि मूर्छता निहन्त्रे

हरचूडानिहितात्मने नमस्ते ।। ७ ।। (उत्तिष्ठति)

विदूषक – भो ब्राह्मणसङ्कामिताक्षरेण ते पितामहेनाभ्यनुज्ञात आसनस्थितो भव यावदहमपि सुखासीनो भवामि । [भो वह्मणसकामिदक्खरेण दे पिदामहेण अभ्भणुण्णादो आसणट्ठिदो होहि जाव अहपि सुहासीणो होमि ।]

राजा — (विदूषकवचन परिगृह्योपविष्ट परिजन विलोक्य) अभिव्यक्ताया चन्द्रिकाया किं दीपिकापौनरुक्त्येन । तद्विश्राम्यन्तु भवत्य ।

परिजन – यद्देव आज्ञापयति [ज देवो आणवेदि ।] (इति निष्क्रात)

राजा — (चन्द्रमसमवलोक्य) वयस्य पर मुहूर्तादागमन देव्या. । तद्विविक्ते कथयिष्यामि स्वामवस्थाम् ।

विदूषक — ननु दृश्यत एव सा । किं तु तादृशमनुराग दृष्ट्वा शक्यमाशाबन्धेनात्मान धारयितुम् । [ण दीसदि एव्वसा । किं दु तारिस अणुराअ पेक्खिअ सक्क आमाबन्धेण अत्ताण धारेदु ।

ಗೊಳಿಸುವ, ರಾತ್ರಿಯಲ್ಲಿ ಕವಿಯುವ ಕತ್ತಲೆಯನ್ನು ಹೊಡದೋಡಿಸುವ, ಮತ್ತು ಹರನ ಜಡೆಯನ್ನಲಂಕರಿಸುವ ಚಂದ್ರಮನೆ, ನಿನಗೆ ಅನಂತ ವಂದನೆಗಳು ॥ ೭ ॥

ವಿದೂಷಕ— ಮಹಾರಾಜನೆ, ಈ ಬ್ರಾಹ್ಮಣನ ಮುಖಾಂತರ ನಿನ್ನ ಪಿತಾಮಹ ನಾದ ಈ ಚಂದ್ರನು ನಿನಗೆ ಕುಳಿತುಕೊಳ್ಳಲು ಅನುಮತಿಯನ್ನಿತ್ತಿರುವನು ಆದ್ದರಿಂದ ಆಸನದ ಮೇಲೆ ಕುಳಿತುಕೊ ಅಂದರೆ, ನಾನೂ ಸುಖವಾಗಿ ಕೊಡುವೆನು

ರಾಜಾ — (ವಿದೂಷಕನ ಮಾತನ್ನು ಮನ್ನಿಸಿ ಕುಳಿತುಕೊಳ್ಳುವನು ಮತ್ತು ಪರಿ ಚಾರಿಕೆಯರ ಕಡೆಗೆ ನೋಡುತ್ತ) ಬೆಳದಿಂಗಳು ನಿಚ್ಚಳವಾಗಿರುವಾಗ ಈ ದೀವಟಿಗೆ ಗಳಿಂದ ಏನು ಪ್ರಯೋಜನ ? ಆದ್ದರಿಂದ ನಿವೀಗ ವಿಶ್ರಮಿಸಿರಿ

ಪರಿಜನರು — ಪ್ರಭುಗಳ ಅಪ್ಪಣೆ. (ಎಂದು ಹೊರಟು ಹೋಗುವರು.)

ರಾಜಾ – (ಚಂದ್ರನ ಕಡೆಗೆ ನೋಡುತ್ತ) ರಾಣಿಯು ಬರಲಿಕ್ಕೆ ಇನ್ನೂ ಒಂದು ಗಳಿಗೆ ಬೇಕು ಆದ್ದರಿಂದ ಈ ಏಕಾಂತಸ್ಥಾನದಲ್ಲಿ ನನ್ನ ಅವಸ್ಥೆಯನ್ನು ನಿನಗೆ ಹೇಳುವೆನು.

ವಿದೂಷಕ— ನಿನ್ನ ಅವಸ್ಥೆಯು ಮೇಲೇ ಸ್ಪಷ್ಟಕಾಣುವದು ಆದರೂ, ಉರ್ವ ಶಿಯ ಅಂಥ ನಿಷ್ಕಪಟವಾದ ಅನುರಾಗವನ್ನು ಕಂಡು ಆಶೆಯಿಂದ ಜೀವವನ್ನು ಧರಿಸಲು ನಿನಗೆ ಶಕ್ಯವಿದೆ.

राजा— एवमेतत् । बलवान्पुनर्मम मनसोऽभिताप ।

नद्या इव प्रवाहो विषमशिलासकटस्खलितवेग ।

विघ्नितसमागमसुखो मनसिशय शतगुणीभवति ॥ ८ ॥

विदूषक – यथा परिहीयमानैरङ्गैरधिक शोभसे तथा अदूरे प्रियासमागम ते प्रेक्षे । जहा परिहीअमाणेहिं अङ्गेहिं सोहसि तहा अदूरे पिअसमागम ते पेक्खामि ।]

राजा – (निमित्त सूचयन्) वयस्य

वचोभिराशाजननैर्भवानिव गुरुव्यथम् ।

अय मा स्पन्दितैर्बाहुराश्वासयति दक्षिण ॥ ९ ॥

विदूषकः– न खल्वन्यथा ब्राह्मणस्य वचनम् । [ण हु अण्णहा बह्मणस्स वअण ।]

(राजा सप्रत्याशस्तिष्ठति)

(तत प्रविशत्याकाशयानेन अभिसारिकावेषा उर्वशी चित्रलेखा च)

उर्वशी – (आत्मान विलोक्य) हला चित्रलेखे अपि रोचते तेऽय अल्पाभरणभूषितो नीलांशुकपरिग्रहाऽभिसारिकावेष । [हला चित्तलेहे अवि रोअदि दे अअ मे अप्पाभरण भूसिदो णीलसुअपरिग्गहो अहिसारिआवेसो ।

ರಾಜಾ – ಅದು ನಿಜವಾದದ್ದು ಆದರ ! ನನ್ನ ಮಾನಸ್ಸಿನ ಉದ್ವೇಗವು ಮಿತಿಮೀರಿ ಹೋಗಿದೆ

ವಿಷಮವಾದ ಒಂಡೆಗಲ್ಲುಗಳಿಂದ ತನ್ನ ವೇಗಕ್ಕೆ ತಡೆಯುಂಟಾಗಲು, ನದಿಯ ಪ್ರವಾಹವು ನೂರು ಮಾರ್ಗವಾಗಿ ಅತಿವೇಗದಿಂದ ಹರಿಯುವಂತೆ, ಪ್ರಿಯಳ ಸಮಾಗಮ ಸುಖಕ್ಕೆ ತಡೆಯುಂಟಾದ್ದರಿಂದ ನನ್ನ ಹೃದಯದಲ್ಲಿಯ ಮನ್ಮಥನನು [ಕಾಮಪೀಡೆಯು] ನೂರ್ಮಡಿಯಾಗಿ ನನ್ನನ್ನು ಪೀಡಿಸುತ್ತಿರುವನು ॥ ೮ ॥

ವಿದೂಷಕ – ವಿರಹತಾಪದಿಂದ ನಿನ್ನ ಅವಯವಗಳು ಕೃಶವಾಗಿದ್ದರೂ ನೀನು ಮೊದಲಿಗಿಂತಲೂ ಈಗ ಹೆಚ್ಚು ಶೋಭಿಸುವಿಯೆಂದ ಮೇಲೆ ನಿನಗೆ ನಿನ್ನ ಪ್ರಿಯಳ ಸಮಾಗಮವು ಶೀಘ್ರದಲ್ಲಿಯೇ ಆಗುವದೆಂದು ಕಾಣುತ್ತದೆ

ರಾಜಾ – (ನಿಮಿತ್ತವನ್ನು ಸೂಚಿಸಿ) ಗೆಳೆಯನೆ,

ಬಳಲಿದ ನನ್ನನ್ನು, ನೀನು ಆಶಾಜನಕವಾದ ಮಾತುಗಳಿಂದ ದುಃಖಭಾರದಿಂದ ಸಂತೈಸುವಂತೆ, ಈ ನನ್ನ ಬಲಭುಜವು ತನ್ನ ಸ್ಫುರಣಗಳಿಂದ ಸಂತೈಸುತ್ತದೆ. ॥ ೯ ॥

ವಿದೂಷಕ – ಬ್ರಾಹ್ಮಣನ ಮಾತು ಎಂದೂ ಸುಳ್ಳಾಗದು

(ರಾಜನು ಆಶಾಬದ್ಧನಾಗಿರುವನು)

(ಆ ಮೇಲೆ ಆಕಾಶಮಾರ್ಗದಿಂದ ಅಭಿಸಾರಿಕೆಯ ವೇಷ ಧರಿಸಿದ ಉರ್ವಶಿಯೂ ಚಿತ್ರಲೇಖೆಯೂ ಪ್ರವೇಶಿಸುವರು)

ಉರ್ವಶೀ – (ತನ್ನನ್ನು ನೋಡಿಕೊಂಡು) ಎಲೈ ಗೆಳತಿ ಚಿತ್ರಲೇಖೆ, ಮಿತವಾದ ಆಭರಣಗಳಿಂದ ಕೂಡಿದ, ಮತ್ತು ಕಪ್ಪು ಬಟ್ಟೆಯ ಹೊದಿಕೆಯುಳ್ಳ ಈ ಅಭಿಸಾರಿಕೆಯ ವೇಷವು ನಿನಗೆ ಸೇರುವದಲ್ಲವೆ? ?

चित्रलेखा – नास्ति मे वाग्विभव प्रशंसितुम् । इद तु चिन्तयामि अपि नामाह पुरूरवा भवेयमिति । [णत्थि मे वाआविहओ पसंसिदु । इद तु चिन्तेमि अविणाम अहं पुरूरवा भवेअत्ति ।]

उर्वशी –सखि मदन खलु त्वामाज्ञापयति । शीघ्र नय मा तस्य सुभगस्य वसतिम् । [सहि मदणो खु तुम आणवेदि । सिध्घ णेहि म तस्स सुहअस्स वसदि ।]

चित्रलेखा - नन्वेतत्परिवर्तितमिव कैलासशिखेर प्रियतमस्य ते भवनमुपगते स्व । [ण एद परिविट्तिद विअ केलाससिहर पिअदमस्स दे भवण उवगह्म ।]

उर्वशी – तेन हि प्रभावज्जानीहि तावत्क स मम हृदयचोरः कि वानुतिष्ठतीति । [तेण हि पहावदो जाणदि दाव कहि सो मम हिअअचोरो कि वा अणुचिट्ठदित्ति ।]

चित्रलेखा— (आत्मागतम्) भवतु क्रीडिष्यामि तावदेतया । (प्रकाशम्) हला एष मनोरथलब्धप्रियासमागमसुखमनुभवन्नुपभोगक्षमेऽवकाशे तिष्ठति । [भोदु कीलस्स दाव एदाए । . हला एसो मणोरहलघ्धपिआसमाअमसुह अणुहवन्तो उवहोअक्खमे ओआसे चिट्ठदि ।]

चित्रलेखा – मुग्धे एष मणिहर्म्यगतो वयस्यमात्रसहायो राजर्षि । तदेह्युपसर्पाव एनम् । [मुध्धे एसो मणिहम्मिअगदो वअस्समेत्तसहाओ राएसी । ता एहि उवसप्पाम ण ।] (उभे अवतरत)

ಚಿತ್ರಲೇಖಾ – ಇದನ್ನು ಹೊಗಳಲು ನನ್ನಲ್ಲಿ ಶಬ್ದಸಂಪತ್ತಿಯಿಲ್ಲ. ಆದರೂ 'ನಾನೀಗ ಪುರೂರವನಾಗಬಲ್ಲೆನೇ ?' ಎಂದು ಆಲೋಚಿಸುತ್ತಿರುವೆನು.

ಉರ್ವಶೀ – ಗೆಳತಿ, ಬೇಗನೆ ನನ್ನನ್ನು ಆ ಮಹಾರಾಜನ ವಾಸಸ್ಥಳಕ್ಕೆ ಕರೆದೊಯ್ಯೆಂದು ಮದನನು ನಿನಗಾಜ್ಞಾಪಿಸುತ್ತಿರುವನು

ಚಿತ್ರಲೇಖಾ – ಸಖಿ, ನಾವೀಗಾಗಲೆ, ರೂಪಾಂತರವನ್ನು ಹೊಂದಿದ ಕೈಲಾಸ ಶಿಖರವೊ ಎಂಬಂತೆ ಕಂಗೊಳಿಸುತ್ತಿರುವ, ನಿನ್ನ ಇನಿಯನ, ಈ ಅರಮನೆಗೆ ಬಂದೆವು.

ಉರ್ವಶೀ -- ಹಾಗಾದರೆ, ನಿನ್ನ ದಿವ್ಯಶಕ್ತಿಯ ಪ್ರಭಾವದಿಂದ ನನ್ನ ಹೃದಯ ಚೋರನಾದ ಆ ಮಹಾರಾಜನು ಈಗ ಎಲ್ಲಿ ಇರುವನು, ಏನು ಮಾಡುವನು, ಎಂಬುದನ್ನು ತಿಳಿದುಕೊ.

ಚಿತ್ರಲೇಖಾ – (ತನ್ನಲ್ಲಿಯೇ) ಈಗ ತುಸುಹೊತ್ತು ಇವಳ ಸಂಗಡ ಪರಿಹಾಸ ಮಾಡುವೆನು (ಪ್ರಕಾಶವಾಗಿ) ಸಖಿ, ಅವನೀಗ ಉಪಭೋಗಕ್ಕೆ ಯೋಗ್ಯವಾದ ಸ್ಥಾನದಲ್ಲಿ ತನ್ನ ಮನೋರಥದಿಂದ ಕಲ್ಪಿತಳಾದ ಪ್ರಿಯಳ ಸಮಾಗಮ ಸುಖವನ್ನು ಅನುಭವಿಸುತ್ತಿರುವನು. (ಉರ್ವಶಿಯು ವಿಷಾದವನ್ನು ಸೂಚಿಸುವಳು)

ಚಿತ್ರಲೇಖಾ – ಹುಚ್ಚೀ, ಇಕೊ, ಅವನು ಕೇವಲ ತನ್ನ ಗೆಳೆಯನೊಂದಿಗೆ ಈ ಮಣಿಹರ್ಮ್ಯದಲ್ಲಿ ಕುಳಿತಿರುವನು. (ಇಬ್ಬರೂ ಇಳಿಯುವರು)

राजा – वयस्य रजन्या सह विजृम्भते मदनबाधा ।

उर्वशी – अनिर्भिन्नार्थकेनानेन वचनेनाकम्पितं मम हृदयम् । अन्तरिते एव शृणुवोऽस्य स्वैरालापं यावदावयो संशयच्छेदो भवति । [अणिब्भिण्णत्थेण इमिणा वअणेण आकम्पिद मे हिअअं । अन्तरिदा एव्व सुणाम से सेरालाव जाव णो ससअच्छेदो होदि ।]

चित्रलेखा – यत्ते रोचते । [ज दे रोअदि ।]

विदूषक. — नन्विमेऽमृतगर्भा सेव्यन्ता चन्द्रपादा । [ण इमे अमिअगब्भा सेवीअन्दु चन्दवादा ।]

राजा — वयस्य एवमाविदिभिरनुपक्रम्योऽयमातङ्क । पश्य

कुसुमशयनं न प्रत्यग्रं न चन्द्रमरीचयो
न च मलयजं सर्वाङ्गीणं न वा मणियष्टय ।
मनसिजरुजं सा वा दिव्या ममालमपोहितु

उर्वशी– का वापरा । [का वा अवरा]

रहसि लघयेदारब्धा वा तदाश्रयिणी कथा ॥ १० ॥

ರಾಜಾ – ವಯಸ್ಸನೆ, ರಾತ್ರಿಯಾದಂತೆ ನನ್ನ ಮದನಬಾಧೆಯೂ ಹೆಚ್ಚುತ್ತಿರುವದು.

ಉರ್ವಶೀ – ಅಸ್ಪಷ್ಟವಾದ ಈ ಮಾತಿನಿಂದ ನನ್ನ ಹೃದಯವು ಗಾಬರಿಯಿಂದ ನಡುಗುವದು. ಕಾರಣ, ನಮ್ಮ ಸಂದೇಹ ಪರಿಹಾರವಾಗುವವರೆಗೆ ಇಲ್ಲಿಯೇ ಮರೆಯಾಗಿಯೇ ನಿಂತುಕೊಂಡು ಅವನ ಸ್ವೈರಾಲಾಪಗಳನ್ನು [ಬಿಚ್ಚು ಮನಸ್ಸಿನಿಂದ ಆಡುವ ಮಾತುಗಳನ್ನು] ಕೇಳೋಣ.

ಚಿತ್ರಲೇಖಾ—ನಿನ್ನಿಷ್ಟವಿದ್ದಂತಾಗಲಿ.

ವಿದೂಷಕ—ಮಿತ್ರನೆ! ಅಮೃತಮಯವಾದ ಈ ಶೀತಲವಾದ ಚಂದ್ರಕಿರಣಗಳನ್ನು ಸೇವಿಸು.

ರಾಜಾ— ಇಂಥ ಇವೆಲ್ಲ ಉಪಾಯಗಳಿಂದ ನನ್ನ ಈ ಮನೋವ್ಯಥೆಯನ್ನು ಗುಣಪಡಿಸಲು ಶಕ್ಯವಿಲ್ಲ.

ನವಕುಸುಮಗಳ ಹಾಸಿಗೆ। ಚಂದ್ರನ ಕಿರಣಗಳು ಇಡೀ ದೇಹಕ್ಕೆ ಒಳಿದ ಗಂಧವು, ಮುತ್ತಿನ ಹಾರಗಳು ಇವುಗಳಲ್ಲಿ ಯಾವದೂ ನನ್ನ ಮನಸ್ಸಿನಲ್ಲಿಯ ಅನಂಗತಾಪವನ್ನು ಪರಿಹರಿಸಲಾರವು, ಆ ದಿವ್ಯ ರಮಣಿಯು (ಉರ್ವಶಿಯು) ॥ ೧೦ ॥

ಉರ್ವಶೀ— ಆ ದಿವ್ಯ ಸ್ತ್ರೀ ಇನ್ನಾವಳು? ಅಥವಾ ಏಕಾಂತದಲ್ಲಿ ಅವಳ ವಿಷಯವಾಗಿದ್ದ ಸಂಭಾಷಣೆಯಾಗಿ ಅದನ್ನು ನಿವಾರಿಸಬಲ್ಲದು

उर्वशी – हृदय इदानी मामुज्झित्वा इत सक्रातेन त्वया फलमुपलब्धम् । [हिअअ दाणि म उज्झिअ इदो सकन्तेण तुए फल उवलध्व ।]

विदूषक.— आम भो अहमपि यदा शिखरिणी रसाला च न लभे तदा तदेव चिन्तयन्नासादयामि सुखम् । [आम भो अहृ पि जदा सिहृरिणी रसाल अ ण लहे तदा त ज्जेव चिन्तअन्तो आसादेमि सुह ।]

राजा – सपद्यत इद भवत ।

विदूषक - भवानपि तामचिरेण प्राप्स्यति । [भवपि त अचिरेण पाविस्सदि ।]

राजा - सखे एव मन्ये-

चित्रलेखा—शृणु असतुष्टे शृणु । [सुणु असतुठ्ठे सुणु]

विदूषक.– कथमिव । [कहृ विअ ।]

राजा– अय तस्या रथक्षोभादसेनासो निपीडितः ।

एक. कृती शरीरेऽस्मिन्शेषमङ्ग भुवो भर ॥ ११ ॥

चित्रलेखा – किमिदानी विलम्ब्यते । [कि दाणि विलम्बीअदि ।]

उर्वशी – (सहृसोपसृत्य) हृला अग्रतोऽपि मम गताया उदासीन इव महाराज । [हृला अग्गदोवि मम गदाए उदासीणो विअ महाराओ ।]

ಉರ್ವಶೀ— ಎಲೆ ಹೃದಯವೇ, ನನ್ನನ್ನಗಲಿ ಅವನ ಬಳಿಗೆ ಹೋದ ನಿನಗೆ ತಕ್ಕ ಫಲವು ಸಿಕ್ಕಿತು

ವಿದೂಷಕ— ಹೌದು, 'ಶಿಖರಿಣಿಯಾಗಲಿ, 'ರಸಾಲಾ' ವಾಗಲಿ ನನಗೆ ಸಿಗದೆ ಇದ್ದರೆ ನಾನೂ ಹೀಗೆಯೇ ಅವುಗಳ ವಿಷಯವಾಗಿ ಮನಸ್ಸಿನಲ್ಲಿ ವಿಚಾರಮಾಡುತ್ತ ಸಮಾಧಾನ ಹೊಂದುವನು.

ರಾಜಾ— ಅದೆಲ್ಲ ನಿನಗೆ ದೊರೆಯುಬಹುದು.

ವಿದೂಷಕ— ನಿನಗೂ ಕೂಡ ಅವಳು ಬೇಗ ಪ್ರಾಪ್ತಳಾಗುವಳು.

ರಾಜಾ — ಗೆಳೆಯನೆ, ನನಗನಿಸುವದೇನಂದರೆ [ಅಥವಾ ನನಗೂ ಹಾಗೇ ಅನಿಸುವದು]

ಚಿತ್ರಲೇಖಾ— ಕೇಳು, ಸಂಶಯಾತ್ಮಳೆ [ಅಸಂತುಷ್ಟಳೇ] ಕೇಳು.

ವಿದೂಷಕ— ಹೇಗೆ ?

ರಾಜಾ— ರಥವು ಅಲುಗಲು ಅದರ ಧಡಕಿಗೆ ಅವಳ ಭುಜಕ್ಕೆ ತಾಕಿದ, ನನ್ನ ಈ ಭುಜವೊಂದೇ ನನ್ನ ದೇಹದಲ್ಲಿ ಧನ್ಯವಾದದ್ದು ಉಳಿದ ಅಂಗಾಂಗಗಳು ಭೂಮಿಗೆ ಭಾರವಾದವುಗಳು ಮಾತ್ರ ॥ ೧೧ ॥

ಚಿತ್ರಲೇಖಾ — ಈಗೇಕೆ ತಡಮಾಡುವೆ ?

ಉರ್ವಶೀ— (ಒಮ್ಮೆಲೆ ಮುಂದೆ ಬಂದು) ಸಖಿ ಚಿತ್ರಲೇಖೆ, ಇದೇನು ನಾನು ಎದುರಿಗೆ ನಿಂತಿದ್ದರೂ ಮಹಾರಾಜನು ಉದಾಸೀನನಾಗಿರುವನಲ್ಲ!

चित्रलेखा – अतित्वरिते अनुत्क्षिप्ततिरस्करिणीकासि। [अदितुवरिदे अणुक्खित्त-तिरक्खरिणीआ सि ।]

(नेपथ्ये) इत इतो भट्टिनी । [इदो इदो भट्टिणी ।]

(सर्वे कर्णं ददति । उर्वशी सह सख्या विषण्णा)

विदूषक – अविहा अविहा उपस्थिता देवी । तद्वाचयमो भव। [अविहा अविहा उवट्ठिदा देवी । ता वाचजमो होहि ।]

राजा – भवानपि संवृताकारमास्ताम् ।

उर्वशी – हला किमत्र करणीयम् । [हला किं एत्थ करणिज्ज ।]

चित्रलेखा – अलमावेगेन । अन्तर्हिते आवाम् । उपवासनियमवेषा राजर्षिमहिषी दृश्यते । तन्नैषा चिरं स्थास्यति । [अलं आवएण । अन्तरिदा वयं । उववासणिअमवेसा राएसिमहिसी दीसदि । ता ण एसा इह चिरं चिट्ठिस्सदि ।]

(ततः प्रविशति धृतोपहारपरिजना देवी)

देवी – (परिक्रम्यावलोक्य च) हञ्जे निपुणिके एष रोहिणीसंयोगेनाधिकं शोभते भगवान्मृगलाञ्छन । [हञ्जे णिउणिए एसो रोहिणीसजोएण अहिअं सोहदि भवअं मिअलञ्छणो ।]

ಚಿತ್ರಲೇಖಾ— ಗಡಬಿಡಿಸಿದ್ದಿಯೋ, ನೀನು ನಿನ್ನ ತಿರಸ್ಕರಿಣಿಯನ್ನೆ ತೆಗೆದಿರುವದಿಲ್ಲ. (ತೆರೆಯಲ್ಲಿ) ಮಹಾರಾಣಿಯು ಇತ್ತ ಬರಬೇಕು, ಇತ್ತ ಬರಬೇಕು.

(ಎಲ್ಲರೂ ಕಿವಿಕೊಟ್ಟು ಕೇಳುವರು, ಉರ್ವಶಿಯು ತನ್ನ ಗೆಳತಿಯೊಂದಿಗೆ ವಿಷಣ್ಣಳಾಗುವಳು)

ವಿದೂಷಕ— ಅಯ್ಯೋ! ಮಹಾರಾಣಿಯು ಬಂದಳು. ಮಾತನಾಡಬೇಡ ಬಾಯಿ ಮುಚ್ಚಿಕೊಂಡಿರು.

ರಾಜಾ— ನೀನೂ ನಿನ್ನ ಆಕಾರವು ಈ ಸಂಗತಿಯನ್ನು ಪ್ರಕಟಗೊಳಿಸದಂತೆ ಸುಮ್ಮನೆ ಇರು.

ಉರ್ವಶೀ— ಗೆಳತಿ, ಈಗೇನು ಮಾಡಬೇಕು

ಚಿತ್ರಲೇಖಾ— ಗಾಬರಿಗೊಳ್ಳಬೇಡ ನಾವು ಅದೃಶ್ಯರಾಗಿರುವೆವು. ಈ ರಾಜನ ಪಟ್ಟದರಾಣಿಯಾದ ಇವಳು ಉಪವಾಸ ವ್ರತಾಚರಣೆಗಳಿಗೆ ತಕ್ಕಂತೆ ವೇಷವನ್ನು ಧರಿಸಿರುವಳು. ಅಂದಮೇಲೆ, ಇವಳು ಇಲ್ಲಿ ಬಹಳಹೊತ್ತು ಇರಲಾರಳು

(ಬಳಿಕ ಪೂಜಾಸಾಮಗ್ರಿಗಳನ್ನು ಕೈಯಲ್ಲಿ ಹಿಡಿದುಕೊಂಡ ದಾಸಿಯರೊಂದಿಗೆ ರಾಣಿಯು ಪ್ರವೇಶಿಸುವಳು.)

ದೇವೀ – (ತಿರುಗಾಡಿ ನೋಡುತ್ತ) ಎಲೆ ನಿಪುಣಿಕೆ, ಈ ಚಂದ್ರನು ರೋಹಿಣೀ ಸಂಯೋಗದಿಂದ ಬಹಳೇ ಚಂದಕಾಣುವನು.

निपुणिका – ननु देवीसहितो भर्ता विशेषरमणीय । [ण देवीसहिदो भट्टा विसेसरमणिज्जो ।]

विदूषक – (दृष्ट्वा) भो न जानामि स्वस्तिवायन ददातीति अथवा भवतो व्रतव्यपदेशेन मुक्तरोषा प्रणिपातलङ्घन प्रमार्ष्टुकामेति अद्य ममाक्ष्णो शुभदर्शना देवी । [भो ण जाणामि सोत्थिआअण देइत्ति आदु भवदो वदव्ववदेसेण मुक्करोसा पणिपाद-लङ्घण पमज्जिदुकामत्ति अज्ज मे अख्खीण सुहदसणा देवी ।]

राजा – (सस्मितम्) उभयमपि घटते । तथापि भवता यत्पश्चादभिहित तन्मा प्रतिभाति । यदत्रभवती ।

सिताशुका मङ्गलमात्रभूषणा
पवित्रदूर्वाङ्कुरलाञ्छितालका ।
व्रतापदेशोज्झितगर्ववृत्तिना
मयि प्रसन्ना वपुषैव लक्ष्यते ॥ १२ ॥

देवी – (उपगम्य) जयतु जयतु आर्यपुत्र । [जेदु जेदु अज्जउत्तो ।]

परिजन – जयतु जयतु भर्ता । [जेदु जेदु भट्टा ।]

विदूषक – स्वस्ति भवत्यै । [सत्थि भोदीए ।]

ನಿಪುಣಿಕಾ — ಮಹಾರಾಣಿಯ (ತಮ್ಮ) ಸಾನ್ನಿಧ್ಯದಿಂದ ಮಹಾರಾಜನು [ಆದಕ್ಕಿಂತಲೂ ಹೆಚ್ಚು] ವಿಶೇಷವಾಗಿ ಶೋಭಿಸುವನು

ವಿದೂಷಕ – (ನೋಡಿ) ಎಲಾ! ಈ ಮಹಾರಾಣಿಯು ನನಗೆ ಸ್ವಸ್ತಿವಾಚನ [ಸ್ವಸ್ತಿವಾಚನದ ನಿಮಿತ್ತವಾಗಿ ಕೊಡುವ ಕಾಣಿಕೆ] ವನ್ನು ಕೊಡುವಳೆಂದೊ, ಅಥವಾ ಈ ವ್ರತದ ನೆವದಿಂದ, ಕೋಪವನ್ನು ಬಿಟ್ಟ ನಿನ್ನ ವಂದನೆಯನ್ನು ಉಲ್ಲಂಘಿಸಿದ ತನ್ನ ಅಪರಾಧವನ್ನು ಪರಿಹರಿಸಿಕೊಳ್ಳಲು ಬಯಸುವಳೆಂದೋ ರಾಣಿಯು, ಇಂದೇಕೊ ನನ್ನ ಕಣ್ಣುಗಳಿಗೆ ಅತ್ಯಂತ ಪ್ರಸನ್ನಳಾಗಿದಂತೆ ಕಾಣುವಳು.

ರಾಜಾ – (ನಸುನಗುತ್ತ) ನೀನು ಹೇಳಿದ ಎರಡೂ ಕಾರಣಗಳು ಇರುವದು ಶಕ್ಯವಿದೆ ಆದರೂ ನೀನು ಹೇಳಿದ ಎರಡನೇ ಕಾರಣವು ನನಗೆ ಸರಿಯೆನಿಸುವದು ಯಾಕಂದರೆ.

ಶುಭ್ರವಾದ ವಸ್ತ್ರವನ್ನುಟ್ಟುಕೊಂಡಿರುವ ಮಂಗಲಸೂತ್ರ ಮೊದಲಾದ ಸೌಭಾಗ್ಯಪ್ರದವಾದ ಆಭರಣಗಳನ್ನಷ್ಟೇ ಧರಿಸಿರುವ ಪವಿತ್ರವಾದ ದೂರ್ವಾಂಕುರವನ್ನು ಹೆರಳಲ್ಲಿಟ್ಟುಕೊಂಡಿರುವ ಈ ಮಹಾರಾಣಿಯು ನನ್ನ ಮೇಲೆ ಪ್ರಸನ್ನಳಾಗುವಳೆಂಬದನ್ನು (ಅನುಕೂಲ) ವ್ರತದ ನಿಮಿತ್ತವಾಗಿ ಕೋಪವನ್ನು ಬಿಟ್ಟಿದ್ದರಿಂದ ಶಾಂತವಾದ ಅವಳ ಆಕಾರದಿಂದಲೇ ಗೊತ್ತಾಗುವದು ॥ ೧೨ ॥

ದೇವೀ – (ಹತ್ತಿರ ಬಂದು) ಆರ್ಯಪುತ್ರನಿಗೆ ಜಯವಾಗಲಿ, ಜಯವಾಗಲಿ.

ಪರಿಚಾರಿಕೆಯರು – ಮಹಾಪ್ರಭುಗಳಿಗೆ ಜಯವಾಗಲಿ, ಜಯವಾಗಲಿ.

ವಿದೂಷಕ – ಮಹಾರಾಣಿಯೆ, ನಿನಗೆ ಕಲ್ಯಾಣವಾಗಲಿ.

राजा – स्वागत देव्यै । (ता हस्तेन गृहीत्वा उपवेशयति)

उर्वशी – हला इय स्थाने देवीशब्देनोपचर्यते । न किमपि परिहीयते शच्या ओजस्वितया । [हला इअ ठाणे देवीसद्देण उवअरीअदि । ण किंपि परिहीअदि सचीए ओजस्सिदाए ।]

चित्रलेखा – साधु असूयापराङ्मुख मन्त्रितम् । [साहु असूआपरम्मुह मन्तिदम् ।]

देवी – आर्यपुत्र पुरस्कृत्य कोऽपि व्रतविशेषो मया सपादनीय । तन्मुहूर्तमुपरोध सह्यताम् । [अज्जउत्त पुरोकरिअ कोवि वदविसेसो मए सपादणीओ । ता मुहुत्त उवरोधो सहीअदु ।]

राजा – मा मैवम । अनुग्रह खलु नोपरोध ।

विदूषक — ईदृश स्वस्तिवायनवानुपरोधो बहुशो भवतु । [ईरिसो सोत्थिवाअणवन्तो उवरोहो बहुसो होदु ।]

राजा – किनामधेयमेतद्देव्या व्रतम् । (देवी निपुणिकामवेक्षते)

निपुणिका - भर्त प्रियानुप्रसादन नाम । [भट्टा पिआणुप्पसादण णाम ।]

राजा — (देवी विलोक्य) यद्येवम ।

अनेन कल्याणि मृणालकोमल
व्रतेन गात्र ग्लपयस्यकारणम् ।

ರಾಜಾ — ದೇವೀ ನಿನಗೆ ಸ್ವಾಗತವು (ಅವಳನ್ನು ಕೈಹಿಡಿದು ಕೂಡಿಸುವನು)

ಉರ್ವಶೀ— ಇವಳನ್ನು "ದೇವೀ" ಎಂಬ ಹೆಸರಿನಿಂದ ಕರೆಯುವದು ಯಥಾರ್ಥವಾಗಿದೆ [ಯೋಗ್ಯವೇ ಆಗಿದೆ.] ಇವಳು ಓಜಸ್ಸಿನಲ್ಲಿ ಶಚಿಗಿಂತ ಎಳ್ಳಷ್ಟು ಕಡಿಮೆಯಿಲ್ಲ

ಚಿತ್ರಲೇಖಾ— ಒಳ್ಳೇದು. ಮತ್ಸರವಿಲ್ಲದೇ ನೀನು ಸರಿಯಾಗಿ ಹೇಳಿದೆ

ದೇವೀ— ಆರ್ಯಪುತ್ರನೆ. ನಿನ್ನನ್ನು ಪುರಸ್ಕರಿಸಿ ನಾನು ಒಂದು ವ್ರತವನ್ನು ಆಚರಿಸಬೇಕಾಗಿದೆ ಅದಕ್ಕೋಸ್ಕರ ದಯಮಾಡಿ ತುಸುಹೊತ್ತು ನನ್ನ ಈ ನಿರ್ಬಂಧವನ್ನು ಸಹಿಸಬೇಕು

ರಾಜಾ— ಹಾಗೆನ್ನಕೂಡದು. ಇದು ಅನುಗ್ರಹವೇ ಹೊರತು ನಿರ್ಬಂಧವಲ್ಲ.

ವಿದೂಷಕ — ನನಗೆ 'ಸಸ್ತಿವಾಚನದ' ಕಾಣಿಕೆಯು ದೊರೆಯತಕ್ಕ ಇಂಥ ನಿರ್ಬಂಧಗಳು ಬೇಕಾದಷ್ಟಾಗಲಿ

ರಾಜಾ— ದೇವೀ ನಿನ್ನ ಈ ವ್ರತದ ಹೆಸರೇನು.

(ರಾಣಿಯು ನಿಪುಣಿಕೆಗೆ ನೋಡುವಳು)

ನಿಪುಣಿಕಾ— ಈ ವ್ರತದ ಹೆಸರು ' ಪ್ರಿಯಪ್ರಸಾದನ ' ವೆಂದು.

[ಪ್ರಿಯು ನನ್ನ ಸಂತೋಷಗೊಳಿಸುತ್ತಾನೆ]

ರಾಜಾ — (ರಾಣಿಯನ್ನು ನೋಡಿ) ಹಾಗಿದ್ದರೆ

ಎಲೈ ಶೋಭನಾಂಗಿಯೆ, ಕಮಲದ ದೇಟಿನಂತೆ ಕೋಮಲವಾದ ನಿನ್ನ ಅಂಗವನ್ನು

प्रसादमाकाङ्क्षति यस्तवोत्सुक
स किं त्वया दासजन प्रसाद्यते ।। १३ ।।

उर्वशी – महान्खल्वस्यैतस्या बहुमान । [महन्तो खु से इमस्सि बहुमाणो ।]

चित्रलेखा – अयि मुग्धे अन्यसक्रान्तप्रेमाणो नागरिका अधिक दक्षिणा भवन्ति। [अइ मुध्धे अण्णसकन्तप्पेम्माणो णाअरिआ अहिअ दक्खिणा होन्ति ।]

देवी – (सस्मितम्) नन्वेतस्य व्रतपरिग्रहस्याय प्रभावो यदेतावन्मन्त्रित आर्यपुत्र । [ण इमस्स वदपरिग्गहस्स अअ दह्यावो ज एत्तिअ मन्ताविदो अज्जउत्तो ।]

विदूषक – विरमतु भवान् । न युक्त सुभाषित प्रत्याचरितुम् । [विरमदु भव । ण जुत्त सुहासिद पच्चाचरिदु ।]

देवी — दारिका उपनयत औपहारिक यावन्मणिहर्म्यगताश्चन्द्रपादानर्चामि। [दारिआओ उवणध ओवहारिअ जाव मणिहम्मिअदे अच्चेमि ।]

परिजन – यद्देव्याज्ञापयति । एष गन्धकुसुमाद्युपहार । [ज देवी आणवेदि। एसो गन्धकुसुमादिउवहारो ।]

देवी – (नाटयेन गन्धपुष्पादिभिश्चन्द्रपादानभ्यर्च्य) हञ्जे एतानौपहारिकमोदकानार्यमाणवक लम्भय । [हञ्जे इमे ओवहारिअमोदए अज्जमाणवअ लम्भावेहि ।]

परिजन – यद्देव्याज्ञापयति । आर्यमाणवक एतत्तावत्ते । [ज देवी अज्जमाणवअ एद दाव दे ।]

ಈ ವ್ರತದಿಂದ ನಿಷ್ಕಾರಣವಾಗಿ ಬಳಲಿಸುವಿ ಏಕೆಂದರೆ, ನಿನ್ನ ಒಲವಿನ ಅನುಗ್ರಹವನ್ನ ಉತ್ಸುಕನಾಗಿ ಇಚ್ಛಿಸುವ ನಿನ್ನ ದಾಸನನ್ನು [ನನ್ನನ್ನು] ಆರಾಧಿಸುವದೇಕೆ ? ।।೧೩ ॥

ಉರ್ವಶೀ— ಇವನಿಗೆ ಇವಳ ವಿಷಯವಾಗಿ ಎಷ್ಟು ಆದರವಿದೆಯೆಲ್ಲ !

ಚಿತ್ರಲೇಖಾ — ಅಥವಾ (ಮುಗ್ಧಳೆ,) ಹುಚ್ಚೀ,ಽ ಅನ್ಯಸ್ತ್ರೀಯರನ್ನು ಪ್ರೀತಿಸುವ ಪುರುಷರು ತಮ್ಮ [ಹೆಂಡಂದಿರ ವಿಷಯವಾಗಿ] ಹೆಚ್ಚೆಚ್ಚು ದಾಕ್ಷಿಣ್ಯವುಳ್ಳವರಾಗುವರು

ದೇವೀ— (ನಸುನಗುತ್ತ) ಆರ್ಯಪುತ್ರನು ಈ ರೀತಿಯಾಗಿ ಇಷ್ಟು ಮಾತನಾಡಿದ್ದು ನಿಜವಾಗಿಯೂ ನಾನು ಕೈಕೊಂಡ ಈ ವ್ರತದ ಮಹಿಮಯೇ.

ವಿದೂಷಕ — ಮಿತ್ರನೆ, ಮಾತನ್ನಾಡಬೇಡ ತಡೆ. ಇಂಥ ಯೋಗ್ಯವಾದ ಮಾತುಗಳನ್ನು ಮೀರಿಹೋಗುವದು ತರವಲ್ಲ

ದೇವೀ— ಕನ್ನಿಕೆಯರೆ, ಪೂಜಾ ಸಾಮಗ್ರಿಯನ್ನೂ ಇಲ್ಲಿ ತೆಗೆದುಕೊಂಡು ಬನ್ನಿರಿ 'ಮಣಿಹರ್ಮ್ಯ'ದ ಮೇಲೆ ವಸರಿಸಿರುವ ಚಂದ್ರ ಕಿರಣಗಳನ್ನು ಪೂಜಿಸುವಳು.

ಪರಿಚಾರಿಕೆ— ಮಹಾರಾಣಿಯವರ ಅಪ್ಪಣೆ ಇದೊ ಗಂಧಪುಷ್ಪಾದಿಗಳುಳ್ಳ ಪೂಜಾ ಸಾಮಗ್ರಿಗಳು ಇವು.

ದೇವೀ— (ಚಂದ್ರನ ಕಿರಣಗಳನ್ನು ಪೂಜಿಸುವಂತೆ ನಟಿಸಿ) ಎಲೆ ಪರಿಚಾರಿಕೆ ಈ ಕಾಣಿಕೆಯಾಗಿ ಕೊಡುವ ಈ ಮೋದಕಗಳನ್ನು ಆರ್ಯಮಾಣವಕನಿಗೆ ಕೊಡಿರಿ

ಪರಿಚಾರಿಕೆ – ಅಪ್ಪಣೆ. ಪೂಜ್ಯನಾದ ಮಾಣವಕನೆ ಇದು ನಿನ್ನದು. ತೆಗೆಕೊದು.

विदूषक – (मोदकशराव गृहीत्वा) स्वस्ति भवत्यै। बहुफलमेतद्व्रत भवतु। [सोत्थि भोदीए। बहुफल एद वद होदु।]

देवी – आर्यपुत्र इतस्तावत्। [अज्जउत्त इदो दाव।]

राजा — अयमस्मि।

देवी— (राज्ञ पूजामभिनीय प्राञ्जलि प्रणिपत्य) एषा अह देवतामिथुन रोहिणीमृगलाञ्छन साक्षीकृत्य आर्यपुत्रमनुप्रसादयामि। अद्यप्रभृति या स्त्रियमार्यपुत्र प्रार्थयते या आर्यपुत्रसमागमप्रणयिनी तया मया प्रीतिबन्धेन वर्तितव्यमिति। [एसा अह देवदामिहुण रोहिणीमिअलञ्छण सक्खीकरिअ अज्जउत्त अणुप्पसादेमि। अज्जपहुदि ज इत्थिअ अज्जउत्तल पत्थेदि जा अज्जउत्तसमाअमप्पणइणी ताए मए पीदिबन्धेण वत्तिदव्वत्ति।]

उर्वशी – अहो न जाने किपरमस्या वचनमिति। मम पुनर्विश्वासविशद हृदय सवृत्तम्। [अम्हहे ण आणे किपर से वअणति। मम उण वीसासबिसद हिअअ सवुत्त।]

चित्रलेखा — सखि महानुभावया पतिव्रतयाभ्यनुज्ञातोऽनन्तरायस्ते प्रियसमागमो भविष्यति। [सहि महाणुहावाए पदिव्वदाए अब्भणुण्णादो अणन्तराआ दे पिअसमाअमो हविस्सदि।]

ವಿದೂಷಕ— (ಮೋದಕ ತಟ್ಟೆಯನ್ನು ತೆಗೆದುಕೊಂಡು) ಮಹಾರಾಣೀ, ನಿನಗೆ ಕಲ್ಯಾಣವಾಗಿ ನಿನ್ನೀ ವ್ರತವು ನಿನಗೆ ಬಹುವಿಧವಾದ ಫಲವನ್ನು ಕೊಡಲಿ

ದೇವೀ — ಆರ್ಯಪುತ್ರನೆ, ಸ್ವಲ್ಪ ಇಲ್ಲಿ ಬರಬೇಕು.

ರಾಜಾ — ಇದೊ, ಬಂದೆನು

ದೇವೀ— (ರಾಜನನ್ನು ಪೂಜಿಸುವಂತೆ ನಟಿಸಿ ಕೈಜೋಡಿಸಿ ನಮಸ್ಕರಿಸಿ) ದೇವ ದಂಪತಿಗಳಾದ ಈ ರೋಹಿಣಿ ಮತ್ತು ಚಂದ್ರಮರನ್ನು ಸಾಕ್ಷಿಯಾಗಿಟ್ಟುಕೊಂಡು ಆರ್ಯ ಪುತ್ರನನ್ನು ಆರಾಧಿಸುವೆನು. [ಸಂತೋಷಪಡಿಸುವೆನು.] ಇಂದಿನಿಂದ ಆರ್ಯಪುತ್ರನು ಯಾವ ಸ್ತ್ರೀಯಲ್ಲಿ ಅನುರಕ್ತನಾಗುವನೋ, ಮತ್ತು ಯಾವ ಸ್ತ್ರೀಯು ಆರ್ಯಪುತ್ರನ ಸಮಾ ಗಮವನ್ನು ಪಡೆಯಲಿಚ್ಛಿಸುವಳೋ ಆ ಸ್ತ್ರೀಯರ ಸಂಗಡ ನಾನು ಸ್ನೇಹದಿಂದ ನಡೆದು ಕೊಳ್ಳುವೆನು. (ವರ್ತಿಸುವೆ.)

ಉರ್ವಶೀ— ಸಖಿ, ಇವಳ ಮಾತಿನ ಮರ್ಮವು ನನಗೆ ತಿಳಿಯದು ಆದರೂ, ನನ್ನ ಮನಸ್ಸಿಗೆ ಮಾತ್ರ ನಂಬಿಕೆಯಿಂದ ನೆಮ್ಮದಿಯುಂಟಾಗಿದೆ.

ಚಿತ್ರಲೇಖಾ — ಗೆಳತಿ, ಉದಾರ ಮನಸ್ಸಿನವಳಾದ ಈ ಪತಿವ್ರತೆಯು ನಿಮ್ಮ ಸಮಾಗಮಕ್ಕೆ ತನ್ನ ಅನುಮತಿಯನ್ನು ಕೊಟ್ಟಿರುವಳು. ಇನ್ನು ಮೇಲೆ ನಿನಗೆ ನಿನ್ನ ಇನಿಯನ ಸಮಾಗಮವು ನಿರ್ವಿಘ್ನವಾಗಿ ಉಂಟಾಗುವದು.

विदूषक – (अपवार्य) छिन्नहस्तो मत्स्ये पलायिते निर्विण्णो धीवरो भणति धर्मो मे भविष्यतीति। भवति किं तादृश प्रियस्तत्रभवान्। [छिन्नहत्थो मच्छे पलाइदे णिव्विण्णो धीवरो भणादि धम्मो मे हविस्सदित्ति। (प्रकाशम्) भोदि किं तारिसो पिओ तत्तभव।]

देवी – मूढ अह खल्वात्मन सुखावसानेनार्यपुत्रस्य सुखमिच्छामि। एतावता चिन्तय तावत्प्रियो न वेति। [मूढ अह खु अत्तणो सुहावसाणेण अज्जउत्तस्स सुह इच्छामि। एत्तिएण चिन्तेहि दाव पिओ ण वत्ति।]

राजा – दातु वा प्रभवसि मामन्यस्मै कर्तुमेव वा दासम्।

नाह पुनस्तथा त्व यथा हि मा शङ्कसे भीरु ॥ १४ ॥

देवी – भव वा मा वा। यथानिर्दिष्ट सपादित प्रियानुप्रसादन व्रतम्। दारिका एत गच्छाम। [होहि वा मा वा। जधाणिद्दिट्ठ सपादिद पिआणुप्पसादण वद। दारिआओ एध गच्छह्म।] (प्रस्थिता देवी)

राजा – प्रिये न खलु प्रसादितोऽस्मि यदि सप्रति विहाय गम्यते।

देवी – आर्यपुत्र अलङ्घितपूर्वो मया नियम। [अज्जउत्त अलङ्घितपुव्वो मए णिअमो।] (निष्क्रान्ता सपरिवारा देवी)

ವಿದೂಷಕ — (ಹಿಂತಿರುಗಿಕೊಂಡು ರಾಜನನ್ನು ಕುರಿತು) ಮೀನವು ಕೈತಪ್ಪಿಸಿಕೊಂಡು ಹೋದಮೇಲೆ ನಿರಾಶೆಗೊಂಡ ಜಾಲಗಾರನು, ' ಹೋಗಲಿ ಪುಣ್ಯ ಬರುತ್ತದೆ ' ಎಂದು ಅನ್ನುವನು. (ಪ್ರಕಾಶವಾಗಿ) ಮಹಾರಾಣಿಯೇ ಮಹಾರಾಜನು ನಿನಗೆ ಅಷ್ಟು ಪ್ರಿಯನಾಗಿರುವನೊ ?

ದೇವೀ — ಮೂರ್ಖನೇ, ನನ್ನ ಸುಖವನ್ನು ತ್ಯಾಗಮಾಡಿಯಾದರೂ ಆರ್ಯಪುತ್ರನ ಸುಖವನ್ನು ಇಚ್ಛಿಸುವೆನು ಇದರ ಮೇಲಿಂದ ಆರ್ಯಪುತ್ರನು ನನಗೆ ಪ್ರಿಯನಾಗಿರುವನೊ ಇಲ್ಲವೊ ಎಂಬುದನ್ನು ನೀನೆ ನಿರ್ಧರಿಸು

ರಾಜಾ — ಎಲೈ ಭೀರುವೆ, ನನ್ನನ್ನು ಬೇರೆ ಸ್ತ್ರೀಯಳಿಗೆ ಕೊಡಲಿಕ್ಕಾಗಲಿ ಅದರೆ, ಅದವಾ ನಿನ್ನ ದಾಸನನ್ನಾಗಿ ಮಾಡಿಕೊಳ್ಳಲಿಕ್ಕಾಗಲಿ ನೀನು ಸಮರ್ಥಳು. ನೀನು ನನ್ನಲ್ಲಿ ಸಂದೇಹ ಪಟ್ಟಂತೆ ಮಾತ್ರ ನಾಇಲ್ಲ ॥ ೧೪ ॥

ದೇವೀ — ನೀನು, ಹಾಗೆ ಇರಲಿ ಅಥವಾ ಬಿಡಲಿ ನಿರ್ದಿಷ್ಟ ಪಡಿಸಿದಂತೆ ನನ್ನ ಪ್ರಿಯ ಪ್ರಸಾದನವೆಂಬ ವ್ರತವಂತೂ ನೆರವೇರಿತು ಕನ್ನಿಕೆಯರೇ, ಬನ್ನಿರಿ, ಹೋಗೋಣ.
(ರಾಣಿಯು ಹೊರಡುವಳು..)

ರಾಜಾ — ಪ್ರಿಯೆ, ನೀನು ಈಗ ಹೀಗೆ ನನ್ನನ್ನು ಬಿಟ್ಟುಹೋದರೆ, ನೀನು ನನ್ನನ್ನು ಸತ್ಯವಾಗಿಯೂ ಸಂತೋಷ ಪಡಿಸಿದಂತೆ ಆಗುವದಿಲ್ಲ

ದೇವಿ — ಆರ್ಯಪುತ್ರನೆ, ನಾನೆಂದಿಗೂ ವ್ರತನಿಯಮಗಳನ್ನು ಮೀರಿ ನಡೆದಿಲ್ಲ.
(ರಾಣಿಯು ತನ್ನ ಪರಿವಾರದೊಂದಿಗೆ ಹೊರಟು ಹೋಗುವಳು.)

उर्वशी – हला प्रियकलत्रो राजर्षि । न पुनर्हृदय निवर्तयितु शक्नोमि । [हला पिअकलत्तो राएमी । ण उण हिअअ णिवत्तेदु सक्कुणोमि ।]

चित्रलेखा – किं पुनस्त्वया निराशया निवर्त्यते । [किं उण तुए णिरासाए णिवत्तीअदि ।]

राजा – (आसनमुपेत्य) वयस्य न खलु दूरं गता देवी ।

विदूषक – भण विस्रब्ध यदसि वक्तुकाम । असाध्य इति वैद्येनातुर इव स्वैर मुक्तो भवास्तत्रभवत्या । [भण वीसध्ध ज सि वत्तुकामो । असज्झोत्ति वेज्जेण आदुरो विअ सेर मुत्तो भव तत्तहोदीए ।]

राजा – अपि नामोर्वशी–

उर्वशी – अद्य कृतार्था भवेत् । [अज्ज किदथ्था भवे ।]

राजा – **गूढ नूपुरशब्दमात्रमपि मे कान्त श्रुतौ पातयेत्**
पश्चादेत्य शनै करोत्पलवृते कुर्वीत वा लोचने ।
हर्म्येऽस्मिन्नवतीर्य साध्वसवशान्मन्दायमाना बला-
दानीयेत पदात्पद चतुरया सख्या ममोपान्तिकम् ॥ १५ ॥

ಉರ್ವಶೀ —ಎಲೈ ಚಿತ್ರಲೇಖೆ, ಈ ರಾಜರ್ಷಿಯು ಪತ್ನಿಯನ್ನೂ ಬಹಳ ಪ್ರೀತಿ ಸುವನು ಆದರೂ ಇವನಲ್ಲಿಟ್ಟ ನನ್ನ ಮನಸ್ಸನ್ನು ನಾನು ಹಿಂತೆಗೆದುಕೊಳ್ಳಲಾರೆನು

ಚಿತ್ರಲೇಖಾ – ನಿರಾಶಳಾಗಿ ನಿನ್ನ ಹೃದಯವನ್ನು ಹಿಂತೆಗೆದುಕೊಳ್ಳಲಿರುವಿಯಾ ?

ರಾಜಾ – (ತನ್ನ ಆಸನದ ಹತ್ತಿರ ಬಂದು) ಗೆಳೆಯನ, ದೇವಿಯು ಇನ್ನೂ ದೂರ ಹೋಗಿಲ್ಲವೆ?

ವಿದೂಷಕ– ರೋಗವನ್ನು ನಿವಾರಣೆ ಮಾಡುವದು ಅಸಾಧ್ಯವೆಂದು ತಿಳಿದಮೇಲೆ ವೈದ್ಯನು ರೋಗಿಯನ್ನು ನಿರಾಶೆಯಿಂದ ಬಿಡುವಂತೆ, ರಾಣಿಯು [ನಿನ್ನ ಮನಸ್ಸಿನಲ್ಲಿಯ ಭ್ರಾಂತಿಯನ್ನು ನಿವಾರಿಸಲು ಅಸಾಧ್ಯವೆಂದು ತಿಳಿದು] ನಿನ್ನನ್ನು ಸ್ವಚ್ಛಂದವಾಗಿ ಬಿಟ್ಟು ಬಿಟ್ಟಿರುವಳು. ಆದ್ದರಿಂದ ನೀನೀಗ ಹೇಳಬೇಕೆಂದಿರುವದನ್ನು ನಿರ್ಭಯನಾಗಿ ಹೇಳು

ರಾಜಾ— ಆ ಉರ್ವಶಿಯು. ... ..

ಉರ್ವಶೀ —....ಇಂದು ಕೃತಾರ್ಥಳಾಗಿರುವಳಲ್ಲವೆ ?

ರಾಜಾ— [ಆ ಉರ್ವಶಿಯು] ಅದೃಶ್ಯಳಾಗಿಯೇ ಇದ್ದುಕೊಂಡು [ಅಥವಾ ಗುಪ್ತವಾಗಿ] ನನ್ನ ಕಿವಿಯ ಮೇಲೆ ತನ್ನ ನೂಪುರುದ ಕರ್ಣಮಧುರವಾದ ಕಿಣಿ ಕಿಣಿ ಧ್ವನಿ ಯನ್ನಾದರೂ ಕೆಡುಹಬಹುದಲ್ಲವೆ ? ಅಥವಾ, ಸದ್ದಿಲ್ಲದೇ ಸಾವಕಾಶವಾಗಿ ನನ್ನ ಬೆನ್ನು ಹಿಂದೆ ಬಂದು ತನ್ನ ಕರಕಮಲಗಳಿಂದ ನನ್ನ ಕಣ್ಣುಗಳನ್ನು ಮುಚ್ಚಬಹುದಲ್ಲವೆ ? ಅಥವಾ ಈ ಪ್ರಾಸಾದದ ಮೇಲೆ ಇಳಿದು ಭಯದಿಂದ ಮೆಲ್ಲಗೆ ಬರುತ್ತಿರಲು [ಅಥವಾ ಹಿಂಜರಿಯು ತ್ತಿರಲು] ಅವಳ ಚತುರಳಾದ ಸಖಿಯಿಂದ ಬಲಾತ್ಕಾರದಿಂದ ಸಾವಕಾಶವಾಗಿ ನನ್ನೆಡೆಗೆ ಕರೆತರಲ್ಪಡಬಹುದಲ್ಲವೇ ? ॥ ೧೫ ॥

उर्वशी – हला इम तावदस्य मनोरथं संपादयिष्यामि । [हला इमं दाव से मणोरहं संपादयिस्स ।] (पृष्ठतो गत्वा राज्ञो नयने संवृणोति)

(चित्रलेखा विदूषकं संज्ञां लम्भयति)

राजा – (स्पर्शं रूपयित्वा) सखे नारायणोरुसंभवा सेयं वरोरूः ।

विदूषक – कथं भवानवगच्छति । [कहं भवं अवगच्छदि ।]

राजा – किमत्राज्ञेयम् ।

अङ्गमनङ्गक्लिष्टं सुखयेदन्या न मे करस्पर्शात् ।
नोच्छ्वसिति तपनकिरणैश्चन्द्रस्येवांशुभिः कुमुदम् ॥ १६ ॥

उर्वशी — (हस्तावपनीय उत्तिष्ठति । किंचिदपसृत्य) जयतु जयतु महाराज । जदु जेदु महाराओ ।]

राजा - सुन्दरि स्वागतम् । (एकासने उपवेशयति)

चित्रलेखा – अपि सुखं वयस्यस्य । [अवि सुहं वअस्सस्स ।]

राजा — नन्वेतदुपपन्नम् ।

ಉರ್ವಶೀ— ಗೆಳತಿ, ಇವನೀ ಇಚ್ಛೆಯನ್ನು ಪೂರ್ಣಗೊಳಿಸುವೆನು

(ಹಿಂದಿನಿಂದ ಹೋಗಿ ಅರಸನ ಕಣ್ಣುಗಳನ್ನು ಮುಚ್ಚುವಳು.)

(ಚಿತ್ರಲೇಖೆಯು ವಿದೂಷಕನಿಗೆ ಸನ್ನೆ ಮಾಡುವಳು)

ರಾಜಾ — (ಸ್ಪರ್ಶ ಸುಖವನ್ನು ಸೂಚಿಸಿ) ಮಿತ್ರನೆ, ಇವಳು ನಾರಾಯಣ ಮುನಿಯ ತೊಡೆಯಲ್ಲಿ ಹುಟ್ಟಿದ ಆ ಸುಂದರಿಯೆ [ಶಬ್ದಶಃ-ಸುಂದರವಾದ ತೊಡೆಯುಳ್ಳವಳು]

ವಿದೂಷಕ— ನಿನಗೆ ಹೇಗೆ ಗೊತ್ತಾಯಿತು.

ರಾಜಾ— ಇಲ್ಲಿ ತಿಳಿಯದಂತಹದು ಏನಿದೆ ?

ಇನ್ನಾವಳೂ ಮದನಬಾಧೆಯಿಂದ ಬಳಲಿದ, ನನ್ನ ಈ ದೇಹವನ್ನು, ತನ್ನ ಕೈಯ ನೋಂಕಿನಿಂದ ತಣಿಸಲಾರಳು. [ಹೇಗೆಂದರೆ] ಕುಮುದವು [ರಾತ್ರಿ ಕಮಲ] ಚಂದ್ರನ ತಂಪಾದ ಕಿರಣಗಳಿಂದ ಅರಳಿದಂತೆ ಸೂರ್ಯನ ಪ್ರಖರವಾದ ಕಿರಣಗಳಿಂದ ಅರಳುವದಿಲ್ಲ ॥ ೧೬ ॥

ಉರ್ವಶೀ— (ಕೈಗಳನ್ನು ತೆಗೆದು–ಏಳುವಳು ಮತ್ತು ಸ್ವಲ್ಪ ದೂರ ಸರಿದು) ಮಹಾರಾಜರಿಗೆ ಜಯವಾಗಲಿ, ಜಯವಾಗಲಿ

ರಾಜಾ – ಎಲೈ ಸುಂದರಿ, ನಿನಗೆ ಸ್ವಾಗತವು.

ಚಿತ್ರಲೇಖಾ— ಮಹಾರಾಜನಿಗೆ [ಶಬ್ದಶಃ ವಯಸ್ಯನಿಗೆ] ಸೌಖ್ಯವೆ (ತನ್ನೊಂದಿಗೆ ಒಂದೇ ಆಸನದ ಮೇಲೆ ಕೂಡ್ರಿಸುವನು)

ರಾಜಾ – ಈಗ ಮಾತ್ರ ನನಗೆ ಎಲ್ಲವೂ ಸೌಖ್ಯವೆ. [ಅಥವಾ-ನೀನು ಈಗ ಹೀಗೆ ಕೇಳುವದು ಸಹಜವೆ–ಯೋಗ್ಯವೆ–]

उर्वशी – हला देव्या दत्तो महाराज । अतोऽस्य प्रणयवतीव शरीरसपर्कं गतास्मि । मा खलु मा पुरोभागिनी समर्थयस्व । [हला देवीए दिण्णो महाराओ । अदो से पणअवदी विअ सरीरसपक्कं गदह्मि । मा खु म पुरोभाइणि समत्थेहि ।]

विदूषक.– कथमिहैव युवयोरस्तमित सूर्य । [कह इह ज्जेव तुम्हाण अत्थमिदो मुज्जो ।]

राजा – (उर्वशीमवलोक्य)

देव्या दत्त इति यदि व्यापार व्रजसि मे शरीरेऽस्मिन् ।
प्रथम कस्यानुमते चोरितमेतत् त्वया हृदयम् ॥ १७ ॥

चित्रलेखा – वयस्य निरुत्तरैषा । साप्रत मम विज्ञाप्य श्रूयताम् । [वअस्स णिरुत्तरा एसा । सपद मह विण्णप्प सुणीअदु ।]

राजा — अवहितोऽस्मि ।

चित्रलेखा — वसन्तानन्तरे उष्णसमये भगवान्सूर्यो मयोपचरितव्य । तद्यथेय मे प्रियसखी स्वर्गस्य नोत्कण्ठते तथा कर्तव्यम् । [वसन्ताणन्तरे उण्हसमए भअव मुज्जो मए उवचरिदव्वो । ता जहा इअ मे पिअसही सग्गस्स ण उक्कण्ठेदि तहा वअस्सेण कादव्व ।]

ಊರ್ವಶೀ— ಗೆಳತಿ, ಮಹಾರಾಣಿಯೇ ಮಹಾರಾಜನನ್ನು ನನಗೊಪ್ಪಿಸುವಳು ಆದ್ದರಿಂದ ಪ್ರೀತಿಯ ಹೆಂಡತಿಯಂತೆ ಅವನ ಶರೀರದ ಸಂಪರ್ಕವನ್ನು ಹೊಂದಿದೆನು ನಾನು ಅಧಿಕಪ್ರಸಂಗಿಯೆಂದು ಎಣಿಸಬೇಡ

ವಿದೂಷಕ— ನೀವು (ಊರ್ವಶೀ ಚಿತ್ರಲೇಖೆಯರು) ಸೂರ್ಯಾಸ್ತ ಸಮಯದಲ್ಲಿ ಇಲ್ಲಿಯೇ ಇದ್ದಿರಾ ? [ಸಂಜೆಯಿಂದಲೂ ಇಲ್ಲಿಯೇ ಇದ್ದಿರೋ] [ಅಥವಾ- ನಿಮಗೆ (ಊರ್ವಶೀ, ರಾಜರು) ಇಲ್ಲಿಯೇ ಕತ್ತಲೆಯಾಯಿತೆ?]

ರಾಜಾ – ಊರ್ವಶಿಯನ್ನು ನೋಡಿ—

ಮಹಾರಾಣಿಯು ನನ್ನ ಶರೀರವನ್ನು ನಿನಗೆ ಕೊಟ್ಟಳೆಂದು ನೀನದನ್ನು ಉಪಭೋಗಿಸುವಿಯಾದರೆ, ಮೊದಲು ಯಾರ ಅನುಮತಿಯಿಂದ ನನ್ನ ಈ ಹೃದಯವನ್ನು [ಕದ್ದುಕೊಂಡೆ] ಸೆಳೆದುಕೊಂಡೆ ॥ ೧೭ ॥

ಚಿತ್ರಲೇಖಾ— ವಯಸ್ಯನೆ, ಅವಳು (ಈ ಪ್ರಶ್ನೆಗೆ) ಉತ್ತರವನ್ನು ಕೊಡಲಾರಳು. ಈಗ ನನ್ನದೊಂದು ವಿಜ್ಞಾಪನೆಯನ್ನು ಕೇಳು.

ರಾಜಾ — ಲಕ್ಷ್ಯಗೊಟ್ಟು ಕೇಳುವೆನು ಹೇಳು.

ಚಿತ್ರಲೇಖಾ —ವಸಂತಋತುವು ಕಳೆದ ಮೇಲೆ ಬೇಸಿಗೆಯ ಕಾಲದಲ್ಲಿ ನಾನು ಸೂರ್ಯೋಪಾಸನೆಯನ್ನು ಮಾಡಬೇಕಾಗಿದೆ. ಆದ್ದರಿಂದ ನನ್ನ ಈ ಪ್ರಿಯ ಸಖಿಯು ಸ್ವರ್ಗದ ಸಲುವಾಗಿ ಆತುರಳಾಗದ ಹಾಗೆ ನೀನು ಮಾಡಬೇಕು. [ಅಂದರೆ- ಊರ್ವಶಿಯು ಸ್ವರ್ಗಸುಖವನ್ನೇ ಮರೆಯುವಂತೆ ನಿನವಳಿಗೆ ಸುಖವನ್ನು ಕೊಡು.]

विदूषक – किं वा स्वर्गे स्मर्तव्यम् । न वा अश्यते न वा पीयते । केवलमनिमिषै-र्नयनैर्मीना विडम्ब्यन्ते । [किं वा सग्गे सुमरिदव्व । ण वा अण्हीअदि ण वा पीअदि । केवल अणिमिसेहि णअणेहि मीणा विडम्बीअन्दि ।]

राजा — भद्रे

अनिर्देश्यसुखः स्वर्गः कस्तं विस्मारयिष्यति ।
अनन्यनारीसामान्यो दासस्त्वस्याः पुरूरवाः ॥ १८ ॥

चित्रलेखा — अनुगृहीतास्मि । हला उर्वशि अकातरा भूत्वा विसर्जय माम् । [अणुगहिदह्मि । हला उव्वसि अकाअदरा भविअ विसज्जेहि मं ।]

उर्वशी - (चित्रलेखां परिष्वज्य) सखि मा खलु मां विस्मर । [सहि मा खु मं विसुमरेहि ।]

चित्रलेखा - (सस्मितम्) वयस्येन सगता त्वमेवैतन्मया याचितव्या । [वअस्सेण सगदा तुमं एव्व एदं मए जाचिदव्वा ।]

(राजानं प्रणम्य निष्क्रान्ता)

विदूषक — दिष्ट्या मनोरथसपत्त्या वर्धते भवान् । [दिट्ठआ मणोरहसपत्तीए वढ्ढदि भवं ।]

ವಿದೂಷಕ— ಸ್ವರ್ಗದಲ್ಲಿ ನೆನಸುವಂತಹದೇನಿದೆ ? ತಿನ್ನುವದಿಲ್ಲ. ಕುಡಿಯುವದಿಲ್ಲ. ಕಣ್ಣುಗಳನ್ನು ಪಿಳುಕಿಸದೆ ಮೀನಗಳ ವಿಡಂಬನೆಯನ್ನು ಮಾತ್ರ ಮಾಡಲಾಗುವದು [ಅಂದರೆ– ಸ್ವರ್ಗದಲ್ಲಿಯ ದೇವತೆಗಳು ಹಸಿವೆ ನೀರಡಿಕೆಗಳಿಲ್ಲದೇ, ಮೀನುಗಳಂತೆ ಯಾವಾಗಲೂ ಕಣ್ಣುಗಳನ್ನು ಪಿಳುಕಸದೇ ಇರುವರು]

ರಾಜಾ— ಮಾನ್ಯಳೇ,

ಸ್ವರ್ಗದಲ್ಲಿಯ ಸುಖವು ಅಗಣಿತವಾಗದದ್ದು. [ಅದನ್ನು ಶಬ್ದಗಳಿಂದ ವರ್ಣಿಸಲು ಅಶಕ್ಯವು] ಆ ಸ್ವರ್ಗ ಸುಖವನ್ನು ಮರೆಸುವದೂ ಯಾರಿಗೂ ಶಕ್ಯವಿಲ್ಲ. ಆದರೂ, ಈ ಪುರೂರವನು ಬೇರೆ ಸ್ತ್ರೀಯರಿಗೆ ಅಲಭ್ಯನಾಗಿದ್ದು, ಕೇವಲ ಉರ್ವಶಿಯ ದಾಸನಾಗುವನು ಎಂದು ಮಾತ್ರ ನಾನು ಭರವಸೆ ಕೊಡುವೆನು ॥೧೮॥

ಚಿತ್ರಲೇಖಾ — ನಾನು ಅನುಗ್ರಹೀತಳಾದೆನು ಸಖಿ ಉರ್ವಶಿ, ಯಾವ ಭಯವೂ ಇಲ್ಲದೇ, ನನಗೆ ಈಗ ಹೋಗಲು ಅನುಮತಿಯನ್ನು ಕೊಡು

ಉರ್ವಶೀ - (ಚಿತ್ರಲೇಖೆಯನ್ನು ಅಪ್ಪಿಕೊಂಡು) ಸಖಿ, ನನ್ನನ್ನು ಮರೆಯಬೇಡ

ಚಿತ್ರಲೇಖಾ— (ನಸುನಗುತ್ತ) ಈ ಮಹಾರಾಜನ ಸಮಾಗಮವನ್ನು ಪಡೆದ ನಿನಗೆ ನಾನು ಹೇಗೆ ಬಿನ್ನವಿಸಿಕೊಳ್ಳಬೇಕು.?

(ರಾಜನನ್ನು ನಮಸ್ಕರಿಸಿ ಹೊರಟು ಹೋಗುವಳು)

ವಿದೂಷಕ - ನಿನ್ನ ಮನಸ್ಸಿನ ಬಯಕೆಯು ಕೈಗೂಡಿದ್ದಕ್ಕಾಗಿ ಅಭಿವೃದ್ಧಿಯನ್ನು ಹೊಂದುವ ನಿನಗೆ ನನ್ನ ಅಭಿನಂದನೆಗಳು.

राजा — इय तावद्वृद्धिर्मम । पश्य

सामन्तमौलिमणिरञ्जितशासनाङ्क-
मेकातपत्रमवनेर्न तथा प्रभुत्वम् ।
अस्या सखे चरणयोरहमद्य कान्त-
माज्ञाकरत्वमधिगम्य यथा कृतार्थ ॥ १९ ॥

उर्वशी – नास्ति मे विभवोऽत॰ प्रियतर मन्त्रयितुम् । [णत्थि मे विहवो अदो पिअदर मन्तिदु ।]

राजा – (उर्वशी हस्तेनावलम्ब्य) अहो विरुद्धसवर्धन ईप्सितलाभो नाम ।

पादास्त एव शशिन सुखयन्ति गात्र
बाणास्त एव मदनस्य ममानुकूला ।
सरम्भरूक्षमिव सुन्दरि यद्यदासीत्
त्वत्सगमेन मम तत्तदिवानुनीतम् ॥ २० ॥

उर्वशी – अपराद्धास्मि चिरकारिका महाराजस्य । [अवरध्धह्मि चिरकारिआ महाराअस्स ।]

ರಾಜಾ – ಇದು ನಿಜವಾಗಿಯೂ ನನ್ನ ಹೆಚ್ಚಿನ ಅಭಿವೃದ್ಧಿಯು ನೋಡು

ಗೆಳೆಯನೆ, ನನಗಿಂದು ನನ್ನೀ ಪ್ರಿಯತಮೆಯ ಚರಣಕಮಲಗಳ ಸೇವೆಯ ಭಾಗ್ಯವು ದೊರೆತದ್ದರಿಂದ ನಾನು ಕೃತಾರ್ಥನಾದಷ್ಟು, [ಶಬ್ದಶಃ ಸಾಮಂತರಾಜರ ತಲೆಯ ಮೇಲಿನ ಕಿರೀಟಗಳ ರತ್ನಪ್ರಭೆಯಿಂದ ಬೆಳಗುವ ಶಾಸನವುಳ್ಳ] ಸಾಮಂತರಾಜರಿಗ ಶಿರ ಸಾವಾನ್ಯವಾದ, ಈ ಭೂಮಿಯ ಏಕಚಕ್ರಾಧಿಪತ್ಯವು ದೊರಕಿದ್ದರೂ ನಾನು ಕೃತಾರ್ಥ ನಾಗಿದ್ದಿಲ್ಲ. [ಅಂದರೆ ಇಡೀ ಭೂಮಂಡಲದ ಚಕ್ರಾಧಿಪತ್ಯಕ್ಕಿಂತ ನನ್ನ ಪ್ರಿಯತಮೆಯಾದ ಈ ಉರ್ವಶಿಯ ಸೇವೆಯೇ ಮಿಗಲಾದದ್ದು.] ॥ ೧೯ ॥

ಉರ್ವಶೀ — ಇದಕ್ಕಿಂತಲೂ ಹೆಚ್ಚಿನ ಪ್ರಿಯವಾದ ಮಾತನ್ನು ಆಡುವಷ್ಟು ಶಬ ಸಂಪತ್ತು ನನ್ನಲ್ಲಿಲ್ಲ.

ರಾಜಾ — (ಉರ್ವಶಿಯ ಕೈಹಿಡಿದು) ಆಹ! ಅಭಿಷ್ಟಸಿದ್ಧಿಯು ಬೇರೆ ಪರಿಣಾಮ ಗಳನ್ನೇಉಂಟುವದಲ್ಲ ! [ಮೊದಲು ಪ್ರತಿಕೂಲವಾದದ್ದು ಈಗ ಅನುಕೂಲವಾಗಿರುವದು]

[ಮೊದಲು ನನಗೆ ಅತ್ಯಂತ ಅಸಹ್ಯವಾದ] ಅವೇ ಚಂದ್ರಕಿರಣಗಳು ಈಗ ನನಗೆ ಅನುಕೂಲವಾಗಿವೆ ಹೀಗೆ ಎಲೈ ಸುಂದರಿ, ಮೊದಲು ನಾನು ನಿನ್ನ ವಿಯೋಗದಲ್ಲಿದ್ದಾಗ ಯಾವದು ಅತ್ಯಂತ ತಾಪದಾಯಕವಾಗಿದ್ದಿತೋ ಅದೆಲ್ಲವೂ ಈಗ ನಿನ್ನ ಸಮಾಗಮದಿಂದ ಹಿತಕರವಾಗಿದೆ. ॥ ೨೦ ॥

ಉರ್ವಶೀ—ಮಹಾರಾಜನೆ, ಇಲ್ಲಿಯವರೆಗೆ ನಿನ್ನನ್ನು ತಡೆಹಿಡಿದು ನಿನಗೆ ತೊಂದರೆ ಕೊಟ್ಟೆನು. ಕ್ಷಮಿಸಬೇಕು.

राजा – मा मैवम् ।

यदेवोपनत दु खात्सुख तद्रसवत्तरम् ।
निर्वाणाय तरुच्छाया तप्तस्य हि विशेषत ॥ २१ ॥

विदूषक – भो सेविता प्रदोषरमणीयाश्चन्द्रपादा । समय खलु ते वासगृहप्रवेशस्य । [भो सेविदा पदोसरमणीआ चन्दवादा । समओ खु दे वासघरपवेसस्स ।]

राजा – तेन हि सख्यास्ते मार्गमादेशय ।

विदूषक — इत इतो भवती । [इदो इदो भवदी ।] (परिक्रामन्ति)

राजा – सुन्दरि इयमिदानीमभ्यर्थना ।

उर्वशी – कथमिव । [कह विअ ।]

राजा – **अनुपनतमनोरथस्य पूर्व**
शतगुणितेव गता मम त्रियामा ।
यदि तु तव समागमे तथैव
प्रसरति सुभ्रु तत. कृती भवेयम् ॥ २२ ॥

(इति निष्क्रान्ता सर्वे)

इति तृतीयोऽङ्क ।

ರಾಜಾ— ಹಾಗಲ್ಲ !

ಅತ್ಯಂತ ದುಃಖವನ್ನು ಅನುಭವಿಸಿದ ಮೇಲೆ ಸುಖವು ಬಂದರೆ ಅದು ಹೆಚ್ಚು ಹಿತ ಕರವೆನಿಸುವದು ಹೇಗೆಂದರೆ, ಬಿಸಿಲಿನ ಬೇಗೆಯಿಂದ ಕಂಗಾಲಾದವನಿಗೇ ಗಿಡದ ನೆರಳು ಹೆಚ್ಚು [ವಿಶೇಷವಾಗಿ] ಸುಖವನ್ನು ಕೊಡುವದು ॥ ೨೧ ॥

ವಿದೂಷಕ – ಗೆಳೆಯ ಪ್ರದೋಷಕಾಲದ ಆಲ್ಹಾದಕರವಾದ ಚಂದ್ರಕಿರಣಗಳನ್ನು ನೀನೀಗ ಸೇವಿಸಿದಿ ಆದ್ದರಿಂದ ಇನ್ನು ಶಯ್ಯಾಗಾರದಲ್ಲಿ ಪ್ರವೇಶಿಸಬೇಕು.

ರಾಜಾ – ಹಾಗಾದರೆ ನಿನ್ನೀ ಸಖಿಗೆ ಮಾರ್ಗವನ್ನು ತೋರಿಸು

ವಿದೂಷಕ —ಎಲೈ ಸುಂದರಿ, ಇತ್ತ ಬಾ, ಇತ್ತ ಬಾ (ಸುತ್ತಾಡುವರು)

ರಾಜಾ— ಎಲೈ ಸುಂದರಿ, ಈಗ ಇದೇ ನನ್ನ ಪ್ರಾರ್ಥನೆಯು

ಉರ್ವಶೀ —ಅದಾವುದು ?

ರಾಜಾ—ಮೊದಲು ನನ್ನ ಮನೋರಥವು [ನಾನು ಬಯಸಿದ ನಿನ್ನ ಸಮಾಗಮ ಸುಖವು] ಕೈಗೂಡದೆ ಇರುವಾಗ ರಾತ್ರಿಯ ಮೂರು ಪ್ರಹರಗಳು ನೂರು ಪ್ರಹರಗಳಂತೆ ಅನಿಸುತ್ತಿದ್ದವು ಈಗ ನಾನು ನಿನ್ನ ಸಮಾಗಮದಲ್ಲಿದ್ದುದರಿಂದ ಆಗಿನಂತೆಯೇ ರಾತ್ರಿಯು ನೂರು ಪ್ರಹರಗಳಷ್ಟು ಸುದೀರ್ಘವಾದರೆ, ನಾನು ನಿಜವಾಗಿಯೂ ಧನ್ಯನು [ವಿಯೋಗ ದಲ್ಲಿದ್ದಾಗ ಸುದೀರ್ಘವಾಗಿ ಕಂಡ ರಾತ್ರಿಯು ಈಗ ಬಹಳ ಸಣ್ಣದಾಗಿ ತೋರುವದರಿಂದ ರಾಜನು ಹೀಗೆ ಪ್ರಾರ್ಥಿಸುವನು .] ॥೨೨॥

(ಎಲ್ಲರೂ ಹೊರಟುಹೋಗುವರು)

ಇಲ್ಲಿಗೆ ಮೂರನೆಯ ಅಂಕು ಮುಗಿದುದು.

चतुर्थोऽङ्कः ।

(नेपथ्ये सहजन्याचित्रलेखयो प्रावेशिका आक्षिप्तिका)

प्रियसखीवियोगविमना सखी हंसी व्याकुला समुल्लपति ।
सूर्यकरस्पर्शविकसिततामरसे सरोवरोत्सङ्गे ॥ १ ॥

[पिअसहिविओ अविमणा सहि हंसी वाउला समुल्लवइ ।
सूरकरफसवि असिअतामरसे सरवरूसङ्गे]

(तत प्रविशति सहजन्या चित्रलेखा च । प्रवेशानन्तर)

सहचरीदु खालीढ सरोवरे स्निग्धम् ।
बाष्पाववल्लिगतनयन ताम्यति हंसीयुगलम् ॥ २ ॥

[सहचरीदुक्खालिध्धअ सरवरअम्मि सिणिध्धअ ।
वाहोवग्गिअणअणअ तम्मइ हंसीजुअलअ ॥] (इति द्विपदिकया दिशोऽवलोक्य)

सहजन्या — (सखेदम्) सखि म्लायमानशतपत्रस्येव ते मुखस्य च्छाया हृदयस्यास्वस्थता सूचयति । तत्कथय निर्वेदकरणम् । समदु.खा भवितुमिच्छामि । [सहि मिलाअमाणसद्दवत्तस्स विअ दे मुहस्स छाआ हिअअस्स अस्सथ्थद सूएदि । ता कहेहि णिव्वेदकरण । समदुक्खा भविदु इच्छामि ।]

ಅಂಕ ೪

(ತೆರೆಯ ಹಿಂದೆ ಸಹಜನ್ಯಾ ಚಿತ್ರಲೇಖೆಯರ ಪ್ರವೇಶವನ್ನು ಸೂಚಿಸುವ ಆಕ್ಷಿಪ್ತಿಕೆಯು— ವಿಶಿಷ್ಟಪ್ರಕಾರದ ಗೀತ-ಕೇಳಬರುವು.)

ಪ್ರಿಯಗೆಳತಿಯ ವಿಯೋಗದಿಂದ ನೊಂದ ಹೆಣ್ಣು ಹಂಸಪಕ್ಷಿಯು ಸೂರ್ಯಕಿರಣಗಳ ಸ್ಪರ್ಶದಿಂದ ಅರಳಿದ ಕಮಲಗಳುಳ್ಳ ಸರೋವರದಲ್ಲಿ ತನ್ನ ಗೆಳತಿಯ ಸಂಗಡ ಮಾತನಾಡುತ್ತಿರುವದು ॥ ೧ ॥

(ಬಳಿಕ ಸಹಜನ್ಯೆಯೂ ಚಿತ್ರಲೇಖೆಯೂ ಪ್ರವೇಶಿಸುವರು. ಅವರು ಪ್ರವೇಶಿಸಿದ ನಂತರ)

ತಮ್ಮ ಪ್ರಿಯಗೆಳತಿಯ ಸಲುವಾಗಿ ವ್ಯಾಕುಲಗೊಂಡ ಹಾಗು ಸ್ನೇಹವುಳ್ಳ ಎರಡು ಹೆಣ್ಣು ಹಂಸಗಳು ಕಣ್ಣೀರು ಸುರಿಸುತ್ತ, ಸರೋವರದಲ್ಲಿ ದುಃಖಪಡುತ್ತಿರುವೆ ॥ ೨ ॥

(ಎಂದು ಈ ದ್ವಿಪದಿಕೆಯಿಂದ ಎಲ್ಲ ಕಡೆಗೂ ನೋಡಿ)

ಸಹಜನ್ಯಾ— (ಖೇದದಿಂದ) ಎಲೈ ಗೆಳತಿ, ಬಾಡಿದ ಕಮಲದಂತೆ ಇರುವ ನಿನ್ನ ಕಳೆಗುಂದಿದ ಮುಖವು ನಿನ್ನ ಹೃದಯದಲ್ಲಿಯ ದುಃಖವನ್ನು ಸೂಚಿಸುವದು ಆದ್ದರಿಂದ ನಿನ್ನ ದುಃಖದ ಕಾರಣವನ್ನು ಹೇಳು. ನಿನ್ನ ದುಃಖದಲ್ಲಿ ಭಾಗಿಯಾಗಲು ಬಯಸುವೆನು.

चित्रलेखा – अप्सरोवारपर्यायेण इह भगवत सूर्यस्य पादमूलोपस्थाने वर्तमाना बलवत्खलूर्वश्या उत्कण्ठितास्मि । [अच्छरावारपज्जएण इह भअवदो सुज्जस्स पादमूलो। वट्ठाणे वट्टन्ती बलिअ खु उव्सीए उक्कण्ठिदह्मि ।]

सहजन्या – जाने युवयोरन्योन्यस्नेहम् । ततस्तत । [जाणे वो अण्णोण्णसिणेहा तदो तदो ।]

चित्रलेखा – तत एतेषु दिवसेषु को नु खलु वृत्तान्त इति प्रणिधानस्थितया मया अत्याहितमुपलब्धम् । [तदो इमाइ दिवसाइ को णु खु वुत्तन्तोत्ति पणिधाणठ्ठिदाए मए अच्चाहिद उवलध्ध ।]

सहजन्या – (सावेगम्) कीदृशमिव । [कीरिस बिअ ।]

चित्रलेखा – उर्वशी किल त राजर्षि लक्ष्मीसनाथममात्येषु निवेशितराज्यधुर गृहीत्वा कैलासशिखरोद्देश गन्धमादनवन विहर्तु गता । [उव्वसी किल राएसिं लच्छीसणाह अमच्चेसु णिवेसिदरज्जधुर गेण्हिअ केलाससिहरुद्देस गन्धमादणवण विहरिदु गदा ।]

सहजन्या – स नाम सभोगो यस्तादृशेषु प्रदेशेषु । ततस्तत । [सो णाम ‘सभोओ जो तारिसेसु पदेसेसु । तदो तदो ।]

ಚಿತ್ರಲೇಖಾ – ಅಪ್ಸರೆಯರ ಸರತಿಯ ಮೇರೆಗೆ ಈಗ ಇಲ್ಲಿ ಸೂರ್ಯನಾರಾಯಣ ಪಾದಕಮಲಗಳ ಸೇವೆಯಲ್ಲಿ ತೊಡಗಿದ್ದರಿಂದ ಪ್ರಿಯಗೆಳತಿಯಾದ ಊರ್ವಶಿಯ ವಿಷಯ ವಾಗಿ ಬಹಳೇ ಚಿಂತಾತುರಳಾಗಿರುವೆನು

ಸಹಜನ್ಯಾ—ನಿಮ್ಮ ಪರಸ್ಪರ ಸ್ನೇಹವನ್ನು ನಾನು ಬಲ್ಲೆನು. ಮುಂದೆ ?

ಚಿತ್ರಲೇಖಾ—‘ಇತ್ತೀಚೆಗೆ ಊರ್ವಶಿಯ ಸಮಾಚಾರವೇನು ? ’ ಎಂದು ನಾನು ಧ್ಯಾನಮಗ್ನಳಾಗಿ ಆಲೋಚಿಸಲಾಗಿ ಅವಳಿಗೆ ಒಂದು ಬಹುದೊಡ್ಡ ಸಂಕಟವು ಒದಗಿರುವ ದೆಂದು ಕಂಡುಬಂದಿತು

ಸಹಜನ್ಯಾ— (ಗಾಬರಿಯಿಂದ) ಅದಾವುದು ?

ಚಿತ್ರಲೇಖಾ—ಊರ್ವಶಿಯು ಒಮ್ಮೆ ರಾಜ್ಯಕಾರಭಾರವನ್ನು ಮಂತ್ರಿಗಳಿಗೊಪ್ಪಿಸಿದ ಹಾಗು ಯಾವ ಪರಿಚಾರಕರೂ ಇಲ್ಲದಂಥ [ಶಬ್ದಶಃ ಕೇವಲ ರಾಜ್ಯಲಕ್ಷ್ಮಿಯಿಂದೊಡ ಗೂಡಿದ] ಮಹಾರಾಜನನ್ನು ಸಂಗಡ ಕರೆದುಕೊಂಡು ವಿಹಾರಕ್ಕೆಂದು ಕೈಲಾಸಶಿಖರದ ಮೇಲಿರುವ ಗಂಧಮಾದನ ವನಕ್ಕೆ ಹೋಗಿದ್ದಳು

ಸಹಜನ್ಯಾ—ಅಂಥ ಮನೋಹರವಾದ ಪ್ರದೇಶಗಳಲ್ಲಿ ಅನುಭವಿಸಿದ ಸುಖವೇ ನಿಜವಾದ ಸುಖವು. ಮುಂದೇನಾಯಿತು ?

चित्रलेखा – ततस्तत्र मन्दाकिनीतीरे सिकतापर्वते क्रीडन्ती विद्याधरदारिका उदयवती नाम तेन राजर्षिणा चिरं निध्यातेति कुपिता उर्वशी । [तदो तहिं मन्दाइणीतीरे सिअदापव्वदेहि कीलमाणा विज्जाधरदारिआ उदयवदी णाम देण रएसिणा चिरं णिज्झाइदत्ति कुविदा उव्वसी ।]

सहजन्या– भवितव्यम् । असहना खलु सा । दूरारूढश्चास्याः प्रणयः । ततस्ततः । [होदव्वं । असहणा खु सा । दूरारूढो अ से प्पणओ । तदो तदो ।

चित्रलेखा — ततो भर्तुरनुनयमप्रतिपद्यमाना गुरुशापसमूढहृदया विस्मृतदेवतानियमा स्त्रीजनपरिहरणीयं कुमारवनं प्रविष्टा । प्रवेशानन्तरं च काननोपान्तवर्तिलताभावेन परिणतमस्या रूपम् । [तदो भट्टिणो अणुणअं अपडिवज्जमाणा गुरुसावसमूढहिअआ विसुमरिददेवदाणिअमा इत्थिआजणपरिहरिणिज्जं कुमारवणं पइट्ठा । पवेसाणन्तरं च काणणोवन्तवत्तिलदाभावेण परिणदं से रूवं ।]

सहजन्या — सर्वथा नास्ति विधेरलङ्घनीयं नाम येन तादृशस्य रूपस्यान्यादृश एव परिणामः संवृत्तः । अथ किमवस्थः स राजर्षिः । [सव्वधा णत्थि विहिणो अलङ्घणिज्जं णाम जेण तारिसस्स रूवस्स अण्णारिसो एव्व पलिणामो संवुत्तो । अह किमवत्थो सो राएसी ।]

ಚಿತ್ರಲೇಖಾ— ಆಗ ಮಹಾರಾಜನು, ಅಲ್ಲಿ ಮಂದಾಕಿನಿ ನದಿಯ ದಡದಲ್ಲಿ ಉಸುಕಿನ ಗೋಪುರಗಳನ್ನು ಮಾಡಿ ಆಡುತ್ತಿರುವ ಉದಯವತಿಯೆಂಬ ವಿದ್ಯಾಧರ ಕನ್ನಿಕೆಯನ್ನು ಬಹಳ ಹೊತ್ತಿನವರೆಗೆ ದಿಟ್ಟಿಸಿ ನೋಡಿದನೆಂದು ಉರ್ವಶಿಯು ಅವನ ಮೇಲೆ ಬಹಳೇ ಸಿಟ್ಟಿಗೆದ್ದಳು

ಸಹಜನ್ಯಾ—ಹಾಗಾಗುವದು ಸಹಜವೆ ಅವಳು ಮೊದಲೆ ತಾಳ್ಮೆಯಿಲ್ಲದವಳು ಮೇಲಾಗಿ ಅವನಲ್ಲಿ ಅವಳದು ಅಷ್ಟೊಂದು ಉತ್ಕಟ ಪ್ರೇಮವಿದೆ. ಮುಂದೇನಾಯಿತು ?

ಚಿತ್ರಲೇಖಾ — ಆಗ ಮಹಾರಾಜನು ಎಷ್ಟೇ ಸಮಾಧಾನ ಪಡಿಸಿದರೂ ಅದನ್ನು ಲೆಕ್ಕಿಸದೆ ಗುರುಗಳ ಶಾಪದಿಂದ ಮೂಢಳಾದ ಉರ್ವಶಿಯು ದೇವತೆಯ [ಕುಮಾರನ] ನಿಯಮವನ್ನು ಮರೆತು ಸ್ತ್ರೀಯರ ಪ್ರವೇಶಕ್ಕೆ ಪ್ರತಿಬಂಧವುಳ್ಳ ಕುಮಾರವನವನ್ನು ಪ್ರವೇಶಿಸಿದಳು ಅಲ್ಲಿ ಪ್ರವೇಶಮಾಡಿದ ಕೂಡಲೇ ಅವಳು ಆ ಕಾನನದ ಒಂದು ಮೂಲೆಯಲ್ಲಿ ಒಂದು ಬಳ್ಳಿಯಾಗಿ ಮಾರ್ಪಟ್ಟಳು.

ಸಹಜನ್ಯಾ— ನಿಜವಾಗಿಯೂ ದೈವಗತಿಯನ್ನು ಮೀರುವದು ಶಕ್ಯವಿಲ್ಲ. ಏಕೆಂದರೆ ಅಂಥ [ಅದ್ವಿತೀಯವಾದ] ರೂಪವು ಆ ರೀತಿಯಾಗಿ ತೀರ ಬೇರೆ ರೂಪವನ್ನು ತಾಳಿತಲ್ಲ! ಈಗ ಆ ಮಹಾರಾಜನು ಯಾವ ಸ್ಥಿತಿಯಲ್ಲಿರುವನು ?

चित्रलेखा — तस्मिन्नेव कानने प्रियतमामन्विष्यन्नुन्मत्तीभूत इत उर्वशी तत उर्वशीति कृत्वाहोरात्रमतिवाहयति। (नभोऽवलोक्य) अनेन पुनर्निर्वृत्तानामप्युत्कण्ठाकारिणा मेघोदयेनानर्थाधीनो भविष्यति। [तस्सि एव काणणो पिअदम अण्णेसअन्तो उम्मत्तीभूदो इदो उव्वसी तदो उव्वसी त्ति कदुअ अहोरत्त अदिवाहेदि। इमिणा उण णिव्वुदाणपि उक्कण्ठाकारिणा मेहोदएण अणत्थाहीणो हविस्सदि।]

(अत्रान्तरे जम्भलिका)

सहचरीदुःखालीढ सरोवरे स्निग्धम्।
अविरलबाष्पजलार्द्रं ताम्यति हंसीयुगलम्॥ ३॥

[सहअरिदुक्खालिध्धअ सरवरअम्मि सिणिध्धअ।
अविरलवाहजलोल्लअ तम्मइ हसीजुअलअ॥]

सहजन्या - सखि तादृशा आकृतिविशेषाश्चिर दुःखभागिनो न भवन्ति। अवश्य किमप्यनुग्रहनिमित्त भूयोऽपि समागमकारण भविष्यतीति तर्कयामि। तदेहि उदयोन्मुखस्य भगवत सूर्यस्योपस्थान कुर्म। [सहि तारिसा आकिदिविसेसा चिर दुक्खभाइणो ण होन्ति। अवस्स किंपि अणुग्गहणिमित्त भूओवि समाअमकारण हविस्सदित्ति तक्कोमि। ता एहि उदउम्मुहस्स भअवदो सुज्जस्स उवट्ठाण करेह्म।]

(अनन्तरे खण्डधारा)

ಚಿತ್ರಲೇಖಾ— [ಆ ರಾಜರ್ಷಿಯು] ಅದೇ ವನದಲ್ಲಿ 'ಉರ್ವಶಿಯು ಇಲ್ಲಿರುವಳು, ಉರ್ವಶಿಯು ಅಲ್ಲಿರುವಳು' ಎಂದು ತನ್ನ ಪ್ರಿಯತಮೆಯನ್ನು ಹುಡುಕುತ್ತ ಹುಚ್ಚುಹಿಡಿದವನಂತೆ ಹಗಲಿರುಳುಗಳನ್ನು ಕಳೆಯುತ್ತಿರುವನು (ಮೇಲೆ ಆಕಾಶದ ಕಡೆಗೆ ನೋಡಿ) ಸುಖವಾಗಿದ್ದರಲ್ಲಿಯೂ ಮನೋವಿಕಾರವನ್ನು ಉಂಟುಮಾಡುವ ಈ ಮೇಘಗಳ ದರ್ಶನದಿಂದ ಅವನು ಇನ್ನೂ ಹೆಚ್ಚಿನ ಸಂಕಟಕ್ಕೀಡಾಗಬಹುದು.

(ಅಷ್ಟರಲ್ಲಿ ಜಂಭಲಿಕೆಯು— ಮತ್ತೊಂದು ವಿಶಿಷ್ಟಪ್ರಕಾರದ ಗೀತವು ಕೇಳ ಬರುವದು)

ಸ್ನೇಹಮಯವಾದ ಎರಡು ಹೆಣ್ಣುಹಂಸಪಕ್ಷಿಗಳು ತಮ್ಮ ಸಹಚರಿಯ ದುಃಖದಿಂದ ಕಳವಳಗೊಂಡು ಈ ಸರೋವರದಲ್ಲಿ ಕಣ್ಣೀರು ಸುರಿಸುತ್ತ ಗೋಳಾಡುತ್ತಿರುವವು ॥ ३ ॥

ಸಹಜನ್ಯಾ—ಎಲೈ ಗೆಳತಿ, ಅಂಥ ಅಲೌಕಿಕವಾದ ರೂಪವುಳ್ಳವರು ಬಹುಕಾಲ ದುಃಖವನ್ನು ಅನುಭವಿಸಲಾರರು. ಆದ್ದರಿಂದ ಯಾವದಾದರೊಂದು ದೇವತೆಯ ಅನುಗ್ರಹದಿಂದ ಅವರ ಪುನರ್ಮಿಲನವಾಗಬಹುದೆಂದು ನನಗೆ ಅನಿಸುವದು. ಆದ್ದರಿಂದ ಬಾ, ಉದಯವಾಗಲಿರುವ ಸೂರ್ಯನ ಉಪಾಸನೆಯನ್ನು ಮಾಡೋಣ.

(ಆಗ ಖಂಡಧಾರಾ ಗೀತವು ಕೇಳಿಸುವದು)

चिन्ताद्रूनमानसिका सहचरीदर्शनलालसिका ।
विकसितकमलमनोहरे विहरति हंसी सरोवरे ॥ ४ ॥ (इति निष्क्रान्ते)
[चिन्तादुम्मिअमाणसिआ सहअरिदसणलालमिआ ।
विअसिअकमलमणोहरए विहरइ हंसी सरवरए ॥]

प्रवेशक ।

(नेपथ्ये पुरूरवस प्रावेशिकी आक्षिप्तिका)
गहनं गजेन्द्रनाथ. प्रियाविरहोन्मादप्रकटितविकारः ।
विशति तरुकुसुमकिसलयभूषितनिजदेहप्राग्भार ॥ ५ ॥
[गहण गइन्दणाहो पिअविरहुम्माअपअलिअविआरो ।
विसइ तरुकुसुमकिसलअभूसिअणिअदेहपब्भारो ॥]
(तत प्रविशति आकाशबद्धलक्ष्य उन्मत्तवेषो राजा)

राजा— आ दुरात्मन् रक्षस्तिष्ठ तिष्ठ । क मे प्रियतमामादाय गच्छसि । (विलोक्य) हन्त शैलशिखराद्गगनमुत्पत्य बाणैर्मामभिवर्षति । (लोष्ठ गृहीत्वा हन्तु धावन्)

ಚಿಂತೆಯಿಂದ ಬಳಲಿದ ಮನಸ್ಸುಳ್ಳ ಹಾಗು ತನ್ನ ಸಹಚರಿಯನ್ನು ನೋಡಬಯಸುವ ಹೆಣ್ಣುಹಂಸವು, ಅರಳಿದ ಕಮಲಗಳಿಂದ ಕಂಗೊಳಿಸುವ ಈ ಸರೋವರದಲ್ಲಿ ವಿಹರಿಸುತ್ತಿರುವದು.

(ಎಂದು ಹೊರಹೋಗುವರು)

ಪ್ರವೇಶಕವು ಮುಗಿಯದು

(ತೆರೆಯ ಹಿಂದೆ ಪುರೂರವನ ಪ್ರವೇಶವನ್ನು ಸೂಚಿಸುವ ಆಕ್ಷಿಪ್ತಿಕೆಯು ಕೇಳಬರುವದು)

ತನ್ನ ಪ್ರಿಯಳ ವಿರಹದಿಂದ ಉಂಟಾದ ಉನ್ಮಾದದಿಂದ ಮನಸ್ಸಿನ ಉದ್ರೇಕವನ್ನು ಪ್ರಕಟಗೊಳಿಸುವ ಒಂದು ಶ್ರೇಷ್ಠ ಹಿರಿಯಾನೆಯು, ಗಿಡಗಳ ಚಿಗುರೆಲೆ ಹಾಗು ಹೂಗಳಿಂದ ತನ್ನ ಸ್ಥೂಲವಾದ ದೇಹವನ್ನು ಅಲಂಕರಿಸಿಕೊಂಡು, ಈ ದಟ್ಟಡವಿಯನ್ನು ಪ್ರವೇಶಿಸುವದು. ॥೫॥

(ಬಳಿಕ ಹುಚ್ಚುಹಿಡಿದವನಂತೆ ವೇಷಧರಿಸಿದ ಹಾಗು ಮುಗಿಲಕಡೆಗೆ ಮೋರೆಮಾಡಿ ಗುರಿಯಿಟ್ಟು ಅರಸನು ಪ್ರವೇಶಿಸುವನು)

ರಾಜಾ— ಎಲೈ ದುರುಳನಾದ ರಕ್ಕಸನೆ ನಿಲ್ಲು ನಿಲ್ಲು. ನನ್ನ ಪ್ರಿಯತಮೆಯನ್ನು ತೆಗೆದುಕೊಂಡು ಎಲ್ಲಿಗೆ ಹೋಗುವಿ ? (ನೋಡುತ್ತ) ಎಲಾ ! ಇದೇನು ಈ ಪರ್ವತ ಶಿಖರದಿಂದ ಆಕಾಶದಲ್ಲಿ ಜಿಗಿದು ನನ್ನ ಮೇಲೆ ಬಾಣಗಳ ಮಳೆಯನ್ನು ಸುರಿಸುತ್ತಿರುವನಲ್ಲ! (ಹೆಂಟೆಯನ್ನು ತೆಗೆದುಕೊಂಡು ಎಸೆಯಬೇಕೆಂದು ಓಡುತ್ತ)

हृदयाहितप्रियादुःखः सरोवरे धुतपक्षः ।
बाष्पाववलितनयनस्ताम्यति हंसयुवा ॥ ६ ॥

[हिअआहिअपिअदुक्खओ सरवरए धुदपक्खओ ।
वाहोवग्गिअणअणओ तम्मइ हंसजुआणओ ॥]

(इति द्विपदिकया दिशोऽवलोक्य पुनर्विभाव्य) कथम् ।

नवजलधरः सनद्धोऽयं न दृप्तनिशाचरः
सुरधनुरिदं दूराकृष्टं न तस्य शरासनम् ।
अयमपि पटुर्धारासारो न बाणपरंपरा
कनकनिकषस्निग्धा विद्युत्प्रिया न ममोर्वशी ॥ ७ ॥

(इति मूर्छितः पतति । पुनर्द्विपदिकया (४-६) उत्थाय निःश्वस्य)

मया ज्ञातं मृगलोचना निशाचरः कोऽपि हरति ।
यावन्नु नवतडिच्छ्यामलो धाराधरो वर्षति ॥ ८ ॥

[मइ जाणिअ मिअलोअणि णिसअरु कोइ हरेइ ।
जाव णु णवतलिसामल धाराहरु वरिसेइ ॥]

(विचिन्त्य) क्व नु खलु रम्भोऽरूर्गता स्यात् ।

ತನ್ನ ಪ್ರಿಯಳ ದುಃಖದಿಂದ ಕಳವಳಗೊಂಡ, ಕಣ್ಣೊಳಗೆ ನೀರು ತುಂಬಿದ, ಹಂಸವು ರೆಕ್ಕೆಗಳನ್ನು ಬೀಸುತ್ತ ಸರೋವರದಲ್ಲಿ ಯಾತನೆಪಡುತ್ತಿರುವದು. ॥೬॥

(ಎಂದು ಈ ದ್ವಿಪದಿಕೆಯೊಡನೆ ಸುತ್ತಲೂ ನೋಡಿ ಮತ್ತೆ ಯೋಚಿಸಿ) ಓ! ಇದು ಮಳೆಗರೆಯಲನುವಾದ ಹೊಸ ಮೋಡವು, ಸೊಕ್ಕಿಗೆದ್ದ ರಕ್ಕಸನಲ್ಲ ಇದು ಸುದೀರ್ಘವಾದ ಮಳೆಬಿಲ್ಲು ಅವನ ಹೆದೆಯೇರಿಸಿದ ಧನುಸ್ಸಲ್ಲ, ಇದು ಕೂಡ ಆಕಾಶದಿಂದ ಬೀಳುವ ವಾರಿಧಾರೆಯು ಆದರೆ ಆ ರಕ್ಕಸನ ಬಾಣವೃಷ್ಟಿಯಲ್ಲ, ಇದು ಬಂಗಾರದ ಹಾಗೆ ಹೊಳೆ-ಯುವ ಮಿಂಚು, ನನ್ನ ಕಾಂತೆಯಲ್ಲ. ॥೭॥

(ಎಂದು ಮೈಮರೆತು ಬೀಳುವನು. ಮತ್ತೆ ಅದೇ ದ್ವಿಪದಿಕೆ (೪–೬) ಯೊಡನೆ ಎದ್ದು ನಿಟ್ಟುಸುರು ಬಿಡುತ್ತ)

ನನ್ನ ಪ್ರಿಯಳನ್ನು ಯಾವನೋ ಒಬ್ಬ ರಾಕ್ಷಸನು ಅಪಹರಿಸಿಕೊಂಡು ಹೋಗುತ್ತಿರುವನೆಂದು ನಾನು ಭಾವಿಸಿದ್ದೆ. ಆದರೆ ಮಿಂಚಿನಿಂದ ಹೊಳೆಯುವ ಈ ಕಾರ್ಮೋಡವು ನಿರಂತರವಾಗಿ [ಮುಸಲಧಾರವಾಗಿ] ಮಳೆಗರೆಯುತ್ತಿರುವದು. ॥೮॥

(ಆಲೋಚಿಸಿ) ಬಾಳೆಯ ಕಂಬದಂತೆ ತೊಡೆಯುಳ್ಳ ಆ ಸುಂದರಿಯು ಎಲ್ಲಿ ಹೋಗಿರಬಹುದು ?

तिष्ठेत्कोपवशात्प्रभावपिहिता दीर्घं न सा कुप्यति
स्वर्गायोत्पतिता भवेन्मयि पुनर्भावार्द्रमस्या मनः ।
तां हर्तुं विबुधद्विषोऽपि न च मे शक्ता पुरोवर्तिनी
सा चात्यन्तमगोचरं नयनयोर्यातेति कोऽयं विधिः ॥ ९ ॥

(द्विपदिकया (४-६) दिशोऽवलोक्य सास्रम्) अये पराावृत्तभागधेयानां दुःखं दुःखानुबन्धि । कुतः

अयमेकपदे तया वियोगः प्रियया चोपनतः सुदुःसहो मे ।
नववारिधरोदयादहोभिर्भवितव्यं च निरातपत्वरम्यैः ॥ १० ॥

(अनन्तरे चर्चरी)

जलधर संहरैतं कोपमाज्ञप्तोऽ
विरलधारासारदिङ्मुखकान्तः ।
ए अहं पृथ्वीं भ्रमन्यदि प्रियां प्रेक्षिष्ये
तदा यद्यत् करिष्यसि तत्तत्सहिष्ये ॥ ११ ॥

ಅವಳು ಸಿಟ್ಟಿನಿಂದ, ತನ್ನ ದಿವ್ಯಶಕ್ತಿಯ ಪ್ರಭಾವದಿಂದ ಅದೃಶ್ಯಳಾಗಿ ಇಲ್ಲಿಯೇ ಸಮೀಪದಲ್ಲಿ ನಿಂತಿರಬಹುದು ಆದರೆ ಅವಳ ಸಿಟ್ಟು ಬಹಳ ಹೊತ್ತು ಉಳಿಯಲಾರದು. ಅಥವಾ ಅವಳು ದೇವಲೋಕಕ್ಕೆ ಹೋಗಿರಬಹುದು, ಆದರೆ ಇದು ಶಕ್ಯವಿಲ್ಲ, ಏಕಂದರೆ ನನ್ನಲ್ಲಿ ಅವಳ ಅನುರಾಗವು ಬಹಳ ಉತ್ಕಟವಾಗಿರುವದು ಅವಳು ನನ್ನ ಮುಂದೆ ಇರುವಾಗ ಅವಳನ್ನು ಅಪಹರಿಸಿಕೊಂಡು ಹೋಗುವದು ದೈತ್ಯರಿಗೂ ಶಕ್ಯವಿಲ್ಲ. ಏನೇ ಇದ್ದರೂ ಅವಳು ಈಗ ಸಂಪೂರ್ಣ ನನ್ನ ಕಣ್ಮರೆಯಾಗಿರುವದಂತೂ ನಿಜ, ಎಂಥ ವಿಚಿತ್ರವೀ ದೈವದಾಟವು ! ॥೯॥

(ದ್ವಿಪದಿಕೆಯ (೪-೬) ಸ್ವರದೊಂದಿಗೆ ಸುತ್ತಲೂ ನೋಡುತ್ತ, ಕಣ್ಣೀರು ಸುರಿಸುತ್ತ) ಅಯ್ಯೊ ! [ನನ್ನಂಥ] ದುರ್ದೈವಿಗಳಿಗ ದುಃಖದ ಮೇಲೆ ದುಃಖವು ಒದಗುವದು. ಏಕಂದರೆ —

ಒಮ್ಮಿಂದೊಮ್ಮೆಲೆ ನನಗೆ ಸಹಿಸಲಸಾಧ್ಯವಾದ ಪ್ರಿಯಳ ವಿಯೋಗವು ಉಂಟಾಯಿತು. ಅದರ ಜೊತೆಗೆ ದಿನಗಳು, ನವ ಮೋಡಗಳ ಉದಯದಿಂದ ಬಿಸಿಲು ಕಡಿಮೆಯಾಗಿ ಆಲ್ಹಾದಕರವಾಗಿರುವವು ॥ ೧೦ ॥

(ಬಳಿಕ ಚರ್ಚರಿಯು—ವಿಶಿಷ್ಟವಾದ ಗೀತವು—ಕೇಳಬರುವದು)

ಎಲೈ, ನಿರಂತವಾದ ಸೆಳಕುಗಳಿಂದ ದಿಗಂತಗಳನ್ನು ಮುಸುಕಿದ ಕಾರ್ಮೋಡವೆ, ಇಕೋ ನಿನಗೆ ನನ್ನ ಅಪ್ಪಣೆಯಿದೆ, ನಿನ್ನ ಈ ಕೋಪವನ್ನು ಹಿಂತೆಗೆದುಕೊ ನಾನು ಭೂಮಿಯ ಮೇಲೆ ತಿರುಗಾಡುತ್ತಿರುವಾಗ ಒಂದು ವೇಳೆ ನನಗೆ ನನ್ನ ಪ್ರಿಯಕಾಂತೆಯ ದರ್ಶನವಾಯಿತೆಂದರೆ, ಆಗ ನೀನು ಏನೇನು ಮಾಡುವಿಯೋ ಅದೆಲ್ಲವನ್ನು ಸಹಿಸುವೆನು. ॥ ೧೧ ॥

जलहर सहर एहु कोपइ आढत्तओ अविरलधारासारदिसामुहकन्तओ । ए मइ पुहवि भमन्तो जइ पिअ पेक्खिहिमि तव्वे जजु करीहिसि ततु सहीहिमि ।। [(विहस्य) वृथा खलु मया मनस संतापवृद्धिरुपेक्ष्यते । यदा मुनयोऽप्येव व्याहरन्ति राजा कालस्य कारणमिति । तत्किमहं जलदसमयं न प्रत्यादिशामि ।]

(अनन्तरे चर्चरी)

गन्धोन्मादितमधुकरगीतैर्वाद्यमानै परभृततूर्यैः ।
प्रसृतपवनोद्वेल्लितपल्लवनिकरः
सुललितविविधप्रकार नृत्यति कल्पतरु ।। १२ ।।

[गन्धुम्माइअमहुअरगीएहि वज्जन्तेहि परहुअतूरेहि । पसरिअपवणुव्वेल्लिवणिअरु सुललिअविविहपआर णच्चइ कप्पअरु]

(इति नर्तित्वा) अथवा न प्रत्यादिशामि यत्प्रावृषेण्यैरेव चिह्नैर्मम राजोपचार संप्रति । कथमिव ।

विद्युल्लेखाकनकरुचिरं श्रीवितानं ममाभ्र
व्याधूयन्ते निचुलतरुभिर्मञ्जरीचामराणि ।

(ನಕ್ಕು) ನಾನು ವ್ಯರ್ಥ್ಯವಾಗಿ, ಹೆಚ್ಚಾಗುತ್ತಿರುವ, ನನ್ನ ಮನಸ್ಸಿನ ಸಂತಾಪವನ್ನು ಉಪೇಕ್ಷಿಸುತ್ತಿರುವೆನು 'ಅರಸನು ಕಾಲಕ್ಕೆ ಕಾರಣನು' ['ರಾಜಾ ಕಾಲಸ್ಯಕಾರಣಂ' ಎಂದರೆ ಆಯಾ ಕಾಲದ ಆಗು-ಹೋಗುಳಿಗೆ, ಅರಸನೇ ಮೂಲ ಕಾರಣನು. ಆದರೆ ಇಲ್ಲಿ ಪುರೂರವನು ಈ ವಾಕ್ಯದ ಶಬ್ದಶಃ ಅರ್ಥವನ್ನು ಗ್ರಹಿಸುವನು ಅದಾವುದೆಂದರೆ 'ಮಳೆಗಾಲ, ಚಳಿಗಾಲ ಮೊದಲಾದ ಆಯಾ ಋತುಗಳು ಕೇವಲ ಅರಸನ ಅಪ್ಪಣೆಯ ಮೇರೆಗೆ ಸಂಭವಿಸುವವು'] ಎಂದು ಮುನಿಗಳೂ ಸಾರುತ್ತಿರುವರಲ್ಲವೆ ? ಅಂದ ಮೇಲೆ ನಾನೀಗ ಈ ವರ್ಷಾಕಾಲವನ್ನೇಕೆ ನಿವಾರಿಸಬಾರದು ?

(ಬಳಿಕ ಮತ್ತೆ ಚರ್ಚರಿಯು)

ಬೀಸುವಗಾಳಿಯ ಮೂಲಕ ದಟ್ಟಾದ ಚಿಗುರೆಲೆಗಳು ಅಲ್ಲಾಡುತ್ತಿರುವ ಈ ಕಲ್ಪ ವೃಕ್ಷವು, ಸುಗಂಧದಿಂದ ಉನ್ಮತ್ತವಾದ ಮಧುಕರಗಳ ಇಂಪಾದ ಗಾನ, ಹಾಗು ಇಂಚರಗೈವ ಕೋಗಿಲೆಗಳೆಂಬ ತಂತುವಾದ್ಯ, ಇವುಗಳ ತಾಲದೊಂದಿಗೆ, ವಿವಿಧ ಪ್ರಕಾರಗಳಿಂದ ನಯನ ಮನೋಹರವಾಗಿ ನರ್ತನ ಮಾಡುತ್ತಿರುವದು. ॥ ೧೨ ॥

(ಎಂದು ಕುಣಿಯುತ್ತ) ಅಥವಾ ಈ ವರ್ಷಾಕಾಲವನ್ನು ನಿವಾರಿಸುವದು ಬೇಡ. ಏಕೆಂದರೆ ಮಳೆಗಾಲದಲ್ಲಿಯ ಈ ಚಿನ್ಹಗಳಿಂದಲೇ ನನಗೆ ಈಗ ರಾಜೋಪಚಾರವಾಗುತ್ತಿರುವದು ಅದು ಹೇಗೆಂದರೆ—

ಬಂಗಾರದಂತೆ ಹೊಳೆಯುವ ಸೆಳೆಮಿಂಚಿನಿಂದೊಪ್ಪುವ ಮೋಡವೇ ನನಗೆ ರಾಜ-ಛತ್ರವು [ಅಥವಾ ಅರಮನೆಯ ಒಳಮಾಳಿಗೆಯು], ಈ ನಿಚುಲ ಗಿಡಗಳು ತಮ್ಮ ತಮ್ಮ ಚಿಗುರೆಲೆಗಳೆಂಬ ಚಾಮರಗಳನ್ನು ಬೀಸುತ್ತಿರುವವು, ಬೇಸಿಗೆಯು ಕಳೆದು ಮಳೆಗಾಲವು

घर्मच्छेदात्पटुतरगिरो बन्दिनो नीलकण्ठा
धारासारोपनयनपरा नैगमा सानुमन्त ॥ १३ ॥

भवतु । किमेव परिच्छदश्लाघया । यावदस्मिन्कानने ता प्रियामन्वेषयामि (पुनश्चर्चरीपाठस्यान्ते भिन्नक)

दयितारहितोऽधिक दुःखितो विरहानुगत परिमन्थर ।
गिरिकानने कुसुमोज्वले गजयूथपतिर्बहु क्षीणगति ॥ १४ ॥

[दयितारहिओ अहिअ दुहिओ विरहाणुगओ परिमन्थरओ ।
गिरिकाणणए कुसुमुज्जलए गअजूहवई बहु झीणगई ॥]

(विलोक्य) हन्त व्यवसितस्य मे सदीपनमिव सवृत्तम् । कुत

आरक्तराजिभिरिय कुसुमैर्नवकन्दली सलिलगर्भै ।
कोपादन्तर्बाष्पे स्मरयति मा लोचन तस्या ॥ १५ ॥

इनो गतेति कथ नु तत्रभवती मया सूचयितव्या ।

पद्भ्या स्पृशेद्वसुमती यदि सा सुगात्री
मेघाभिवृष्टसिकतासु वनस्थलीषु ।
पश्चान्नता गुरुनितम्बतया ततोऽस्या
दृश्येत चारुपदपङ्क्तिरलक्तकाङ्का ॥ १६ ॥

ಬಂದದ್ದರಿಂದ ಆನಂದದಿಂದ ಕೇಕಾರವವನ್ನು ಮಾಡುವ ನವಿಲುಗಳೇ ನನ್ನ ಬಟ್ಟಂಗಿಗಳು; ಮಳೆಯ ವಾರಿಧಾರೆಗಳನ್ನು ತರುವ ಈ ಪರ್ವತಗಳೇ ನನಗೆ ಬೆಲೆಬಾಳುವ ಕಾಣಿಕೆಗಳನ್ನು ತರುವ ವರ್ತಕರು. ॥ ೧೩ ॥

ಇರಲಿ, ಸುಮ್ಮನೆ ರಾಜೋಪಚಾರಗಳನ್ನು ಹೊಗುವದರಿಂದೇನು ಪ್ರಯೋಜನ ? ಈಗ ಈ ಕಾನನದಲ್ಲಿ ನನ್ನ ಆ ಪ್ರಾಣಪ್ರಿಯಳನ್ನು ಹುಡುಕುವೆನು

(ಪುನಃ ಚರ್ಚರಿಯ ಪಾಠದನಂತರ 'ಭಿನ್ನಕವು'— ಒಂದು ವಿಶಿಷ್ಟವಾದರಾಗವು–)

ತನ್ನ ಪ್ರಿಯಳಿಲ್ಲದ್ದರಿಂದ ಬಹಳೇ ನೊಂದುಕೊಂಡು ಶೂನ್ಯ ಮನಸ್ಕನಾದ, ಆನೆಗಳ ಹಾಡಿನ ಅಧಿಪತಿಯಾದ ಈ ಹಿರಿಯಾನೆಯು, ಹೂವುಗಳಿಂದ ಕಂಗೊಳಿಸುವ ಈ ಬೆಟ್ಟದಡವಿಯಲ್ಲಿ, ವಿರಹಪೀಡೆಯಿಂದ ಯಾತನೆ ಪಡುತ್ತ ಮೆಲ್ಲಗೆ ಅಡ್ಡಾಡುತ್ತಿರುವದು ॥೧೪॥

(ನೋಡಿ) ಇದೇನು ! ಪ್ರಿಯತಮೆಯನ್ನು ಹುಡುಕಲು ಸಿದ್ಧನಾದ ನನ್ನ ವಿರಹ ತಾಪವು ಇನ್ನೂ ಹೆಚ್ಚಾಗುವ ಹಾಗಾಯಿತಲ್ಲ ! ಏಕಂದರೆ—

ಈ ಕಾಬಾಳಿ ಗಿಡವು ಒಳಗೆ ನೀರಿನ ಹನಿಗಳುಳ್ಳ ನಸುಗೆಂಪಾದ ಹೂವುಗಳಿಂದ ನನಗೆ ಸಿಟ್ಟಿನಿಂದ ಕೆಂಪಾದ ಹಾಗು ನೀರು ತುಂಬಿದ, ನನ್ನ ಪ್ರೀಯಳ, ನಯನಗಳ ನೆನಪನ್ನೂ ಮಾಡಿಕೊಡುತ್ತಿರುವದು ॥ ೧೫ ॥

ಅವಳು ಇತ್ತಕಡೆಗೇ ಹೋಗಿರುವಳೆಂಬುದನ್ನು ಕಂಡು ಹಿಡಿಯುವ ಬಗೆ ಹೇಗೆ ?

ಒಂದು ವೇಳೆ ಆ ಕೋಮಲಾಂಗಿಯು ಮಳೆನೀರಿನಿಂದ ತೊಯ್ದ ಉಸುಕಿನ ಭೂಮಿಯಮೇಲೆ ತನ್ನ ಕಾಲುಗಳನ್ನು ಇರಿಸಿದ್ದರೆ [ಎಂದರೆ ನಡೆದಿದ್ದರೆ], ಅವಳ ಭಾರವಾದ ನಿತಂಬಭಾಗದಿಂದ ಹಿಂಭಾಗದಲ್ಲಿ ಹೆಚ್ಚು ಕೆಳಗಿಳಿದು ಹಾಗೂ ಕಾಲಿಗೆ ಹಚ್ಚಿದ ಅಲಕ್ತಕರಸದ ಚಿನ್ಹಗಳಿಂದ ಕೂಡಿದ ಹೆಜ್ಜೆಗಳು ಕಾಣುತ್ತಿದ್ದವು. ॥ ೧೬ ॥

(द्विपदिकया (४—६) परिक्रम्यावलोक्य च सहर्षम्) उपलब्धमुपलक्षणं येन तस्याः कोपनाया मार्गोऽनुमीयते ।

हृतोष्ठरागैर्नयनोदबिन्दुभि-
र्निमग्ननाभेर्निपतद्भिरङ्कितम् ।
च्युतं रुषा भिन्नगतेरसंशयं
शुकोदरश्याममिदं स्तनांशुकम् ॥ १७ ॥

भवतु । आदास्ये तावत् । (विभाव्य) कथं सेन्द्रगोपं नवशाद्वलमिदम् । तत्कुतो नु खलु निर्जने वने प्रियाप्रवृत्तिरवगमयितव्या । (दृष्ट्वा) अयमासारोच्छ्वसितशैलेय-स्थलीपाषाणमधिरूढ

आलोकयति पयोदान्प्रबलपुरोवातताडितशिखण्ड
केकागर्भेण शिखी दूरोन्नमितेन कण्ठेन ॥ १८ ॥

(उपेत्य) यावदेनं पृच्छामि । (अनन्तरे खण्डकः)

सम्प्राप्तविसूरणस्त्वरितं परवारणं ।
प्रियतमादर्शनलालसो गजवरो विस्मितमानसः ॥ १९ ॥

(ದ್ವಿಪದಿಕೆಯ ೪–೬ ಸ್ವರದೊಂದಿಗೆ ಸುತ್ತುವರಿದು ಆನಂದದಿಂದ ನೋಡುತ್ತ)

ಓ! ಗುರುತು ಸಿಕ್ಕಿತು ಇದರಿಂದ, ಕೋಪಿಸಿಕೊಂಡ ಅವಳು ಹೋದ ಮಾರ್ಗವನ್ನು ಚನ್ನಾಗಿ ಕಂಡುಹಿಡಿಯಬಲ್ಲೆನು —

ನಾಭಿಕುಹರವುಳ್ಳ ಆ ಸುಂದರಿಯು ಸಿಟ್ಟಿನಿಂದ ವಕ್ರವಾಗಿ ನಡೆಯುವಾಗ ಅವಳ ಕಣ್ಣುಗಳಿಂದ ಉದುರುವ ಕಣ್ಣೀರಿನ ಹನಿಗಳು ಅವಳ ತುಟಿಗೆಂಪಿನಿಂದ ಕಂಪಗಾಗಿ ಅವಳ ಎದೆಯ ಮೇಲೆ ಬೀಳಲು, ಅದರಿಂದ ಕೆಂಪುಳ್ಳ, ಕಳಚಿದ್ದ ಮತ್ತು ಗಿಳಿಯ ತಳ ಹೊಟ್ಟೆಯ ಬಣ್ಣದ ಈ ಕುಚವಸ್ತ್ರವು ನಿಃಸ್ಸಂದೇಹವಾಗಿಯೂ ಅವಳದೇ ಇರಲಿಕ್ಕೆ ಬೇಕು ॥ ೧೭ ॥

ಒಳ್ಳೇದು, ಇದನ್ನೀಗ ತೆಗೆದುಕೊಳ್ಳುವೆನು (ಯೋಚಿಸಿ) ಓ! ಇದು ಇಂದ್ರಗೋಪ [ಮಳೆಗಾಲದಲ್ಲಿಯ ಕೆಂಪು ಬಣ್ಣದ ಹುಳಗಳು] ಗಳಿಂದೊಡಗೂಡಿದ ಕೋಮಲವಾದ ಹುಲ್ಲು [ಗದ್ದೆಯು] ಹಾಗಾದರ ನಿರ್ಜನವಾದ ಈ ವನದಲ್ಲಿ ನನ್ನ ಪ್ರಿಯಳ ವೃತ್ತಾಂತವನ್ನು ಯಾರಿಂದ ತಿಳಿದುಕೊಳ್ಳಲಿ ? (ನೋಡಿ)

ಮುಂಬಿರುಗಾಳಿಯಿಂದ ಕೆದರಿದ ಗರಿಗಳುಳ್ಳ ಈ ನವಿಲು [ಹರ್ಷದಿಂದ] ಕೇಕಾರವನ್ನು ಮಾಡುತ್ತ ಕೊರಳನ್ನು ಮೇಲೆ ಚಾಚಿ ಮೋಡವನ್ನು ನೋಡುತ್ತದೆ. ॥ ೧೮ ॥

(ಅದರ ಹತ್ತಿರ ಹೋಗಿ) ಈ ನವಿಲನ್ನು ಕೇಳಿ [ನನ್ನ ಪ್ರಿಯಳ ವೃತ್ತಾಂತವನ್ನು ತಿಳಿಯುವೆನು]. (ಬಳಿಕ ಖಂಡಕವು).

ವೈರಿಗಳನ್ನು ಗೆದ್ದ. ಆದರೂ ತನ್ನ ಪ್ರಿಯಳನ್ನು ನೋಡಬೇಕೆಂಬ ಅಭಿಲಾಷೆಯಿಂದ, ಖಿನ್ನವಾದ ಈ ಗಜಪತಿಯು ಮುಂಗಾಣದೆ ವೇಗದಿಂದ ತಿರುಗಾಡುತ್ತಿರುವದು ॥ ೧೯ ॥

[सम्प्राप्तविसूरणस्त्वरित परवारण ।
प्रियतमादर्शनलालसो गजवरो विस्मितमानस ॥] (तेन खण्डकान्ते चर्चरी)

बर्हिण त्वामित्यभ्यर्थये आचक्ष्व मे तत् अत्र
वने भ्रमता यदि त्वया दृष्टा सा मम कान्ता ।
निशामय मृगाङ्कसदृशवदना हसगति अनेन
चिह्नेन ज्ञास्यस्याख्यात तव मया ॥ २० ॥

[बहिण पइ इअ अब्भत्थिअमि आअक्खहि म ता एत्थ वण भमन्ते जइ पइ दिट्ठी सा महु कान्ता । णिसम्महि मिअङ्कसरिसवअणा हसगई ए चिण्हे जाणीहिसि आअक्खिउ तुज्झ मइ ॥] (चर्चरिकया उपविश्य अञ्जलि बद्ध्वा)

नीलकण्ठ ममोत्कण्ठा वनेऽस्मिन्वनिता त्वया ।
दीर्घापाङ्गा सितापाङ्ग दृष्टा दृष्टिक्षमा भवेत् ॥ २१ ॥

(चर्चरिकया विलोक्य) कथमदत्त्वैव प्रतिवचन नर्तितुमारब्ध । किं नु खलु हर्षकारणमस्य । (विचिन्त्य) आ ज्ञातम् ।

मृदुपवनविभिन्नो मत्प्रियाया विनाशा-
द्घनरुचिरकलापो नि सपत्नोऽस्य जात ।
रतिविगलितबन्धे केशहस्ते सुकेश्या
सति कुसुमसनाथे कि करोत्येष बर्ही ॥ २२ ॥

(ಖಂಡಕವು ಮುಗಿದ ಮೇಲೆ ಚರ್ಚರಿಯು)

ಎಲೆ ನವಿಲೆ, ನಿನಗೆ ಬಿನ್ನವಿಸುವೆನು, ನೀನು ಈ ಅಡವಿಯಲ್ಲಿ ಅಡ್ಡಾಡುತ್ತಿರುವಾಗ ನನ್ನ ಪ್ರಿಯಳನ್ನು ನೋಡಿರುವಿಯೊ ಹೇಗೆ ಹೇಳು, ಕೇಳು, ಅವಳ ಮುಖವು ಚಂದ್ರನಂತೆ ಸುಂದರವಾಗಿದ್ದು ಅವಳ ಗತಿಯು ಹಂಸದ ಗತಿಯಂತಿರುವದು. ನಾನು ವಿವರಿಸಿದ ಈ ಚಿಹ್ನಗಳಿಂದ ನೀನವಳನ್ನು ಗುರುತಿಸಬಲ್ಲೆ ॥ ೨೦ ॥

(ಚರ್ಚರಿಕೆಯ ಸ್ವರದೊಂದಿಗೆ ಕುಳಿತು ಕೈಜೋಡಿಸಿ)

ಎಲೈ ಸಿತಾಪಾಂಗನೆ, (ಬಿಳಿಯಕಡೆಗಣ್ಣುಳ್ಳ) ನವಿಲೆ, ದೀರ್ಘವಾದ ಅಪಾಂಗವುಳ್ಳ, ನಯನಮನೋಹರಳಾದ ಹಾಗು ಉತ್ಕಂಠಿತಳಾದ ನನ್ನ ಪ್ರಿಯಳನ್ನು ನೀನು ಈ ವನದಲ್ಲಿ ಎಲ್ಲಿಯಾದರೂ ನೋಡಿರುವಿಯಾ ? ॥ ೨೧ ॥

(ಚರ್ಚರಿಕೆಯಿಂದ ನೋಡಿ) ಇದೇನು! ನನ್ನ ಮಾತಿಗೆ ಉತ್ತರವನ್ನು ಸಹ ಕೊಡದೆ ಕುಣಿಯಲು ಸುರುವು ಮಾಡಿತಲ್ಲ ! ಇದರ ಸಂತೋಷಕ್ಕೆ ಕಾರಣವೇನಿರಬಹುದು ? (ಆಲೋಚಿಸಿ) ಓಹೋ! ತಿಳಿಯಿತು--

ನನ್ನ ಪ್ರಿಯಳು ಅದೃಶ್ಯಳಾಗಿದ್ದರಿಂದ ಸುಳಿಗಾಳಿಯಿಂದ ಅಲಗುವ ದಟ್ಟಾಗಿ ಸುಂದರವಾದ, ಇದರ, ಗರಿಗಳಿಗೆ ಈಗ ಪ್ರತಿಪಕ್ಷವೇ ಇಲ್ಲದಂತಾಗಿದೆ. [ಅಂತೆಯೇ ಈ ನವಿಲು ಇಷ್ಟು ಸಂತೋಷದಿಂದ ಕುಣಿಯುತ್ತಿರುವದು] ಒಂದು ವೇಳೆ, ರತಿಕ್ರೀಡೆಯ ಮೂಲಕ ಸಡಿಲಾದ ಹಾಗು ಹೂವುಗಳಿಂದ ಸಿಂಗರಿಸಿದ, ಅವಳ, ಕೇಶಪಾಶವು ಈಗ ಇಲ್ಲಿ ಇಟ್ಟಿದ್ದರೆ ಈ ನವಿಲು ಏನು ಮಾಡುತ್ತಿತ್ತು ? ॥ ೨೨ ॥

भवतु । परव्यसनसुखित न खल्वेन पृच्छामि । (द्विपदिकया (४–६) दिशोऽवलोक्य) अये इयमातपान्तसधुक्षितमदा जम्बूविटपमध्यास्ते परभृता । विहगेषु पण्डितैषा जातिः । यावदेना पृच्छामि । (अनन्तरे खुरक)

विद्याधरकाननलीनो दुःखविनिर्गतबाष्पोत्पीड ।
दूरोत्सारितहृदयानन्द अम्बरमानेन भ्रमति गजेन्द्र ।। २३ ।।

[विज्जज्झरकाणणलीणओ दुक्खविणिग्गअवाहुप्पीडओ । दूरोसारिअहिअआणन्दओ अम्बरमाणे भमइ गइन्दओ] (खुरकान्ते चर्चरी) हेले हेले

परभृते मधुरप्रलापिनि कान्ते नन्दनवने स्वच्छन्दं भ्रमन्ति ।
यदि त्वया प्रियतमा सा मम दृष्टा तदाचक्ष्व मम परपुष्टे ।। २४ ।।

[परहुअ महुरपलाविणि कन्ति णन्दणवण सच्छन्द भमन्ति । जइ पइ पिअअम सा महु दिट्ठी ता आअक्खहि महु परपुट्ठि ।।]

(एतदेव नर्तित्वा वलन्तिकयोपसृत्य जानुभ्या स्थित्वा) भवति

त्वा कामिनो मदनदूतिमुदाहरन्ति
मानावभङ्गनिपुण त्वममोघमस्त्रम् ।

ಇರಲಿ, ಬೇರೆಯವರ ದುಃಖವನ್ನು ಕಂಡು ಸಂತೋಷಪಡುತ್ತಿರುವ ಇದನ್ನು ಕೇಳುವದಿಲ್ಲ. (ದ್ವಿಪದಿಕೆಯ (೪–೬) ಜೊತೆಗೆ ಸುತ್ತಲೂ ಎಲ್ಲ ದಿಶಗಳನ್ನು ನೋಡುತ್ತ)—

ಬಿಸಿಲು ಇಲ್ಲದ್ದರಿಂದ [ಅಥವಾ ಬೇಸಿಗೆಯು ಕಳೆದದ್ದರಿಂದ] ಮದವೇರಿದ ಈ ಕೋಗಿಲೆಯು ಈ ನೀರಲಮರದ ಟೊಂಗೆಯ ಮೇಲೆ ಕುಳಿತುಕೊಂಡಿದೆ ಎಲ್ಲ ಪಕ್ಷಿಗಳಲ್ಲಿ ಈ ಪಕ್ಷಿಗಳ ಜಾತಿಯು ಜಾಣವಾದದ್ದು. ಒಳ್ಳೇದು, ಇದನ್ನು ಕೇಳುವೆನು (ಬಳಿಕ ಖುರಕವು—ವಿಶಿಷ್ಟ ಪ್ರಕಾರದ ಗೀತವು—ಕೇಳಬರುವದು)

ಮನಸ್ಸಿನೊಳಗಿನ ಆನಂದವೆಲ್ಲ ದೂರಾಗಿ ಅತ್ಯಂತ ದುಃಖದಿಂದ ಕಣ್ಣೀರನ್ನು ಸುರಿಸುವ, ವಿದ್ಯಾಧರ ವನದಲ್ಲಿರುವ, ಈ ಗಜಪತಿಯು ಆಕಾಶವನ್ನೂ ಅಳೆಯುವಂತೆ ಅಡ್ಡಾಡುತ್ತಿರುವದು ॥ ೨೩ ॥

(ಖುರಕದ ನಂತರ ಮತ್ತೆ ಚರ್ಚರಿಯು) ಎಲೆ ಎಲೆ,

ನಂದನವನದಲ್ಲಿ ಸ್ವಚ್ಛಂದವಾಗಿ ತಿರುಗಾಡುತ್ತಿರುವ, ಇಂಚರಗೈವ ಪರಭೃತವೇ [ಬೇರೆಯವರಿಂದ ಪುಷ್ಟವಾದ ಕೋಗಿಲೆಯೇ,] ಈ ವನದಲ್ಲಿ ನನ್ನ ಪ್ರಿಯಳನ್ನು ನೋಡಿರುವಿಯಾ ? ನೋಡಿದ್ದರೆ ನನಗೆ ಹೇಳು. ॥ ೨೪ ॥

(ಅದೇ ವೇಳೆಗೆ ಕುಣಿಯುತ್ತ 'ವಲಂತಿಕೆ' (ವಿಶಿಷ್ಟವಾದ ರಾಗವು) ಯೊಡನೆ ಬಳಿಸಾರಿ, ಮೊಣಕಾಲೂರಿ)

ಮಾನ್ಯಳೆ,

ಕಾಮಿಗಳು ನಿನಗೆ ಮದನನ ದೂತಿಯೆಂದು ಕರೆಯುವರು, ನೀನು [ಮಾನಿನಿಯರ] ಮಾನಭಂಗವನ್ನು ಮಾಡುವದರಲ್ಲಿ ಒಳ್ಳೇ ಪರಿಣಾಮಕಾರಿಯಾದ ಅಮೋಘವಾದ ಅಸ್ತ್ರವು ಮಂಜುಳವಾದ ಕಂಠವುಳ್ಳ ಕೋಗಿಲೆಯೇ, ನನ್ನ ಪ್ರಿಯತಮೆಯನ್ನಾದರೂ ನನ್ನ ಬಳಿಗೆ

तामानय प्रियतमां मम वा समीपं
मा वा नयाशु कलभाषिणि यत्र कान्ता ॥ २५ ॥

(वामकेन किंचिद्वलित्वा । आकाशे) किमाह भवती । कथं त्वामेवमनुरक्तं विहाय गतेति । श्रृणोतु भवती ।

कुपिता न तु कोपकारणं सकृदप्यात्मगतं स्मराम्यहम् ।
प्रभुता रमणेषु योषितां न हि भावस्खलितान्यपेक्षते ॥२६ ॥

(विलोक्य) कथं कथाच्छेदकारिणी स्वकार्य एव गक्ता ।

महदपि परदुःख शीतलं सम्यगाहु
प्रणयमगणयित्वा यन्ममापद्गतस्य ।
अधरमिव मदान्धा पातुमेषा प्रवृत्ता
फलमभिमुखपाकं राजजम्बूद्रुमस्य ॥ २७ ॥

एवंगतेऽपि प्रियेव मे मञ्जुस्वनेति न कोपोऽस्याम् । सुखमास्तां भवती । साधयामस्तावत् । (द्विपदिकया (४-६) परिक्रम्य कर्णं दत्त्वा) अये दक्षिणेन

ತೆಗೆದುಕೊಂಡು ಬಾ ಅಥವಾ ನನ್ನನ್ನಾದರೂ ಕೂಡಲೇ ನನ್ನ ಕಾಂತೆಯಿದ್ದ ಸ್ಥಳಕ್ಕೆ ಕರೆದು ಕೊಂಡು ಹೋಗು ॥ ೨೫ ॥

(ಸ್ವಲ್ಪ ಹೊರಳಿ 'ವಾಮಕ' ಭಂಗಿಯಲ್ಲಿ ಕುಳಿತುಕೊಂಡು, ಆಕಾಶದಲ್ಲಿ ಅದರ ದನಿಯನ್ನು ಕೇಳಿ) ನೀನು ಏನೆನ್ನುವಿ ? 'ಅವಳಲ್ಲಿ ಇಷ್ಟೊಂದು ಅನುರಕ್ತನಾದ ನಿನ್ನನ್ನು ಬಿಟ್ಟು ಅವಳು ಹೋದಳು ?" ಎಂದು ಕೇಳುವಿಯಾ ಕೇಳು

ಅವಳು [ಉರ್ವಶಿಯು] ನನ್ನ ಮೇಲೆ ಕೋಪಿಸಿಕೊಂಡಿರುವಳು, ಆದರೆ ಅವಳ ಕೋಪಕ್ಕೆ ಕಾರಣವಾದ ಒಂದು ಪ್ರಮಾದವೂ ಕೂಡ ನನ್ನಿಂದ ಆದದ್ದು ನನ್ನ ಸ್ಮರಣೆಗೆ ಬರುವದಿಲ್ಲ ತಮ್ಮ ಪ್ರಿಯರ ಮೇಲೆ ಸಂಪೂರ್ಣ ಅಧಿಕಾರವುಳ್ಳ ಸ್ತ್ರೀಯರಿಗೆ ಅವರ ಮೇಲೆ ಸಿಟ್ಟಿಗೇಳಲು ಯಾವ ಪ್ರಮಾದವೂ ಬೇಕಾಗಿಲ್ಲ [ಎಂದರೆ, ಪತಿಯು ಯಾವ ಪ್ರಮಾದವನ್ನು ಮಾಡದಿದ್ದರೂ ಪತ್ನಿಯು ಅವನ ಮೇಲೆ ಸುಮ್ಮನೆ ಸಿಟ್ಟಿಗೇಳ ಬಹುದು ಅಷ್ಟೊಂದು ಅಧಿಕಾರ ಸ್ತ್ರೀಯರದು ಪುರುಷರ ಮೇಲೆ !

(ನೋಡಿ) ಇದೇನು ! ಒಂದು ಮಾತನ್ನೂ ಆಡದೆ ತನ್ನ ಕಾರ್ಯದಲ್ಲಿಯೇ ಮಗ್ನ ವಾಗಿರುವದಲ್ಲ !

'ಬೇರೆಯವರ ದುಃಖವು ಎಷ್ಟೇ ಬಲವತ್ತರವಾಗಿದ್ದರೂ ಅದು ಸೌಮ್ಯವಾದದ್ದೆಂದು ತಿಳಿಯುವರು' ಎಂದು ಹೇಳುವದು ನಿಜವು ಏಕೆಂದರೆ ಸಂಕಟಕ್ಕೊಳಗಾದ ನನ್ನಪ್ರಾರ್ಥನೆ ಯನ್ನು ಮನ್ನಿಸದೆ ಮದಾಂಧವಾದ ಈ ಕೋಗಿಲೆಯು ಅಧರಾಮೃತವನ್ನು ಸವಿಯುವಂತೆ ಶ್ರೇಷ್ಠವಾದ [ಪಕ್ವವಾಗಲು ಬಂದ] ನೀರಲ ಹಣ್ಣನ್ನು ಸವಿಯ ತೊಡಗಿತು ॥ ೨೭ ॥

ಆದರೂ ಈ ಕೋಗಿಲೆಯ ಸ್ವರವು ನನ್ನ ಪ್ರಿಯಳ ಸ್ವರದಂತೆ ಮಂಜುಲವಾಗಿರುವ ದರಿಂದ ಇದರ ಮೇಲೆ ನನ್ನ ಕೋಪವಿಲ್ಲ ಇದು ಸುಖವಾಗಿ ಕುಳಿತುಕೊಳ್ಳಲಿ ನಾವು ಹೋಗುವೆವು. (ದ್ವಿಪದಿಕೆ (೪-೬) ಸ್ವರದೊಂದಿಗೆ ಮುನ್ನಡೆದು ಕಿವಿಗೊಟ್ಟು ಕೇಳಿ) ಎಲಾ!

प्रियाचरणनिक्षेपशसी नूपुररव । यावदत्र गच्छामि । (परिक्रम्य)

प्रियतमाविरहक्लान्तवदनोऽविरलबाष्पजलाकुलनयन ।
दु सहदु खविसष्ठुलगमन प्रसूतगुरतापदीप्ताङ्ग ।
अधिक दूनमानस कानने भ्रमति गजेन्द्र. ।। २८ ।।

[पिअअमविरहकिलामिअवअणवो अविरलवाहजलाउलणअणओ । दूसहदुक्ख-विसठुलगमणओ । अहिअ दुम्मिअमाणसओ काणण भमइ गइन्दओ ।।]

(इति ककुभेन षड्‌गभड्‌गा) अनन्तरे द्विपदिकया (४–२९) दिशोऽवलोक्य)

प्रियकरिणीवियुक्तो गुरुशोकानलदीप्तः ।
बाष्पजलाकुललोचन करिवरो भ्रमति समाकुल ।। २९ ।।

[पिअकरिणीविछ्छोइअओ गुरुसोआलदीविअओ । वाहजलाउललोअणओ करिवरु भमइ समाउलओ ।।] (सकरुणम्) हा धिक् कष्टम् ।

मेघश्यामा दिशो दृष्ट्वा मानसोत्सुकचेतसाम् ।
कूजित राजहसाना नेद नूपुरशिञ्जितम् ।। ३० ।।

भवतु । यावदेते मानसोत्सुका पतत्रिण सरसो नोत्पतन्ति तावदेतेभ्यः प्रियाप्रवृत्ति-रवगमयितव्या । (वलन्तिकयोपसृत्य) भो भो जलविहगमराज

ಬಲಗಡೆಗೆ, ನನ್ನ ಪ್ರಿಯಳ ಹೆಜ್ಜೆಗಳನ್ನು ಸೂಚಿಸುವ (ಅವಳ) ನೂಪುರಗಳ ಶಬ್ದವು ಕೇಳಿಸುವದಲ್ಲ! ಒಳ್ಳೇದು ನಾನಲ್ಲಿಗೆ ಹೋಗುವೆನು. (ಪರಿಕ್ರಮಿಸಿ)

ಪ್ರಿಯಳ ವಿಯೋಗದಿಂದ ಬಾಡಿದ ಮುಖವುಳ್ಳ, ಕಣ್ಣುಗಳಲ್ಲಿ ನೀರು ತುಂಬಿದ ದುಃಸಹವಾದ ದುಃಖದಿಂದ ಅಸ್ಥಿರವಾದ ಗತಿಯುಳ್ಳ ಮತ್ತು ಕ್ಷಣಕ್ಷಣಕ್ಕೆ ಹೆಚ್ಚಾಗುತ್ತಿರುವ ವಿರಹತಾಪದಿಂದ ಮೈಯೆಲ್ಲ ಉರಿಯುತ್ತಿರುವ ಈ ಗಜೇಂದ್ರವು ಖಿನ್ನ ಮನಸ್ಕನಾಗಿ ಅಡವಿಯಲ್ಲಿ ತಿರುಗಾಡುತ್ತಿರುವದು. ॥೨೮॥

(ಎಂದು 'ಕಕುಭ'ರಾಗದ ಆರು ಭಾಗಗಳಲ್ಲಿ ಹಾಡಿ) (ಬಳಿಕ ದ್ವಿಪದಿಕೆ (೪–೨೯) ಯೊಡನೆ ಎಲ್ಲ ಕಡೆಗೂ ನೋಡಿ)

ತನ್ನ ಪ್ರಿಯಳಾದ ಹೆಣ್ಣು ಆನೆಯಿಂದಗಲಿದ, ಅಸಹ್ಯವಾದ ಶೋಕಾಗ್ನಿಯಿಂದ ಬೆಂದ, ಹಾಗು ಕಣ್ಣೀರನ್ನು ಸುರಿಸುವ, ಶ್ರೇಷ್ಠವಾದ ಈ ಆನೆಯು ವ್ಯಾಕುಲಗೊಂಡು ಅತ್ತಿತ್ತ ಅಡ್ಡಾಡುತ್ತಿರುವದು. ॥೨೯॥

(ಕರುಣಾಜನಕವಾಗಿ) ಅಯ್ಯೊ ! ಕಷ್ಟವು.

ಇದು ನೂಪುರಗಳ ಕಿಂಕಿಣಿ ನಾದವಿರದೆ, ಮೋಡಗಳಿಂದ ಕಪ್ಪಾದ ದಿಕ್ಕುಗಳನ್ನು ನೋಡಿ ಮಾನಸ ಸರೋವರಕ್ಕೆ ಹೋಗಬೇಕೆಂದು ಉತ್ಸುಕವಾದ ರಾಜಹಂಸಗಳ ದನಿಯು ॥೩೦॥

ಒಳ್ಳೇದು ಮಾನಸ ಸರೋವರಕ್ಕೆ ಹೋಗಲು ಉತ್ಸುಕವಾದ ಈ ಪಕ್ಷಿಗಳು ಈ ಸರೋವರದಿಂದ ಹಾರಿಹೋಗುವದರೊಳಗಾಗಿ ಇವುಗಳಿಂದ ನನ್ನ ಪ್ರಿಯಳ ವೃತ್ತಾಂತವನ್ನು ತಿಳಿದುಕೊಳ್ಳುವೆನು. (ವಲಂತಿಕೆಯ ಸ್ವರದೊಡನೆ ಮುಂದೆ ಹೋಗಿ) ಎಲೈ ಜಲಚರ ಪಕ್ಷಿಗಳ ರಾಜನಾದ ಕಲಹಂಸವೆ,

पश्चात्सर प्रति गमिष्यसि मानस त्वं
पाथेयमुत्सृज बिसं ग्रहणाय भूय ।
मा तावदुद्धर शुचो दयिताप्रवृत्त्या
स्वार्थात्सतां गुरुतरा प्रणयिक्रियैव ॥ ३१ ॥

यथोन्मुखो विलोकयति मानसोत्सुकेन मया न लक्षितेत्येव वचनमाह ।
(उपविश्य चर्चरी) रे रे हसा किं गोइज्जइ [रे रे हस कि गोप्यते ।]
(इति नर्तित्वा उत्थाय)

यदि हस गता न ते नतभ्रू सरसो रोधसि दृक्पथ प्रिया मे ।
मदखेलपद कथ नु तस्याः सकलं चोर गत त्वया गृहीतम्॥ ३२ ॥

(चर्चरी) गइअणुसारे मइ लक्खिज्जइ । [गत्यनुसारेण मया लक्ष्यते ।]
(चर्चरिकया उपसृत्य अञ्जलि बद्ध्वा) अतश्च

हस प्रयच्छ मे कान्ता गतिरस्यास्त्वया हृता ।
विभावितैकदेशेन देय यदभियुज्यते ॥ ३३ ॥

ನೀನು ಮಾನಸ ಸರೋವರಕ್ಕ ಆಮೇಲೆ ಹೋಗುವಿಯಂತೆ, ಹಾದಿಯ ಬುತ್ತಿಯೆಂದು ತೆಗೆದುಕೊಂಡ ಈ ಕಮಲದ ದೇಟನ್ನು ಚಲ್ಲು, ಅನಂತರ ಅದನ್ನು ಮತ್ತೆ ತೆಗೆದುಕೊಳ್ಳುವಿಯಂತೆ ಈಗ ಮೊದಲು ನನ್ನ ಪ್ರಿಯಳ ವೃತ್ತಾಂತವನ್ನು ಹೇಳಿ ನನ್ನನ್ನು ಈ ವಿರಹತಾಪದಿಂದ ಪಾರುಮಾಡು. ಏಕಂದರೆ ಸಜ್ಜನರಿಗೆ ತಮ್ಮ ಸ್ವಾರ್ಥಕ್ಕಿಂತ ದೀನರ ಪ್ರಾರ್ಥನೆಯೆ ಹೆಚ್ಚು ಮಹತ್ವವಾದದ್ದು. ॥ ೩೧ ॥

ಇದು ಮೇಲೆ ಮೋರೆಮಾಡಿ ನೋಡುತ್ತಿರುವದೆಂದಮೇಲೆ, ತಾನು ಮಾನಸ ಸರೋವರಕ್ಕೆ ಹೋಗಲು ಬಹಳೇ ಉತ್ಸುಕನಾಗಿದ್ದರಿಂದ ನನ್ನ ಪ್ರಿಯಳನ್ನು ನೋಡಿಲ್ಲವೆಂದು ಹೇಳಿದಂತಿದೆ (ಕುಳಿತುಕೊಳ್ಳುವನು ಬಳಿಕ ಚರ್ಚರಿಯು) ಎಲೈ ಕಲಹಂಸವೆ, [ನಿಜಸಂಗತಿಯನ್ನು ಸುಮ್ಮನೆ] ಏಕೆ ಬಚ್ಚಿಡುತ್ತಿರುವಿ ?

(ಎಂದು ಕುಣಿಯುತ್ತ ಎದ್ದು)

ಎಲೈ ಹಂಸವೆ, ಒಂದುವೇಳೆ, ಕುಟಿಲವಾದ ಹುಬ್ಬುಗಳುಳ್ಳ ನನ್ನ ಪ್ರಿಯಳು ಈ ಸರೋವರದ ದಂಡೆಯ ಮೇಲೆ ನಿನ್ನ ಕಣ್ಣಿಗೆ ಬೀಳದೆ ಇದ್ದಿದ್ದರೆ, ಎಲೆ ಕಳ್ಳಹಂಸವೆ, ಅನುರಾಗದಿಂದ ಆಕರ್ಷಕವಾಗಿ ಹೆಜ್ಜೆಯಿಡುವ ಅವಳ ನಡಿಗೆಯನ್ನು ನೀನು ಹೇಗೆ ಪಡೆದೆ ? ॥೩೨॥

(ಚರ್ಚರಿಯ) ಅವಳ ನಡಿಗೆಯ ಅನುಕರಣದಿಂದಲೇ ನನಗೆ ಗೊತ್ತಾಗುವದು. (ಚರ್ಚರಿಯ ಸ್ವರದೊಂದಿಗೆ ಅದರ ಸಮೀಪಕ್ಕೆ ಹೋಗಿ ಕೈಜೋಡಿಸಿ) ಆದ್ದರಿಂದ ಎಲೆ ಹಂಸವೆ, ನನ್ನ ಪ್ರಿಯಳನ್ನು ನನಗೆ ಒಪ್ಪಿಸು. ಅವಳ ನಡಿಗೆಯನ್ನು ನೀನು ಕದ್ದಿರುವಿ [ಅಂದಮೇಲೆ ಅವಳನ್ನು ಅಪಹರಿಸಿರಲಿಕ್ಕೇಬೇಕು] ಏಕೆಂದರೆ, ಕಳವಿನ ಮಾಲಿನ ಒಂದು ಭಾಗವು ಸಹ ಯಾರಲ್ಲಿ ಸಿಗುವದೊ, ಅವನು ಇಡೀ ವಸ್ತುವನ್ನು ಕೊಡಲೇ ಬೇಕು. ॥೩೩॥

(पुनश्चर्चरी) **केन तव शिक्षिता एषा गतिर्ललसा ।**

सा त्वया दृष्टा जघनभरालसा ॥ ॥ ३४ ॥

[कइ पइ सिक्खिउ ए गइ लालस । सा पड दिट्ठी जहणभरालस ॥]

पुनः श्चर्चरी । हस प्रयच्छेत्यादि (पठित्वा निरूप्य विहस्य) एष चोरानुशासी राजेति भयादुत्पतितः । यावदन्यमवकाशमवगाहिष्ये । (द्विपदिकया (४-२९) परिक्रम्य अवलोक्य च) अये प्रियासहायश्चक्रवाकस्तिष्ठति । तावदेन पृच्छामि ।

(अनन्तरे कुटिलिका) **मर्मररणितमनोहरे**

(मल्लघटी) **कुसुमिततरुवरपल्लविते ।**

(चर्चरी) **दयिताविरहोन्मादित.**

कानने भ्रमति गजेन्द्र. ॥ ३५ ॥

[मम्मररणिअमणोहरए कुसुमिअतरुवरपल्लविए । दइआविरहुम्माइअओ काणण भमइ गइन्दओ ॥] (द्विलयान्ते चर्चरी)

गोरोचनवर्ण चक्र भण मम ।

मधुवासरे क्रीडन्ती धन्या न दृष्टा त्वया ॥ ३६ ॥

[गोरोअणवण्णा चक्का भणहि मइ । महुवासर कीलन्ती धणिआ ण दिट्ठी पइ ॥]

(चर्चरिकयोपसृत्य जानुभ्या स्थित्वा)

(ಮತ್ತೆ ಚರ್ಚರಿಯು) ಆಕರ್ಷಕವಾದ ಈ ನಡಿಗೆಯನ್ನು ನಿನಗೆ ಯಾರು ಕಲಿಸಿದರು? ಜಘನಗಳ ಭಾರದಿಂದ ಬಳಲಿದ ನೀನು ನೋಡಿರಲಿಕ್ಕೆ ಬೇಕು ॥೩೪॥

(ಮತ್ತೆ ಚರ್ಚರಿಯು 'ಹಂಸ ಪ್ರಯಚ್ಛ' (೪-೩೩) ಇತ್ಯಾದಿ ಪುನಃ ಉಚ್ಚರಿಸಿ ಪರೀಕ್ಷಿಸಿ ನಗುತ್ತ) ನಾನು ಕಳ್ಳರನ್ನು ದಂಡಿಸುವ ಅರಸನಾದುದರಿಂದ ತನಗ ಶಿಕ್ಷೆ ವಿಧಿಸ ಬಹುದೆಂಬ ಭಯದಿಂದ ಇದು ಹಾರಿಹೋಯಿತು. ಆಗಲಿ ನಾನೀಗ ಬೇರಡೆಗೆ ಹೋಗು ವೆನು (ದ್ವಿಪದಿಕೆ (೪-೨೯)ಯ ಸ್ವರದೊಡನೆ ಬೇರೆ ಕಡೆಗೆ ಹೋಗಿ ನೋಡಿ) ಇಲ್ಲಿ ಈ ಚಕ್ರವಾಕ ಪಕ್ಷಿಯು ತನ್ನ ಪ್ರಿಯಳೊಡನೆ ಕುಳಿತಿರುವದು. ನಾನೀಗ ಅದನ್ನು ಕೇಳುವೆನು. (ಬಳಿಕ 'ಕುಟಿಲಿಕಾ' 'ಮಲ್ಲಘಟೀ' ಹಾಗು ಚರ್ಚರಿ', ಈ ಸ್ವರಗಳು ಕೇಳಬರುವವು.)

ತನ್ನ ಇನಿಯಳ ವಿರಹದಿಂದ ಉನ್ಮತ್ತವಾದ [ಪ್ರೈಮರಿತ] ಈ ಮದ್ದಾನೆಯು, ಒಣಗಿದ ಎಲೆಗಳ ಮರ್ಮರ ಸಪ್ಪಳದಿಂದ ಆಕರ್ಷಕವಾದ ಹಾಗು ಚಿಗುರೆಲೆಗಳಿಂದಲೂ, ಕುಸುಮಗಳಿಂದಲೂ ಕಂಗೊಳಿಸುವ ಗಿಡಗಳಿಂದ ಶೋಭಿಸುವ ಈ ವನದಲ್ಲಿ ಅಡ್ಡಾಡು ತ್ತಿರುವದು. ॥೩೫॥

(ದ್ವಿಲಯದ ನಂತರ ಚರ್ಚರಿಯು)

ಗೋರೋಚನದಂತೆ ಬಣ್ಣವುಳ್ಳ ಚಕ್ರವಾಕ ಪಕ್ಷಿಯೆ, ಈ ವಸಂತ ಸಮಯದಲ್ಲಿ ವಿಹರಿಸುವ ಆ ಸುಮಂಗಲೆಯನ್ನು [ಉರ್ವಶಿಯನ್ನು] ನೀನು ನೋಡಿಲ್ಲವೆ? ಹೇಳು ॥೩೬॥

(ಚರ್ಚರಿಯ ಸ್ವರದೊಂದಿಗೆ ಮುಂದೆ ಹೋಗಿ, ಮೊಣಕಾಲೂರಿ)

रथाङ्गनामन् वियुतो रथाङ्गश्रोणिबिम्बया ।
अयं त्वा पृच्छति रथी मनोरथशतैर्वृत ॥ ३७ ॥

कथ क क इत्याह । मा तावत न खलु विदितोऽहमस्य ।

सूर्याचन्द्रमसौ यस्य मातामहपितामहौ ।
स्वय वृत पतिर्द्वाभ्यामुर्वश्या च भुवा च य ॥ ३८ ॥

कथ तूष्णी स्थित । भवतु । उपालप्स्ये तावदेनम् ।

सरसि नलिनीपत्रेणापि त्वमावृतविग्रहां
ननु सहचरीं दूरे मत्वा विरौषि समुत्सुकः ।
इति च भवतो जायास्नेहात्पृथक्स्थितिभीरुता
मयि च विधुरे भाव कान्ताप्रवत्तिपराङ्मुखः ॥ ३९ ॥

सर्वथा मदीयाना भागधेयाना विपर्ययेण प्रभावप्रकाश । यावदन्यमवकाशमवगाहिष्ये । (द्विपदिकया (४–२९) परिक्रम्यावलोक्य च) अये

ರಥಾಂಗ [ಚಕ್ರ]ವೆಂಬ ಹೆಸರುಳ್ಳ ಚಕ್ರವಾಕ ಪಕ್ಷಿಯೆ, ರಥಾಂಗ [ಚಕ್ರ]ಗಳಂತೆ ದುಂಡಾಗಿ ಸುಂದರವಾದ ನಿತಂಬವುಳ್ಳ ಪ್ರಿಯಳನ್ನು ಅಗಲಿದ ಈ ಮಹಾರಥಿಯು [ನಾನು] ನೂರಾರು ಬಯಕೆಗಳಿಂದೊಡಗೂಡಿದವನಾಗಿ ನಿನಗೆ ಕೇಳುವೆನು. ॥೩೭॥

ಏನು ! 'ನೀನಾರು [ಶ ಶ] ಎಂದು ಕೇಳುವದಲ್ಲ ! ನಾನಾರೆಂಬುದು ಇದಕ್ಕೆ ಗೊತ್ತಿರುವದಿಲ್ಲ

ಸೂರ್ಯ ಚಂದ್ರಮರು ಯಾರ ಅಜ್ಜಂದಿರೊ [ಸೂರ್ಯನು ಮಾತಾಮಹನು- ತಾಯಿಯ ತಂದೆ, ಹಾಗು ಚಂದ್ರನು ಪಿತಾಮಹನು] ಮತ್ತು ಉರ್ವಶಿ ಮತ್ತು ಭೂಮಿ ಇವರೀರ್ವರೂ ಯಾರನ್ನು ತಮ್ಮ ಪತಿಯೆಂದು ವರಿಸಿರುವರೊ, ಅವನು ನಾನು ॥೩೮॥

ಇದೇನು ಸುಮ್ಮನೆ ಕುಳಿತಿರುವದಲ್ಲ ! ಇರಲಿ. ಇದನ್ನು ಆಕ್ಷೇಪಿಸಿ ನಿಂದಿಸುವೆನು. ಎಲೆ ಚಕ್ರವಾಕವೆ, ನಿನ್ನ ಇನಿಯಳು ಸರೋವರದಲ್ಲಿ ಒಂದೇ ಒಂದು ಕಮಲದ ಎಲೆ ಯಿಂದ ಮರೆಯಾಗಲು, ಅವಳು ಬಹಳೇ ದೂರವಿರುವಳೆಂದು ಭಾವಿಸಿ ನೀನು ಕಳವಳ ಗೊಂಡು ವಿಲಾಪ ಮಾಡುವಿ ನಿನ್ನ ಪ್ರಿಯಳ ಮೇಲೆ ನಿನ್ನದು ಇಷ್ಟೊಂದು ಉತ್ಕಟವಾದ ಅನುರಾಗವಿರುವದರಿಂದ ನಿನಗೆ ಅವಳ ಅಗಲುಪಿಕೆಯ ಭಯವು ಹೀಗಿದ್ದರೂ ವಿರಹ ವ್ಯಥೆಯಿಂದ ಬಳಲಿದ ನನಗೆ ನನ್ನ ಪ್ರಿಯಳ ಸಮಾಚಾರವನ್ನು ಹೇಳಲು ನೀನು ಪ್ರತಿಕೂಲನಾಗಿರುವಿ ॥೩೯॥

[ನೀವೆಲ್ಲರೂ ನನಗೇನನ್ನೂ ಹೇಳದೆ ಹೀಗೆ ಸುಮ್ಮನೆ ಇರುವದು] ನಿಜವಾಗಿಯೂ ನನ್ನ ದುರದೃಷ್ಟದ ಪ್ರಭಾವವು ಒಳ್ಳೇದು. ಮತ್ತೊಂದು ಕಡೆಗೆ ಹೋಗುವೆನು (ದ್ವಿಪದಿಕೆ (೪–೨೯) ಸ್ವರಗಳೊಡನೆ ಸ್ವಲ್ಪ ಮುಂದೆ ಹೋಗಿ, ನೋಡಿ) ಓಹೊ

इद रुणद्धि मा पद्ममन्तःकूजितषट्पदम् ।
मया दष्टाधर तस्या ससीत्कारमिवाननम् ॥ ४० ॥

भवतु । अस्मिन्नेव कमलाध्यासिनि मधुकरे प्रणयित्व करिष्ये इतोगतस्यानुशयो मा भूदिति । (अस्यानन्तरे अर्धद्विचतुरस्रक)

एकक्रमवर्धितगुरुतरप्रेमरसेन ।
सरसि हसयुवा क्रीडति कामरसेन ॥ ४१ ॥

[एक्कक्कमवड्ढिअगुरुअरपेम्मरसे । सरे हसजुआणओ कीलइ कामरसे ॥]
(चतुरस्रकेण उपेत्य अञ्जलि बद्ध्वा)

मधुकर मदिराक्ष्या शस तस्या प्रवृत्ति
(विभाव्य) **वरतनुरथवासौ नैव दृष्टा त्वया मे ।**
यदि सुरभिमवाप्स्यस्तन्मुखोच्छ्वासगन्धं
तव रतिरभविष्यत्पुण्डरीके किमस्मिन् ॥ ४२ ॥

साधयामस्तावत् । (द्विपदिकया (४–१९) परिक्रम्य अवलोक्य च) एष नीपस्कन्धनिषण्णहस्त करिणीसहायो नागराजस्तिष्ठति । अस्मात्प्रियोदन्तमुपलप्स्ये यावदुपसर्पामि । (कुटिलिकया)

ನಾನು ಅಧರವನ್ನು ಕಚ್ಚಲು ಸೀತ್ಕಾರ [' ಇಶ್ ' ಎಂದು] ಮಾಡುವ, ಅವಳ ಮುಖದಂತೆ, ಒಳಗೆ ಭ್ರಮರವು ಗುಂಯೆಂದು ಶಬ್ದ ಮಾಡುತ್ತಿರುವ ಈ ಕಮಲವು ನನ್ನನ್ನು ತಡೆಯುತ್ತದೆ ॥೪೦॥

ಇರಲಿ, ಕಮಲದೊಳಗಿರುವ ಈ ಭ್ರಮರಕ್ಕೆ ಪ್ರಾರ್ಥಿಸುವೆನು. ಇಲ್ಲಿಂದ ದೂರ ಹೋದಮೇಲೆ ಇದನ್ನು ಕೇಳಲಿಲ್ಲವೆಂದು ಪಶ್ಚಾತ್ತಾಪವಾಗುವದು ಬೇಡ (ಅದಾದ ಬಳಿಕ ಅರ್ಧ ದ್ವಿಚತುರಸ್ರಕವು–ವಿಶಿಷ್ಟವಾದ ಗೀತ ಅಥವಾ ಬಂಗಿಯು) ಪ್ರತಿಯೊಂದು ಕ್ಷಣಕ್ಕೆ ಹೆಚ್ಚಾಗುತ್ತಿರುವ ಉತ್ಕಟವಾದ ಅನುರಾಗದಿಂದ ಈ ತರುಣ ಹಂಸವು ಸರೋವರದಲ್ಲಿ ಮೋಹದಿಂದ ವಿಹರಿಸುತ್ತಿರುವದು. ॥೪೧॥

(ಚತುರಸ್ರಕದೊಂದಿಗೆ ಅದರ ಹತ್ತಿರ ಹೋಗಿ, ಕೈಜೋಡಿಸಿ) ಎಲೆ ಮಧುಕರವೆ, ಆ ಮದಿರಾಕ್ಷಿಯ ಸಮಾಚಾರವನ್ನು ನನಗೆ ಅರುಹು. ಚೆನ್ನಾಗಿ ಯೋಚಿಸಿ ಅಥವಾ ಆ ಸುಂದರಿಯನ್ನು ನೀನು ಕಂಡೇ ಇಲ್ಲ ಏಕಂದರೆ, ಅವಳ ಮುಖದ ಶ್ವಾಸದ ಸುಗಂಧವು ನಿನಗೆ ದೊರಕಿದ್ದರೆ ನೀನು ಹೀಗೆ ಈ ಕಮಲವನ್ನು ಬಯಸುತ್ತಿದ್ದಿಲ್ಲ. ॥೪೨॥

ಒಳ್ಳೇದು. ಬೇರೆಡೆಗೆ ಹೋಗುವೆನು. (ದ್ವಿಪದಿಕೆ (೪–೨೯)ಯ ಸ್ವರದೊಂದಿಗೆ ಮುಂದೆ ಹೋಗಿ, ನೋಡಿ).

करिणीविरहसतापित ।

(मल्लघटी) कानने गन्धोद्धतमधुकर ॥ ४३ ॥

[करिणीविरहसताविओ । काणणए गन्धुध्वअमहुअरु ॥]

(अतोऽन्तरे विलोक्य) भवतु न त्वरा कार्या

अयमचिरोद्गतपल्लवमुपनीत प्रियकरेणुहस्तेन ।

अभिलषतु तावदासवसुरभिरस सल्लकीभङ्गम् ॥ ४४ ॥

(क्षणमात्र स्थित्वा । स्थानकेन अवलोक्य) अये कृताहारक सवृत्त । भवतु पृच्छामि । (अनन्तरे चर्चरी)

अह त्वा पृच्छामि आचक्ष्व गजवर

ललितप्रहारेण नाशिततरुवर ।

दूरविनिर्जितशशधरकान्तिर्दृष्टा

प्रिया त्वया समुख यान्ती ॥ ४५ ॥

[हउ पइ पुच्छिमि अक्खहि गअवरु ललिअपहारे णासिअतरुवरु । दूरविणिज्जिअससहरुकन्ती दिट्ठी पिअ पइ समुह जन्ती ॥]

(पदद्वय पुरत उपसृत्य)

ಅದು ಅಲ್ಲಿ ಒಂದು ಆನೆಯು ನೀವವೃಕ್ಷದ ಮೇಲೆ ತನ್ನ ಸೊಂಡೆಯನು ಇಟ್ಟುಕೊಂಡು ಹೆಣ್ಣಾನೆಯ ಜೊತೆಗೆ ನಿಂತಿರುವದು ಅಲ್ಲಿಗೆ ಹೋಗಿ ಆ ಆನೆಯಿಂದ ನನ್ನ ಪ್ರಿಯಳ ಸಮಾಚಾರವನ್ನು ತಿಳಿದುಕೊಳ್ಳುವೆನು. (ಕುಟಿಲಿಕೆಯೊಡನೆ) ತನ್ನ ಪ್ರಿಯಳಾದ ಹೆಣ್ಣಾನೆಯ ವಿಯೋಗದಿಂದ ಪೀಡಿತವಾದ (ಮಲ್ಲಘಟಿಯು) ಮತ್ತು ಮದೋದಕದಿಂದ ಮಧುಕರಗಳನ್ನು ಆಕರ್ಷಿಸಿದ [ಈ ಮದ್ದಾನೆಯು ಇಲ್ಲಿ ಅಡ್ಡಾಡುತ್ತಿರುವದು]. ॥೪೩॥

(ಅಷ್ಟರಲ್ಲಿ ನೋಡಿ) ಇರಲಿ, ನಾನು ತ್ವರೆಮಾಡುವದು ಬೇಡ.

ತನ್ನ ವಲ್ಲಭೆಯು ಪ್ರೀತಿಯಿಂದ ತಂದುಕೊಟ್ಟ ಅದೇ ಚಿಗುರೊಡೆದ ಹಾಗು ಮದಿರೆಯ ವಾಸನೆಯುಳ್ಳ ರಸವುಳ್ಳ, ಈ ಸಲ್ಲಕೀ ಗಿಡದ ಟೊಂಗೆಯನ್ನು (ಅಥವಾ ಮುಗುಳು) ಸೇವಿಸಲಿ. ॥೪೪॥

(ತುಸುಹೊತ್ತು ನಿಂತು, ಸ್ಥಾನಕದೊಂದಿಗೆ ನೋಡಿ) ಓಹೊ ಇದು ಆಹಾರವನು ಸೇವಿಸಿತು. ಒಳ್ಳೇದು ಈಗಿದಕ್ಕೆ ಕೇಳುವೆನು.

(ಅಷ್ಟರಲ್ಲಿ ಚರ್ಚರಿಯು) ವಿನೋದದಿಂದ ಹೊಡೆದು ಎಂಥ ದೊಡ್ಡ ಮರಗಳನ್ನು ಸಹಜವಾಗಿ ಕೆಡಹುವ ಗಜೇಂದ್ರನೇ, ನಾನು ನಿನಗೆ ಕೇಳುವೆನು. ತನ್ನ ಸೌಂದರ್ಯದಿಂದ ಚಂದ್ರನ ಕಾಂತಿಯನ್ನು ಸಹ ಸೋಲಿಸಿದ ನನ್ನ ಪ್ರಿಯಳ ನಿನ್ನೆದುರಿಗೆ ಹೋಗುವಾಗ ನಾನು ಅವಳನ್ನು ನೋಡಿರುವಿಯಾ ? ಹೇಳು ॥೪೫॥

(ಎರಡು ಹೆಜ್ಜೆ ಮುನ್ನಡೆದು)

मदकल युवतिशशिकला गजयूथप यूथिकाशबलकेशी ।
स्थिरयौवना स्थिता ते दूरालोके सुखालोका ।। ४६ ।।

(सहर्षमाकर्ण्य) अनेन स्निग्धमन्द्रेण गर्जितेन प्रियोपलम्भशंसिना समाश्वासितोऽस्मि । साधर्म्याद्भूयसी मे त्वयि प्रीतिः ।

मामाहुः पृथिवीभृतामधिपतिं नागाधिराजो भवा-
नव्युच्छिन्नपृथुप्रवृत्ति भवतो दानं ममाप्यर्थिषु ।
स्त्रीरत्नेषु ममोर्वशी प्रियतमा यूथे तवेयं वशा
सर्वं मामनु ते प्रियाविरहजां त्वं तु व्यथां मानुभूः ।। ४७ ।।

सुखमास्तां भवान् । साधयामस्तावत् । (द्विपदिकया (४–२९) परिक्रम्य अवलोक्य च) अये अयमसौ सुरभिकन्दरो नाम विशेषरमणीयः सानुमानालोक्यते । प्रियश्चायमप्सरसाम् । अपि नाम सुतनुरस्योपत्यकायामुपलभ्येत । (परिक्रम्यावलोक्य च)

ಮದದಿಂದ ಗಂಭೀರವಾಗಿ ಶಬ್ದಮಾಡುವ, ಆನೆಗಳ ಹಿಂಡಿನ ನಾಯಕನಾದ, ಆನೆಯೆ, ಯುವತಿರೆಂಬ ತಾರೆಗಳ ಮಧ್ಯದಲ್ಲಿ ಚಂದ್ರನಂತಿರುವ, ನೇವಂತಿಗೆ (यूथिका) ಹೂವುಗಳನ್ನು ಮುಡಿದದ್ದರಿಂದ ಚಿತ್ರ ವಿಚಿತ್ರವಾದ ಕೇಶಪಾಶವುಳ್ಳ, ಮತ್ತು ಶಾಶ್ವತವಾದ ತಾರುಣ್ಯವುಳ್ಳ, ಆ ಸುಲೋಚನೆಯನ್ನು ನೀನು ದೂರದಿಂದಾದರೂ ನೋಡಿರುವಿಯಾ? ॥೪೬॥

(ಸಂತೋಷದಿಂದ ಕೇಳಿ) ಸ್ನಿಗ್ಧವಾಗಿಯೂ ಗಂಭೀರವಾಗಿಯೂ ಇರುವ ಮತ್ತು ನನ್ನ ಪ್ರಿಯಳ ಸಮಾಚಾರವನ್ನೂ ಸೂಚಿಸುವಂತಿರುವ ಈ ಶಬ್ದದಿಂದ ನನ್ನನ್ನು ಸಂತೈಸುತ್ತಿರುವದು. [ಎಲೈ ಗಜೇಂದ್ರನೆ] ನಮ್ಮಿರ್ವರಲ್ಲಿ ಬಹಳೇ ಸಾಮ್ಯವಿರುವದರಿಂದ ನಿನ್ನಲ್ಲಿ ನನ್ನ ವಿಶ್ವಾಸವುಂಟಾಗಿರುವದು.

ಭೂಪತಿಗಳ ಅಧಿಪತಿಯೆಂದು [ಚಕ್ರವರ್ತಿ] ನನಗೆ ಕರೆಯುವರು. ನೀನು ಗಜಾಧಿಪತಿಯು ನಿನ್ನ ಮದೋದಕವು ಸತತವಾಗಿ ಧಾರಾಳವಾಗಿ ಹರಿಯುವ ಹಾಗೆ ನಾನೂ ಬೇಡಿದವರಿಗೆ ಸತತ ಹೇರಳವಾದ ದಾನಮಾಡುವೆನು ಈ ಇಡೀ ಹಿಂಡಿನಲ್ಲಿ ಈ ಹೆಣ್ಣಾನೆಯು ನಿನ್ನ ಪ್ರಿಯಳಿದ್ದಂತೆ ಎಲ್ಲ ಲಲನೆಯರಲ್ಲಿ ಉರ್ವಶಿಯು ನನ್ನ ಪ್ರಿಯತಮೆಯು ಹೀಗೆ ಎಲ್ಲ ರೀತಿಯಿಂದಲೂ ನೀನು ನನ್ನನ್ನು ಹೋಲುವಿ. ಆದರೂ, ನಾನು ಈಗ ಅನುಭವಿಸುತ್ತಿರುವಂತೆ ನೀನು ನಿನ್ನ ಪ್ರಿಯಳನ್ನಗಲಿ ವಿರಹಯಾತನೆಯನ್ನು ಮಾತ್ರ ಅನುಭವಿಸಬೇಡ ॥೪೭॥

ನೀನು ಸುಖಿಯಾಗಿ ಬಾಳು. ನಾವು ಹೋಗುವೆವು (ದ್ವಿಪದಿಕೆ (೪–೨೯)ಯ ಸ್ವರದೊಂದಿಗೆ ಮುಂದೆ ಹೋಗಿ, ನೋಡಿ,) ಅಹಾ ! ಬಹಳೇ ಶೋಭಿಸುವ ಸುರಭಿ ಕಂದರವೆಂಬ ಈ ಪರ್ವತವು ಕಾಣುತ್ತಿರುವದು. ಇದು ಅಪ್ಸರೆಯರಿಗೆ ಬಹಳ ಪ್ರಿಯವಾದದ್ದು. ಇದರ ಇಳುಕಲು ಪ್ರದೇಶದಲ್ಲಿ ನನ್ನ ಪ್ರಿಯಳೇನಾದರೂ ಸಿಗಬಹುದೊ ? (ಎಂದು ಪರಿಕ್ರಮಿಸಿ, ನೋಡಿ) ಇದೇನು ! ಕತ್ತಲೆಯು ! ಒಳ್ಳೇದು. ಮಿಂಚಿನ ಬೆಳಕಿನಲ್ಲಿ

कथमन्धकार । भवतु विद्युत्प्रकाशेनावलोकयामि । हन्त मदीयैर्दुरितपरिणामैर्मेघोऽपि शतह्रदाशून्य सवृत्त । तथापि शिलोच्चयमेतमपृष्टवा न निवर्तिष्ये । (अनन्तरे खण्डिक)

प्रसृतखरखुरदारितमेदिनिर्वनगहनेऽविचल ।
परिसर्पति पश्यत लीनो निजकार्योद्युक्त. कोल ।। ४८ ।।

[पसरिअखरखुरदारिअमेइणि वणगहणे अविचालु । परिसप्पइ पेछ्छह लीणो णिअकज्जुज्जुअ कोलु ।।]

अपि वनान्तरमल्पकुचान्तरा श्रयति पर्वत पर्वसु सनता ।
इयमनङ्गपरिग्रहमङ्गला पृथुनितम्ब नितम्बवती तव ।। ४९ ।।

कथ तूष्णीमास्ते । शङ्के विप्रकृष्टो न श्रृणोतीति । समीपमस्य गत्वा पुनरेन पृच्छामि । (अनन्तरे चर्चरी)

स्फटिकशिलातलनिर्मलनिर्झर बहुविधकुसुमैर्विरचितशेखर ।
किंनरमधुरोद्गीतमनोहर दर्शय मम प्रियतमा महीधर ।। ५० ।।

[फलिहसिलाअलणिम्मणिज्झरु बहुविहकुसुमे विरइअसेहरु । किण्णरमहुरुग्गीअ-मणोहरु देख्खावहि मह पिअअम महिहरु ।। (चर्चरिकयोपसृत्याञ्जलि बद्ध्वा)

ನಾನು ಅವಳನ್ನು ನೋಡುವೆನು ಅಯ್ಯೋ ! ನನ್ನ ದುರದೃಷ್ಟದಿಂದ ಮೋಡವು ಮಿಂಚ ನ್ನಗಲಿತು ಆದರೂ ಈ ಪರ್ವತವನ್ನು ಕೇಳದೆ ಹಿಂತಿರುಗಲಾರೆನು. (ಬಳಿಕ ಖಂಡಕವು)

ತನ್ನ ಕಾರ್ಯದಲ್ಲಿ ತೊಡಗಿದ, ತನ್ನ ಬಿರುಸಾದ ಖುರಗಳನ್ನೂ ಮುಂದೆ ಚಾಚಿ ಭೂಮಿಯನ್ನು ಭೇದಿಸುವ ಧೈರ್ಯ ಶಾಲಿಯಾದ ಈ ಕಾಡುಹಂದಿಯು ಹೊಂಚುಹಾಕಿ ಅಡ್ಡಾಡುತ್ತಿರುವದು ॥ ೪೮ ॥

ವಿಶಾಲವಾದ ತಪ್ಪಲುಗಳುಳ್ಳ ಪರ್ವತವೆ, ಸುಂದರವಾದ ನಿತಂಬಗಳುಳ್ಳ ಘನವಾದ ಕುಚಗಳುಳ್ಳ [ಶಬ್ದಶಃ-ಕುಚಗಳ ಮಧ್ಯದಲ್ಲಿ ಸ್ವಲ್ಪೇ ಅಂತರವುಳ್ಳ] ಮತ್ತು ರತಿಯಂತೆ ಮಂಗಲಕರಳಾದ ವಿನಯಶಾಲಿಯಾದ ನನ್ನ ಪ್ರಿಯಳು ನಿನ್ನ ವನಪ್ರದೇಶಗಳನ್ನು ಆಶ್ರಯಿಸಿರುವಳೊ ? ॥ ೪೯ ॥

ಇದೇನು ಸುಮ್ಮನೇ ಇರುವದು ? ದೂರದಲ್ಲಿರುವದರಿಂದ ಇದಕ್ಕೆ ನನ್ನ ಮಾತು ಕೇಳಿಸಿರಲಿಕ್ಕಿಲ್ಲ ಕಾರಣ ಇದರ ಸಮೀಪಕ್ಕೆ ಹೋಗಿ ಇದನ್ನು ಮತ್ತೆ ಕೇಳುವೆನು (ಆ ಮೇಲೆ ಚರ್ಚರಿಯು)

ಸ್ಫಟಿಕಶಿಲೆಗಳಂತೆ ಸ್ವಚ್ಛವಾದ ಹೊಳೆಹಳ್ಳಗಳುಳ್ಳ, ತರತರದ ಬಣ್ಣದ ಪುಷ್ಪಗಳೇ ಶಿಖಾಭರಣವುಳ್ಳ ಮತ್ತು ಕಿನ್ನರರ ಮಧುರವಾದ ಗಾನದಿಂದ ಮನೋಹರವಾದ ಪರ್ವತವೆನನ್ನ ಪ್ರಾಣಕಾಂತೆಯನ್ನು ನನಗೆ ತೋರಿಸು ॥ ೫೦ ॥

(ಚರ್ಚರಿ ೪–೫೯ ಯ ಸ್ವರದೊಂದಿಗೆ ಮುನ್ನಡೆದು ಕೈಜೋಡಿಸಿ)

सर्वक्षितिभृतां नाथ दृष्टा सर्वाङ्गसुन्दरी ।
रामा रम्ये वनान्तेऽस्मिन् मया विरहिता त्वया ॥ ५१ ॥

(आकर्ण्य सहर्षम्) कथं यथाक्रमं दृष्टेत्याह। भवतु अवलोकयामि। (दिशोऽवलोक्य सखेदम्) हा धिक्। ममैवायं कन्दरमुखविसर्पी प्रतिशब्दः। (विषादं रूपयित्वा) श्रान्तोऽस्मि अस्यास्तावद्गिरिनद्यास्तीरे स्थितस्तरङ्गवातमासेविष्ये। (द्विपदिकया (४-२९) परिक्रम्यावलोक्य च) इमां नवाम्बुकलुषामपि स्रोतोवहां पश्यतो मे रमते मनः।

तरङ्गभ्रूभङ्गा क्षुभितविहगश्रेणिरशना
विकर्षन्ती फेनं वसनमिव संरम्भशिथिलम् ।
यथाविद्धं याति स्खलितमभिसंधाय बहुशो
नदीभावेनेयं ध्रुवमसहना सा परिणता ॥ ५२ ॥

भवतु। प्रसादयामि तावदेनाम्। (अनन्तरे कुटिलिका)

प्रसीद प्रियतमे सुन्दरि नदि क्षुभिताकरुणविहगमे नदि ।
सुरसरित्तीरसमुत्सुके नदि अलिकुलझङ्कारिते नदि ॥ ५३ ॥

ಸಕಲಪರ್ವತಗಳ ನಾಯಕನಾದ ಶ್ರೇಷ್ಠಪರ್ವತವ, ನನ್ನನ್ನಗಲಿದ, ಸರ್ವಾಂಗ ಸುಂದರಳಾದ ನನ್ನ ಪ್ರಿಯಳನ್ನು ಈ ಅಡವಿಯಲ್ಲಿ ನೋಡಿರುವಿಯಾ ? ॥ ೫೧ ॥

[ಪ್ರತಿಧ್ವನಿಯನ್ನು] (ಕೇಳಿ ಆನಂದದಿಂದ) ಏನು ? ಅವಳನ್ನು ಇದೇ ಕ್ರಮದಲ್ಲಿ ನೋಡಿರುವೆನೆಂದು ಹೇಳುವದು ! ಒಳ್ಳೇದು ನಾನವಳನ್ನು ನೋಡುವೆನು. (ಎಲ್ಲಕಡೆಗೆ ನೋಡಿ ಖೇದದಿಂದ) ಅಯ್ಯೋ ! ನನಗೆ ಧಿಕ್ಕಾರವಿರಲಿ ಇದು ಈ ಗುಹೆಯಿಂದ ಹೊರಟ, ನನ್ನದೇ, ಪ್ರತಿಧ್ವನಿಯು (ವಿಷಾದವನ್ನು ಸೂಚಿಸಿ) ನಾನೀಗ ದಣಿದಿರುವೆನು ಈ ಗಿರಿನದಿಯ ದಂಡೆಯ ಮೇಲೆ ಕುಳಿತುಕೊಂಡು ತರಂಗಗಳ ಮೇಲಿಂದ ಬರುವ ತಂಗಾಳಿ ಯನ್ನು ಸೇವಿಸುವೆನು. (ದ್ವಿಪದಿಕೆ(೪-೨೯)ಯೊಡನೆ ಮುಂದೆ ಹೋಗಿ ನೋಡಿ)ಹೊಸನೀರು ಬಂದು ಕದಡಿರುವ ಈ ನದಿಯನ್ನು ನೋಡಿ ನನ್ನ ಮನಸ್ಸಿಗೆ ಸಂತೋಷವಾಗುವದು

ತರಂಗಗಳೆಂಬ ಕುಟಿಲವಾದ ಹುಬ್ಬುಗಳುಳ್ಳ, ಗೊಂದಲಗೊಂಡು ಚೀರಾಡುತ್ತಿರುವ ಹಕ್ಕಿಗಳ ಸಾಲೇ ಗೆಜ್ಜೆಯ ಪಟ್ಟಿಯಾಗಿರುವ, ಸಂಭ್ರಮದಲ್ಲಿ ಸಡಿಲಾದ ಸೀರೆಯೊ ಎಂಬಂತೆ ಇರುವ ನೊರೆಯನ್ನು ಎಳೆಯುತ್ತಿರುವ ಈ ನದಿಯು ಎಡೆತಡೆಗಳನ್ನೆಲ್ಲ ಪರಿಹರಿಸುತ್ತ, ಅಂಕುಡೊಂಕಾಗಿ ಹರಿಯುತ್ತಿರುವದರಿಂದ ನನ್ನ ತಪ್ಪನ್ನೇ ಎಣಿಸುತ್ತಿರುವ ಅಸಹನೆ ಯಾದ [ಸಹನಶೀಲತೆಯಿಲ್ಲದ] ನನ್ನ ಪ್ರಿಯಳೇ ನಿಜವಾಗಿಯೂ ಈ ನದಿಯರೂಪವನ್ನು ತಾಳಿರುವಳೊ ಎಂಬಂತೆ ತೋರುವದು ॥ ೫೨ ॥

ಒಳ್ಳೇದು, ಇವಳನ್ನು ಒಲಿಸುವೆನು (ಬಳಿಕ ಕುಟಿಲಿಕೆಯು) —

ಎಲೈ ಸುರವಾದ ನದಿಯೆ, ಪ್ರಿಯತಮೆಯೆ, ತಲ್ಲಣಗೊಂಡ ಹಾಗು ನಿರ್ದಯವಾದ ಹಕ್ಕಿಗಳಿಂದ ತುಂಬಿದ ಹೊಳೆಯೆ, ಸುರನದಿಯಾದ ಗಂಗೆಯ ದಂಡೆಯನ್ನು ತಲುಪಲು ಆತುರಳಾದ ಹೊಳೆಯೆ, ಭ್ರಮರಗಳ ಝೇಂಕಾರಗಳಿಂದ ಪ್ರತಿಧ್ವನಿಸುವ ಹೊಳೆಯೆ ॥ ೫೩ ॥

[पसोअ पिअअम सुन्दरिए णए खुहिआकरुणविहङ्गमए णए। सुरसरितीरसमूसुअए णए अलिउलझङ्कारिअए णए ॥] (कुटिलिकान्तरे चर्चरी)

पूर्वदिक्पवनाहतकल्लोलोद्गतबाहुर्मेघाङ्गैर्नृत्यति सललित जलनिधिनाथः ।
हंसविहङ्गमकुङ्कुमशङ्खकृताभरण करिमकराकुलकृष्णकमलकृतावरण ।
वेलासलिलोद्वेल्लितदत्तहस्ततालोऽवस्तृणाति दश दिशो रुद्ध्वा नवमेघकालः ॥५४॥

[पुव्वदिसापवणाहअकल्लोलुग्गअबाहओ मेहअङ्गे णच्चइ सललिअ जलणिहिणाहओ। इमविहङ्गमकुङ्कमसङ्खकआभरणु। करिमअराउलकसणल कमलकआवरणु। वेलासलिलुव्वेल्लिअहत्थदिण्णतालु ओत्थरइ दस दिस रुन्धेविणु णवमेहआलु ॥]

(चर्चरिकयोपसृत्य जानुभ्यां स्थित्वा)

त्वयि निबद्धरतेः प्रियवादिनः प्रणयभङ्गपराङ्मुखचेतसः ।
कमपराधलवं मम पश्यसि त्यजसि मानिनि दासजनं यतः ॥ ५५ ॥

कथं तूष्णीमेवास्ते। अथवा परमार्थसरिदेवैषा। न खलूर्वशी पुरूरवसमपहाय मुद्राभिससारिणी भविष्यति। भवतु। अनिर्वेदप्राप्याणि श्रेयांसि। यावदमुमेव प्रदेशं

(ಕುಟಿಲಿಕೆಯ ನಂತರ ಚರ್ಚರಿಯು)

ಮೂಡಲಗಾಳಿಯ ಹೊಡತಕ್ಕೆ ಹೊಯ್ದಾಡುವ ತೆರೆಗಳೆಂಬ ಎತ್ತಿದ ಕೈಗಳುಳ್ಳ, ಹಂಸವೊದಲಾದ ಜಲಚರಪಕ್ಷಿಗಳು ಮತ್ತು ಕುಂಕುಮದಂತೆ ಕೆಂಪಾದ ಕಮಲಗಳು ಇವೆ ಮೊದಲಾದ ಆಭರಣಗಳನ್ನು ಇಟ್ಟುಕೊಂಡ, ಆನೆ ಮೊಸಳೆ ಮೊದಲಾದ ಜಲಚರ ಪ್ರಾಣಿಗಳಿಂದ ತುಂಬಿದ ಕಪ್ಪುನೀರೆಂಬ ವಸ್ತ್ರವನ್ನು ಧರಿಸಿದ ಹಾಗು ದಂಡೆಗಳಿಗೆ ಅಪ್ಪಳಿಸುವ ತರಂಗಗಳೆಂಬ ಕೈಗಳಿಂದ ತಾಳವನ್ನು ಹಿಡಿದ ಈ ಸಾಗರವು ಮೋಡಗಳೆಂಬ ತನ್ನ ಅವಯವಗಳಿಂದ ಲಲಿತ ಮನೋಹರವಾಗಿ ಕುಣಿಯುತ್ತಿರುವದು ಮತ್ತು ನವವರ್ಷಾಕಾಲವು ದಶದಿಕ್ಕುಗಳನ್ನೂ ಆವರಿಸಿ ಎಲ್ಲಕಡೆಗೂ ಪಸರಿಸಿದೆ ॥೫೪॥

ಚರ್ಚರಿಕೆಯೊಂದಿಗೆ ಸಮೀಪಕ್ಕೆ ಬಂದು ಮೊಣಕಾಲೂರಿ [ಅದೇ ನದಿಯನ್ನುದ್ದೇಶಿಸಿ])

ಎಲೈ ಮಾನಿನಿಯೆ, ನಿನ್ನಲ್ಲಿ ಅನುರಕ್ತನಾದ, ಸವಿಮಾತುನಾಡುವ, ಮತ್ತು ಪ್ರಣಯಭಂಗವನ್ನು ಮಾಡಲು ಎಂದೂ ಮನಸ್ಸುಮಾಡದ ನನ್ನಲ್ಲಿ ಒಂದು ಸಣ್ಣ ತಪ್ಪನ್ನಾದರೂ ಕಂಡಿರುವಿಯೂ ಎಂದಮೇಲೆ ನಿನ್ನ ದಾಸನನ್ನು ಏಕೆ ಬಿಟ್ಟಿರುವಿ ? ॥ ೫೫ ॥

ಇದೇನು! ಇದು ಮೌನವಾಗಿಯೇ ಇರುವದಲ್ಲ! ಅಥವಾ ಇದು ನಿಜವಾದ ನದಿಯೇ ಇರಬೇಕು ಏಕೆಂದರೆ, ಉರ್ವಶಿಯು [ಈ ನದಿಯ ರೂಪವನ್ನು ತಾಳಿದ್ದ ಪಕ್ಷದಲ್ಲಿ] ಪುರೂರವನನ್ನು ಬಿಟ್ಟು ಹೀಗೆ ಸಮುದ್ರದ ಕಡೆಗೆ ಎಂದೂ ಹೋಗುತ್ತಿದ್ದಿಲ್ಲ. ಒಳ್ಳೇದು ನಿರಾಶನಾದವನಿಗೆ ಶ್ರೇಯಸ್ಸು ಎಂದಿಗೂ ಸಿಗಲಾರದು [ಶಬ್ದಶಃ–ನಿರಾಶನಾಗದಿರುವದರಿಂದ ಮಾತ್ರ, ಮಾನವನಿಗೆ ಶ್ರೇಯಸ್ಸುಗಳು ಸಿಗುವವು] ಆದ್ದರಿಂದ ಈಗ [ನಿರಾಶನಾಗದೇ]

गच्छामि यत्र मे नयनयो सुनयना तिरोभूता । (परिक्रम्य अवलोक्य) इम तावत्प्रिया-प्रवृत्तये सारङ्गमासीनमभ्यर्थये ।

अभिनवकुसुमस्तबकिततरुवरस्य परिसरे
मदकलकोकिलकूजितरवझङ्कारमनोहरे ।
नन्दनविपिने निजकरिणीविरहानलेन सतप्तो
विचरति गजाधिपतिरैरावतनामा ।। ५६ ।।

(गलितक । जानुभ्या स्थित्वा)

कृष्णशारच्छविर्योऽसौ दृश्यते काननश्रिया ।
वनशोभावलोकाय कटाक्ष इव पातित ।। ५७ ।।

(विलोक्य) कि नु खलु मामवधीरयन्निवान्यतोमुख सवृत्त ।

(दृष्ट्वा) अस्यान्तिकमायान्ती शिशुना स्तनपायिना मृगी रुद्धा ।
तामायमनन्यदृष्टिर्भुग्नीवो विलोकयति ।। ५८ ।।

(इति नर्तित्वा चर्चरी)

सुरसुन्दरी जघनभरालसा पीनोत्तुङ्गघनस्तनी
स्थिरयौवना तनुशरीरा हसगति ।

ಎಲ್ಲಿ ನನ್ನ ಪ್ರಿಯೆಯು ನನ್ನ ಕಣ್ಮರೆಯಾದಳೋ ಅದೇ ಸ್ಥಳಕ್ಕೆ ಹೋಗುವನು. (ಮುಂದ ಹೋಗಿ ನೋಡಿ) ಮೊದಲು ಇಲ್ಲಿ ಸುಖವಾಗಿ ಮಲಗಿದ ಈ ಕೃಷ್ಣಸಾರ ಮೃಗವನ್ನು ಕೇಳಿ ನನ್ನ ಪ್ರಿಯಳ ಸಮಾಚಾರವನ್ನು ತಿಳಿದುಕೊಳ್ಳುವೆನು.

ತನ್ನ ಪ್ರಿಯಳ ವಿಯೋಗದಿಂದ ಬಳಲಿಬೆಂಡಾದ ಐರಾವತವೆಂಬ ಈ ಶ್ರೇಷ್ಠವಾದ ಆನೆಯು, ಪರಿಸರದಲ್ಲಿ ಆದೇ ಅರಳಿದ ಪುಷ್ಪಗಳ ಗೊಂಚಲಗಳಿಂದ ಕಂಗೊಳಿಸುವ ಸುಂದರವಾದ ಗಿಡಗಳುಳ್ಳ, ಮೋಹದಿಂದ ಕಲಕಲವಾಗಿ ಮಧುರ ಶಬ್ದಮಾಡುವ ಕೋಗಿಲೆಗಳ ಇಂಚರದಿಂದ ಮನೋಹರವಾದ ಈ ನಂದನವನದಲ್ಲಿ ವಿಹರಿಸುತ್ತಿರುವದು.

(ಗಲತಿಕೆಯು. ಬಳಿಕ ಮೊಣಕಾಲೂರಿ) ॥ ೫೬ ॥

ವನದಶೋಭೆಯನ್ನು ನೋಡಲು ವನದೇವತೆಯು ಬೀರಿದ ಕಟಾಕ್ಷವೊ ಎಂಬಂತೆ ವಿವಿಧವಾದ ಬಣ್ಣಗಳುಳ್ಳ ಈ ಕೃಷ್ಣಸಾರ ಮೃಗವು ಕಂಗೊಳಿಸುವದು. ॥೫೭॥

(ನೋಡಿ) ಇದೇನು ! ನನ್ನನ್ನು ಅವಮಾನಗೊಳಿಸುವಂತೆ ಬೇರೆಕಡೆಗೆ ಮುಖವನ್ನು ಹೊರಳಿಸಿತಲ್ಲ ! (ನೋಡಿ)

ಇದರ ಕಡೆಗೇ ಬರುತ್ತಿರುವ ಹರಿಣಿಯನ್ನು ಅದರ ಮರಿಯು ಮೊಲೆ ಕುಡಿಯಲು ಅಲ್ಲಲ್ಲಿ ತಡೆಯುತ್ತಿರುವದು. ಈ ಕೃಷ್ಣಸಾರ ಮೃಗವು ತದೇಕ ದೃಷ್ಟಿಯಿಂದ ಅದನ್ನೇ ದಿಟ್ಟಿಸಿ ನೋಡುತ್ತಿರುವದು ॥ ೫೮ ॥

(ಎಂದು ಕುಣಿಯುವನು. ಚರ್ಚರಿಯು)

ನೀನು ಗಗನದಂತೆ ಭವ್ಯವಾದ ಈ ಅಡವಿಯಲ್ಲಿ ತಿರುಗಾಡುತ್ತಿರುವಾಗ, ಜಘನಗಳ ಭಾರದಿಂದ ಅಲಸಿತಳಾದ, ಪೀನವಾದ ಎತ್ತರವಾದ ಸ್ತನಗಳುಳ್ಳ ಶಾಶ್ವತವಾದ ಯೌವನ

गगनोज्ज्वलकानने मृगलोचना भ्रमता दृष्टा
त्वया तर्हि विरहसमुद्रान्तरादुत्तारय माम् ॥ ५९ ॥

[सुरसुन्दरि जहणभरालस पीणुत्तुङ्गघणत्थणी थिरजोव्वण तणुसरीरिहसगई ।
गअणुज्जलकाणणे मिअलोअणि भमन्ते दिट्ठी पइ तह विरहसमुद्दन्तरे उत्तारहि मइ ॥
(उपसृत्य अञ्जलिं बद्ध्वा) अहो यूथपते

अपिदृष्टवानसि मम प्रिया वने
कथयामि ते तदुपलक्षणं शृणु ।
पृथुलोचना सहचरी यथैव ते
सुभग तथैव खलु सापि वीक्षते ॥ ६० ॥

कथमनादृत्य मद्वचनं कलत्राभिमुखं स्थितः । उपपद्यते । परिभवास्पदं दशाविपर्ययः । यावदन्यमवकाशमवगाहिष्ये । (परिक्रम्य अवलोक्य च) हन्त दृष्टमुपलक्षणं तस्या मार्गस्य ।

रक्तकदम्बः सोऽयं प्रियया घर्मान्तशंसि यस्यैकम् ।
कुसुममसमग्रकेसरविषममपि कृतं शिखाभरणम् ॥ ६१ ॥

तत्किं शिलाभेदान्तरगतमेतदालोक्यते ।

प्रभालेपी नायं हरिहतमृगस्यामिषलवः
स्फुलिङ्गः स्यादग्नेर्गगनमभिवृष्टं पुनरिदम् ।

ವುಳ್ಳ, ತೆಳ್ಳಗಾದ ದೇಹವುಳ್ಳ, ಹಂಸದ ಗಮನದಂತೆ ಗಮನವುಳ್ಳ, ಹಾಗು ಜಿಗರೆಗಳ ಕಣ್ಣುಗಳಂತೆ ಸುಂದರವಾದ ಕಣ್ಣುಳ್ಳ ಆ ದಿವ್ಯಸ್ತ್ರೀಯನ್ನು, ನೋಡಿದ್ದರೆ, ನನ್ನನ್ನು ಈ ವಿರಹವೆಂಬ ಸಾಗರದಿಂದ ಪಾರುಮಾಡು. ॥ ೫೯ ॥

(ಸಮೀಪಕ್ಕೆ ಬಂದು ಕೈಜೋಡಿಸಿ) ಜಿಗರೆಗಳ ಹಿಂಡಿನ ನಾಯಕನೆ,

ಈ ಅಡವಿಯಲ್ಲಿ ನನ್ನ ಪ್ರಿಯೆಯನ್ನು ಕಂಡಿರುವಿಯಾ ? ಅವಳ ಲಕ್ಷಣಗಳನ್ನು [ಕುರುಹುಗಳನ್ನು] ಹೇಳುವೆನು. ಕೇಳು, ಅಗಲವಾದ ಕಣ್ಣುಗಳುಳ್ಳ ನಿನ್ನ ಸಹಚರಿಯಂತೆ ಅವಳೂ ಸುಂದರವಾಗಿ ನೋಡುವಳು ॥ ೬೦ ॥

ಇದೇನು ! ನನ್ನ ಮಾತಿನ ಕಡೆಗೆ ಗಮನಕೊಡದೆ ತನ್ನ ಪ್ರಿಯ ಮಡದಿಯ ಕಡೆಗೆ ಮೋರೆ ಮಾಡಿಕೊಂಡು ನಿಂತುಬಿಟ್ಟಿತಲ್ಲ! ಇದು ಯುಕ್ತವೆ. ಕೆಟ್ಟ ದೆಶೆಯು ಬಂದಿತೆಂದರೆ ಇವೆಲ್ಲ ಅವಮಾನಗಳನ್ನು ಸಹಿಸಬೇಕಾಗುವದು [ಶಬ್ದಶಃ ಕೆಟ್ಟ ಪರಿಸ್ಥಿತಿಯು ಎಲ್ಲ ಅವಮಾನಗಳಿಗೆ ಕಾರಣವಾದದ್ದು] ಈಗ ಬೇರೆ ಕಡೆಗೆ ಹೋಗುವೆನು (ಮುಂದೆ ಹೋಗಿ ನೋಡಿ) ಆಹ! ಅವಳ ಮಾರ್ಗದ ಗುರುತು ಸಿಕ್ಕಿತು

ಯಾವಗಿಡದ, ಇನ್ನೂ ಪುಂಕೇಸರವು ಪೂರ್ಣವೊಡೆಯದ್ದರಿಂದ ವಿಷಮವಾದ, ಬೇಸಿಗೆಯು ಮುಗಿಯಿತೆಂಬುದನ್ನು ಸೂಚಿಸುವ ಪುಷ್ಪವನ್ನು ನನ್ನ ಪ್ರಿಯಕಾಂತೆಯು ತನ್ನ ತಲೆಯಲ್ಲಿ ಮುಡಿದುಕೊಂಡಿದ್ದಳೋ ಆ ಕದಂಬಗಿಡವು ಇದು ॥ ೬೧ ॥

ಆ ಬಂಡೆಗಲ್ಲಿನ ಬಿರುಕಿನಲ್ಲಿ ಕಾಣುವದು ಏನಿದು ?

ಥಳಥಳ ಹೊಳೆಯುವ ಇದು, ಸಿಂಹವು ಕೊಂದ ಜಿಗರೆಯ ಮಾಂಸದ ತುಣುಕಲ್ಲ, ಇದು ಬೆಂಕಿಯ ಕಿಡಿಯಿರಬಹುದು. ಆದರೆ ಇದೀಗ ತಾನೆ ಮಳೆಯಾಗಿರುವದು. [ಅದ್ದ

(विभाव्य) अये रक्ताशोकस्तबकसमरागो मणिरय
यमुद्धर्तुं पूषा व्यवसित इवालम्बितकर ॥ ६२ ॥

हरति मे मनः। आदास्ये तावदेनम्।

प्रणयिनीबद्धाशङ्को बाष्पाकुलनिजनयन ।
गजपतिर्गहने दुःखितो भ्रमति क्षामितवदन ॥ ६३ ॥

[पणइणिबध्धासाइअओ बाहाउलणिअणअणओ। गअइव गहणे दूहिअओ भमइ खामिअवअणओ] (द्विपदिकया उपसृत्य ग्रहण नाटयति) अथ वा

मन्दारपुष्पैरधिवासितायां
यस्याः शिखायामयमर्पणीय ।
सैव प्रिया सम्प्रति दुर्लभा मे
किमेनमस्रोपहतं करोमि ॥ ६४ ॥ (इत्युत्सृजति)

(नेपथ्ये) वत्स गृह्यतां गृह्यताम्।

सगमनीयो मणिरिह शैलसुताचरणरागयोनिरयम्
आवहति धार्यमाणः सगममचिरात्प्रियजनेन ॥ ६५ ॥

ರಿಂದ ಕೆಂಡದಕಿಡಿಯು ಈ ರೀತಿ ಮಳೆನೀರಿನಿಂದ ಆರದೇ ಇರುವದು ಅಶಕ್ಯವಾದದ್ದು]
(ಆಲೋಚಿಸಿ) ರಕ್ತಾಶೋಕಪುಷ್ಪಗಳ ಬಣ್ಣದಂತೆ ಬಣ್ಣವುಳ್ಳ ಕೆಂಪು ರತ್ನವಿದು. ಇದನ್ನು ತೆಗೆದುಕೊಳ್ಳಲು ಸೂರ್ಯನು ತನ್ನ ಕರಗಳನ್ನು ಮುಂದೆ ಚಾಚಿದಂತೆ ತೋರುವದು ॥೬೨॥

ಈ ಮಣಿಯು ನನ್ನ ಮನಸ್ಸನ್ನು ಆಕರ್ಷಿಸುತ್ತಿರುವದು ಇದನ್ನು ತೆಗೆದು ಕೊಳ್ಳುವೆನು.

ತನ್ನ ಇನಿಯಳಲ್ಲಿ ಆಶೆಯಿಟ್ಟು, ಕಂಬನಿಯಿಂದ ವ್ಯಾಕುಲಗೊಂಡ ಕಣ್ಣುಗಳುಳ್ಳ ಬಾಡಿದ ಮುಖವುಳ್ಳ, ಈ ಗಜಪತಿಯು ದುಃಖದಿಂದ ಈ ದಟ್ಟಡವಿಯಲ್ಲಿ ತಿರುಗಾಡುತ್ತಿರುವದು. ॥೬೩॥

(ದ್ವಿಪದಿಕೆಯೊಡನೆ ಸಮೀಪಕ್ಕೆ ಹೋಗಿ ಅದನ್ನು ತೆಗೆದುಕೊಳ್ಳುವಂತೆ ನಟಿಸುವನು.) ಅಥವಾ

ಮಂದಾರ ಪುಷ್ಪಗಳ ಸೌರಭದಿಂದ ಸುವಾಸಿತವಾದ, ಯಾರ, ಮುಡಿಯಲ್ಲಿ ಇಡಲು ಈ ರತ್ನವು ಯೋಗ್ಯವಾಗಿರುತ್ತದೆಯೋ, ಆ ಪ್ರಿಯಳೇ ಈಗ ನನಗೆ ದುರ್ಲಭಳಾಗಿರುವಳೆಂದಮೇಲೆ ಇದನ್ನು ಸುಮ್ಮನೆ ನನ್ನ ಕಣ್ಣೀರಿನಿಂದ ಮಲಿನಗೊಳಿಸುವದೇತಕ್ಕೆ ? ॥೬೪॥
(ಎಂದು ಅದನ್ನು ಬಿಟ್ಟುಬಿಡುವನು).

(ತೆರೆಯಲ್ಲಿ) ವತ್ಸಾ, ಅದನ್ನು ತೆಗೆದುಕೊ, ತೆಗೆದುಕೊ.

ಶೈಲಸುತೆಯಾದ ಪಾರ್ವತಿಯ ಚರಣರಾಗದಿಂದ ನಿರ್ಮಿಸಲ್ಪಟ್ಟ ಸಂಗಮನೀಯವೆಂಬ ರತ್ನವಿದು. ಇದನ್ನು ಧರಿಸಿದವರಿಗೆ ಬೇಗನೇ ಪ್ರಿಯಜನರ ಸಂಗಮವಾಗುವದು. ॥೬೫॥

राजा — (कर्णं दत्त्वा) को नु खलु मामेवमनुशास्ति । (दिशोऽवलोक्य) अये अनुकम्पते मां कश्चिन्मृगचारी मुनिर्भगवान् । भगवन् अनुगृहीतोऽस्म्यहममुनोपदेशेन । (मणिमादाय) हहो सगमनीय

तया वियुक्तस्य विलग्नमध्यया
भविष्यसि त्वं यदि संगमाय मे ।
ततः करिष्यामि भवन्तमात्मनः
शिखामणिं बालमिवेन्दुमीश्वरः ॥ ६६ ॥

(परिक्रम्यावलोक्य च) अये किं नु कुसुमरहितामपि लतामिमां पश्यतो मे रतिरुपलब्धा । अथवा स्थाने मनोरमा ममेयम् । इयं हि

तन्वी मेघजलार्द्रपल्लवतया धौताधरेवाश्रुभिः
शून्येवाभरणैः स्वकालविरहाद्विश्रान्तपुष्पोद्गमा ।
चिन्तामौनमिवास्थिता मधुलिहां शब्दैर्विना लक्ष्यते
चण्डी मामवधूय पादपतितं जातानुतापेव सा ॥ ६७ ॥

यावदस्याः प्रियानुकारिण्या लतायाः परिष्वङ्गप्रणयी भवामि ।

ರಾಜಾ — (ಕಿವಿಗೊಟ್ಟು) ನನಗ ಹೀಗೆ ಉಪದೇಶಮಾಡುತ್ತಿರುವವರು ಯಾರು ? (ಎಲ್ಲ ಕಡೆಗೂ ನೋಡಿ) ಅಹ ! ವನಜೀವಿಯಾದ ಪೂಜ್ಯನಾದ ಓರ್ವ ಮುನಿಯು ನನ್ನ ಮೇಲೆ ದಯತೋರುತ್ತಿರುವನು ಪೂಜ್ಯನೆ, ನಿನ್ನೀ ಉಪದೇಶದಿಂದ ಅನುಗ್ರಹೀತನಾದೆನು. (ಮಣಿಯನ್ನು ತೆಗೆದುಕೊಂಡು) ಎಲೈ ಸಂಗಮನೀಯ ರತ್ನವೆ,

ನೀನು, ಅವಳನ್ನಗಲಿದ ನನಗೆ ಸಣ್ಣ ಟೊಂಕವುಳ್ಳ ಅವಳ ಸಂಗಮವನ್ನೊದಗಿಸಿ ಕೊಟ್ಟರೆ, ಶಿವನು ಬಾಲಚಂದ್ರನನ್ನು ತನ್ನ ಜಡೆಯಲ್ಲಿ ಧರಿಸಿದಂತೆ ನಾನೂ ನಿನ್ನನ್ನು ಯಾವಾಗಲೂ ನನ್ನ ತಲೆಯಮೇಲೆ ಧರಿಸುವೆನು. ॥೬೬॥

(ಸ್ವಲ್ಪ ನಡೆದು ನೋಡಿ) ಎಲಾ ! ಇದೇನು ! ಹೂವಿಲ್ಲದಿದ್ದರೂ ಈ ಬಳ್ಳಿಯನ್ನು ನೋಡುವ ನನಗೆ ಇದರ ವಿಷಯವಾಗಿ ಪ್ರೀತಿಯುಂಟಾಯಿತು ! ಅಥವಾ ನಿಜವಾಗಿಯೂ ನನ್ನ ಪ್ರಿಯತಮೆಯೆ ಇದು,

ಕೋಮಲವಾದ ಈ ಲತೆಯ ಚಿಗುರೆಲೆಗಳು ಮಳೆನೀರಿನಿಂದ ತೊಯ್ದುದ್ದರಿಂದ ಇದು ಕಂಬನಿಗಳಿಂದ ತೊಯ್ದ ಚೆಂದುಟಿಯುಳ್ಳ ನನ್ನ ಪ್ರಿಯಳಂತೆ ತೋರುವದು, ಯೋಗ್ಯ ಋತುವು ಗತಿಸಿದ್ದರಿಂದ ಹೂಬಿಡದ ಈ ಬಳ್ಳಿಯು, ಆಭರಣಗಳನ್ನು ಹಾಕಿಕೊಳ್ಳದ ನಿನ್ನ ಪ್ರಿಯಳಂತೆ ಕಾಣುವದು. ಈಗ ಭ್ರಮರಗಳ ಗುಂಯ್ಯಎಂಬ ಶಬ್ದಗಳಿಲ್ಲದ್ದರಿಂದ ಈ ಬಳ್ಳಿಯು ಚಿಂತೆಯಿಂದ ಮೌನದಿಂದಿರುವಳೋ ಎಂಬಂತೆ ತೋರುವದು. ಹೇಗೆ ಈ ಲತೆಯು, ಪಾದಗಳಿಗೆರಗಿ ಬೇಡಿಕೊಳ್ಳುವ ನನ್ನ ಅನುನಯವನ್ನೂ ಮನ್ನಿಸಿದ ಆ ಚಂಡಿಯು ಈಗ ಪಶ್ಚಾತ್ತಾಪ ಪಡುತ್ತಿರುವಳೊ ಎಂಬಂತೆ, ತೋರುವದು ॥೬೭॥

ಈಗ, ನನ್ನ ಪ್ರಾಣಕಾಂತೆಯನ್ನು ಹೋಲುವ ಈ ಲತೆಯನ್ನು ಆಲಂಗಿಸ ಬಯಸುವೆನು.

लते प्रेक्षस्व विना हृदयेन भ्रमामि यदि विधियोगेन पुनस्तां प्राप्नोमि ।
तदरण्येन विना करोमि निर्भ्रान्ति पुनर्न प्रवेशयामि तां कृतान्ताम् ॥६८॥

[लए पेक्ख विणु हिअए भवामि जइ विहिजोए पुणि तहि पाविमि । ता रण्णे विणुकम्म णिब्भन्ती पुण णइ मेल्लइ दाह कलन्ती ॥]

(इति चर्चरिकयोपसृत्य लतामालिङ्गति । ततः प्रविशति तत्स्थान एवोर्वशी)

राजा — (निमीलिताक्ष एव स्पर्शं रूपयित्वा) अये उर्वशीगात्रसंपर्कादिव निर्वृतं मे शरीरम् । तथापि न पुनरस्ति विश्वासः । कुतः ।

समर्थये यत्प्रथमं प्रियां प्रति
क्षणेन तन्मे परिवर्ततेऽन्यथा ।
अतो विनिद्रे सहसा विलोचने
करोमि न स्पर्शविभावितप्रियः ॥ ६९ ॥

(शनैश्चक्षुरुन्मील्य) कथं सत्यमेव प्रियतमा । (इति मूर्छितः पतति)

उर्वशी — समाश्वसितु समाश्वसितु महाराजः । [समस्ससदु समस्ससदु महाराओ ।]

राजा — (संज्ञां लब्ध्वा) प्रिये अद्य जीवितम् ।

ಎಲೆ ಲತೆಯೆ, ನೋಡಿಲ್ಲಿ. ನಾನು ಶೂನ್ಯ ಮನಸ್ಕನಾಗಿ ತಿರುಗಾಡುತ್ತಿರುವೆ ಸರಿ. ಒಂದುವೇಳೆ ದೈವಯೋಗದಿಂದ ನಾನು ಅವಳನ್ನು ಮತ್ತೆ ಪಡೆದರೆ, ಅವಳನ್ನು ನಿಃಸಂದೇಹವಾಗಿ ಈ ಅಡವಿಯಿಂದ ದೂರ ಕರೆದೊಯ್ಯುವೆನು ಮತ್ತು ಆ ಕ್ರೂರಳನ್ನು ಪುನಃ ಎಂದೂ ಇಲ್ಲಿಗೆ ಕರೆತರುವದಿಲ್ಲ ॥೬೮॥

(ಎಂದು ಚರ್ಚರಿಕೆಯೊಂದಿಗೆ ಮುಂದೆಹೋಗಿ ಲತೆಯನ್ನಾಲಂಗಿಸುವನು) ಆಗ ಕೂಡಲೇ ಅದೇ ಸ್ಥಳದಲ್ಲಿ ಉರ್ವಶಿಯು ಕಾಣಿಸಿಕೊಳ್ಳುವಳು)

ರಾಜಾ — (ಕಣ್ಣುಗಳನ್ನು ಮುಚ್ಚಿಕೊಂಡೇ ಸ್ಪರ್ಶಸುಖವನ್ನು ಅನುಭವಿಸುವಂತೆ ನಟಿಸಿ) ಅಹ ! ನನ್ನ ಶರೀರಕ್ಕೂ ಉರ್ವಶಿಯ ಅಂಗಸ್ಪರ್ಶವನ್ನು ಹೊಂದಿದಂತೆ ಸುಖವಾಗುತ್ತಿರುವದು ಆದರೂ ನನಗೀವಿಷಯದಲ್ಲಿ ನಂಬಿಕೆಯಿಲ್ಲ ಏಕೆಂದರೆ,

ನಾನು ಯಾವಯಾವುದನ್ನು ಮೊದಲು ನನ್ನ ಪ್ರಿಯಳೆಂದು ಭಾವಿಸುವೆನೋ ಅದೆಲ್ಲವೂ ತತ್‌ಕ್ಷಣ ಬೇರೊಂದಾಗುವದು ಕಾರಣ, ಈಗ ಸ್ಪರ್ಶದಿಂದ ನನ್ನ ಪ್ರಿಯಳನ್ನು ಕಂಡುಹಿಡಿದ ನಾನು ನನ್ನ ಕಣ್ಣುಗಳನ್ನೂ ಒಮ್ಮೆಲೆ ತೆರೆಯುವದಿಲ್ಲ. ॥೬೯॥

(ಸಾವಕಾಶವಾಗಿ ಕಣ್ಣುಗಳನ್ನು ತೆರೆದು) ಇದೇನು ! ಇವಳು ಸತ್ಯವಾಗಿಯೂ ನನ್ನ ಪ್ರಿಯತಮೆಯು ! (ಎಂದು ಮೂರ್ಛೆಹೊಂದಿ ಬೀಳುವನು).

ಉರ್ವಶಿ — ಮಹಾರಾಜನೆ, ಧೈರ್ಯತಾಳು, ಧೈರ್ಯತಾಳು

ರಾಜಾ — (ಎಚ್ಚತ್ತು) ಪ್ರಿಯೆ, ಇಂದು ಮಾತ್ರ ನಾನು ನಿಜವಾಗಿಯೂ ಜೀವಂತನಾಗಿರುವೆನು.

त्वद्वियोगोद्भवे तन्वि मया तमसि मज्जता ।
दिष्ट्या प्रत्युपलब्धासि चेतनेव गतासुना गतासुना ॥ ७० ॥

उर्वशी— मर्षयतु मर्षयतु महाराजो यन्मया कोपवश गतयैतदवस्थान्तर प्रापितो महाराज । [मरिसदु मरिसदु महाराओ ज मए कोववस गदाए एद अवत्थन्तर पाविदो महाराओ ।]

राजा— कल्याणि न तावदह प्रसादयितव्य । त्वद्दर्शनादेव प्रसन्न सबाह्यान्त करणो ममान्तरात्मा । कथय कथमियन्त कालमवस्थिता मया विना भवती । (अनन्तरे चर्चरी)

मयूरः परभृद्धसो रथाङ्गोऽलिर्गज पर्वत सरित्कुरङ्ग. ।
तव कारणेनारण्ये भ्रमता बहु पृष्टो मया रुदता ॥ ७१ ॥

[मोरा परहुअ हस रहङ्ग अलि गअ पव्वअ सरिअ कुरङ्गम । तुज्झह कारण रण्ण भमन्ते बहु बहु पुच्छिअ मइ रोअन्ते ॥]

उर्वशी— अन्त करणप्रत्यक्षीकृतवृत्तान्तो महाराज । [अन्तक्करणपच्चक्खी-किदवुत्तन्तो महाराओ ।]

राजा— प्रिये अन्त करणमिति न खल्ववगच्छामि ।

ಎಲೈ ಕೋಮಲಾಂಗಿಯೆ ಪ್ರಾಣಬಿಟ್ಟವನು ಮತ್ತೆ ಚೇತನವನ್ನು ಹೊಂದುವಂತೆ ನಿನ್ನ ವಿಯೋಗದಿಂದುಂಟಾದ ಮೋಹಾಂಧಕಾರದಲ್ಲಿ ಮುಳುಗಿದ ನಾನು ಸುದೈವದಿಂದ ಇಂದು ನಿನ್ನನ್ನು ಮರಳಿ ಪಡೆದೆನು ॥೭೦॥

ಉರ್ವಶಿ— ಮಹಾರಾಜನೆ, ನಾನು ಕೋಪವಶಳಾಗಿ ನಿನ್ನನ್ನು ಈ ದೆಶೆಗೆ ಗುರಿಮಾಡಿದೆನು. ನನ್ನನ್ನೂ ಕ್ಷಮಿಸಬೇಕು

ರಾಜಾ—ಎಲೈ ಕಲ್ಯಾಣಿಯೆ, ಹೀಗೆ ನನ್ನನ್ನೇನೂ ಪ್ರಸನ್ನಗೊಳಿಸುವ ಕಾರಣವಿಲ್ಲ. ನಿನ್ನ ದರ್ಶನದಿಂದಲೇ ಅಂತರ್ಬಾಹೇಂದ್ರಿಯಗಳು ಸಹಿತ ನನ್ನ ಅಂತರಾತ್ಮವು ಪ್ರಸನ್ನ ವಾಗಿರುವದು. ನೀನು ಇಲ್ಲಿಯ ವರೆಗೆ ನನ್ನನ್ನು ಬಿಟ್ಟು ಹೇಗೆ ಇದ್ದಿ, ಹೇಳು. (ಬಳಿಕ ಚರ್ಚರಿಯು)

ನಿನ್ನ ಸಲುವಾಗಿ ಈ ಕಾನನದಲ್ಲಿ ಗೋಳಿಡುತ್ತ ತಿರುಗಾಡುತ್ತ ನಾನು ನವಿಲು ಕೋಗಿಲೆ, ಚಕ್ರವಾಕ, ಭ್ರಮರ, ಆನೆ, ಪರ್ವತ, ನದಿ, ಚಿಗರೆ, ಹೀಗೆ ಎಲ್ಲ ಚರಾಚರ ವಸ್ತುಗಳನ್ನು [ನಿನ್ನ ಸಮಾಚಾರವನ್ನು' ತಿಳಿದುಕೊಳ್ಳುವದಕ್ಕಾಗಿ] ಬಹುವಿಧವಾಗಿ ಪುನಃ ಪುನಃ ಬಿನ್ನವಿಸಿಕೊಂಡೆನು ॥ ೭೧ ॥

ಉರ್ವಶಿ–ಮಹಾರಾಜನೆ, ನಾನು ನನ್ನ ಅಂತರಿಂದ್ರಿಯದಿಂದ [ದಿವ್ಯವಾದ ಅಂತರ್ ಜ್ಞಾನ] ನಿನ್ನ ಎಲ್ಲ ವೃತ್ತಾಂತವನ್ನು ಅರಿತಿರುವೆನು

ರಾಜಾ – ಪ್ರಿಯೆ ನನಗೆ ' ಅಂತರಿಂದ್ರಿಯ ' ಎಂಬ ನಿನ್ನ ಮಾತಿನ ಅರ್ಥ ವಾಗಲಿಲ್ಲ

उर्वशी— शृणोतु महाराज । भगवता कुमारेण शाश्वत कुमारव्रत गृहीत्वा अकलुषो नाम गन्धमादनकच्छोऽध्यासित कृतश्चैष विधि ।| सुणादु महाराओ । भअवदा कुमारेण साद कुमारवद गेण्हिअ अकलुसो णाम गन्धमादणकच्छो अज्झासिदो किदो अ एस विही]

राजा— क इव ।

उर्वशी– या एत प्रदेश स्त्री प्रविशति सा लताभावेन परिणस्यति । गौरीचरणसभव मणि विना ततो न मोक्ष्यत इति । साह गुरुशापसमूढहृदया देवतासमय विस्मृत्य अगृहीतानुनया कुमारवन प्रविष्टा । प्रवेशानन्तरमेव वासन्ती लता सवृत्ता । [जा इम पदेस इत्थिआ पविसदि सा लदाभावेण परिणमिस्सदि । गोरीचरणसभव मणि विणा तदो ण मुच्चिस्सदित्ति साह गुरुसावसमूढहिअआ देवदासमअ विसुमरिअ अगाहिदाणुणआ कुमारवण पविट्ठा । पवेसाणन्तर एव्व वासन्ती लदा सवुत्ता ।]

राजा— सर्वमुपपन्नम् ।

> **रतिखेदसुप्तमपि मा शयने या मन्यसे प्रवासगतम् ।**
> **सा त्व प्रिये सहेथा कथ मदीयं चिरवियोगम् ॥ ७२ ॥**

ಉರ್ವಶಿ—ಮಹಾರಾಜನು ಕೇಳಬೇಕು ಭಗವಾನ್ ಷಣ್ಮುಖನು ಶಾಶ್ವತವಾದ ಬ್ರಹ್ಮಚರ್ಯವ್ರತವನ್ನು ಸ್ವೀಕರಿಸಿ ಈ ಗಂಧಮಾದನ ಪರ್ವತದ 'ಅಕಲುಷಿತ'ವೆಂಬ ನದಿಯ ದಂಡೆಯ ಪ್ರದೇಶದಲ್ಲಿ ವಾಸಮಾಡಿಕೊಂಡು ಈ ನಿಯಮವನ್ನು ಮಾಡಿದನು.

ರಾಜಾ— ಅದಾವುದು ?

ಉರ್ವಶಿ—ಯಾವ ಸ್ತ್ರೀಯು ಈ ಪ್ರದೇಶವನ್ನು ಪ್ರವೇಶಿಸುವಳೊ, ಅವಳು, ಲತೆಯ ರೂಪವನ್ನು ತಾಳುವಳು. ಗೌರೀಚರಣರಾಗದಿಂದ ಹುಟ್ಟಿದ [ಸಂಗಮನೀಯ] ರತ್ನದ ಹೊರತು ಅದರಿಂದ [ಆ ರೂಪದಿಂದ] ಮುಕ್ತಳಾಗಲಾರಳು. ' ಎಂದು ಗುರು ಶಾಪದಿಂದ ಮೂಢಳಾದ ನಾನು ಆ ದೇವತೆಯ ನಿಯಮವನ್ನು ಮರತು ನಿನ್ನ ಅನುನಯ ವನ್ನು ಮನ್ನಿಸಿದೆ ಈ ಕುಮಾರವನವನ್ನು ಪ್ರವೇಶಿಸಿದನು. ಕೂಡಲೆ ನಾನು ವಾಸಂತೀ ಲತೆ ಯಾಗಿ ಬಿಟ್ಟೆನು.

ರಾಜಾ— ಈಗ ಎಲ್ಲವೂ ವಿಶದವಾಯಿತು.

ಪ್ರಿಯೆ, ನಾನು ರತಿಕ್ರೀಡೆಯಿಂದ ದಣಿದು ಹಾಸಿಗೆಯ ಮೇಲೆ ಮಲಗಿದ್ದರೂ ಪ್ರವಾಸಕ್ಕೆ ಹೋದೆನೆಂದು ಭಾವಿಸುತ್ತಿದ್ದ ನೀನು ಬಹುಕಾಲ ನನ್ನ ವಿಯೋಗವನ್ನು ಹೀಗೆ ತಾನೆ ಸಹಿಸಲು ಸಾಧ್ಯವಿತ್ತು ? ॥ ೭೨ ॥

इदं तद्यथाकथितं त्वत्संगमनिमित्तं मुनेरुपलभ्य मणिप्रभावादासादिता त्वमस्माभिः (मणिं दर्शयति)

उर्वशी— अहो संगमनीयः । अत खलु महाराजेनालिङ्गितमात्रैव प्रकृतिस्थास्मि संवृत्ता । [अम्मो संगमणीओ । वदो खु महाराएण आलिङ्गिदमेत्तव्व पकिदित्थह्मि संवुत्ता ।]

राजा— (ललाटे मणिं संनिवेश्य)

स्फुरता विच्छुरितमिदं रागेण मणेर्ललाटनिहतस्य ।
श्रियमुद्वहति मुखं ते बालातपरक्तकमलस्य ।। ७३ ।।

उर्वशी— प्रियवद महान्खलु काल आवयोः प्रतिष्ठानान्निर्गतयोः । असूयन्ति मां प्रकृतयः । तदेहि निवर्तावहे। [पिअवद महान्तो खु कालो अह्माणं पइट्ठाणादो णिग्गदाणम । असूअन्ति मं पकिदीओ । ता एहि णिवुत्तह्म ।]

राजा— यदाह भवती । (इति उत्तिष्ठतः)

उर्वशी— कथं महाराजो गन्तुमिच्छति । [कहं महाराओ गन्तुं इच्छदि ।]

ನೀನು ವಿವರಿಸಿದ ರತ್ನವು ಇದೇ. ಇದು ನಿನ್ನ ಸಂಗಮಕ್ಕೆ ಕಾರಣವಾದದ್ದೆಂದು ಓರ್ವ ಮುನಿಯಿಂದ ತಿಳಿದು ಇದನ್ನು ತೆಗೆದುಕೊಂಡೆನು. ಇದರ ಮಹಿಮೆಯಿಂದಲೆ ನಾನಿಂದು ನಿನ್ನನ್ನು ಪಡೆದೆನು. (ಮಣಿಯನ್ನು ತೋರಿಸುವನು.)

ಉರ್ವಶಿ—ಓಹೊ! ಸಂಗಮನೀಯಮಣಿಯು ! ಆದ್ದರಿಂದಲೇ, ಮಹಾರಾಜನು ಆಲಂಗಿಸಿದ ಕೂಡಲೆ ನಾನು ನನ್ನ ನಿಜರೂಪವನ್ನು ತಾಳಿದೆನು.

ರಾಜಾ— (ರತ್ನವನ್ನು ಅವಳ ಹಣೆಯ ಮೇಲಿಟ್ಟು)

ಹಣೆಯಮೇಲಿರಿಸಿದ ಥಳಥಳಿಸುವ ಈ ರತ್ನದ ಕೆಂಪು ಪ್ರಕಾಶದಿಂದ ಆವರಿಸಿದ ನಿನ್ನ ಮೊಗವು, (ಬಾಲಸೂರ್ಯನ) ಎಳೆಬಿಸಿಲಿನಿಂದ ಕಮಲದಂತೆ ಶೋಭಿಸುವದು. ॥ ೭೩ ॥

ಉರ್ವಶಿ—ಎಲೈ ಸವಿಮಾತನಾಡುವವನೆ, ನಾವು (ರಾಜಧಾನಿಯಾದ) ಪ್ರತಿಷ್ಠಾನವನ್ನು ಬಿಟ್ಟು ಬಹಳ ದಿನಗಳಾದವು. ಪ್ರಜರು ನನ್ನನ್ನು ಆಕ್ಷೇಪಿಸುತ್ತಿರಬಹುದು. ಆದ್ದರಿಂದ ಬಾ ಮರಳಿ ಹೋಗೋಣ.

ರಾಜಾ—ನೀನು ಅಂದಂತೆ ಆಗಲಿ. (ಎಂದು ಏಳುವರು)

ಉರ್ವಶಿ—ಮಹಾರಾಜನೆ, ಯಾವ ರೀತಿಯಾಗಿ ಹೋಗ ಬಯಸುವಿ ?

राजा— अचिरप्रभाविलसितैः पताकिना
सुरकार्मुकाभिनवचित्रशोभिना ।
गमितेन खेलगमने विमानता
नय मा नवेन वसति पयोमुचा ॥ ७३ ॥
प्राप्तसहचरीसगम पुलकप्रसाधिताङ्गकः ।
स्वेच्छाप्राप्तविमानो विहरति हंसयुवा ॥ ७५ ॥

[पविअसहृ अरिसगमओ पुलअपसाहिअअड्ग अओ । सेछछापत्तकिमाणओ विहरइ हसजुआणओ ॥ ७५ ॥]

(इति खण्डधारया निष्कान्तौ)

इति चतुर्थोऽङ्कः ।

ರಾಜಾ—ಎಲೈ ವಿಲಾಸಗಮನೆಯೆ, ಹೊಳೆಯುವ ಕೋಲ್ಮಿಂಚುಗಳೆಂಬ ಪತಾಕೆಗಳುಳ್ಳ, ಮಳೆಬಿಲ್ಲೆಂಬ ಚಿತ್ರಗಳಿಂದ ಕಂಗೊಳಿಸುವ ನವಮೋಡವೆಂಬ ವಿಮಾನದಿಂದ ನನ್ನನ್ನು ನನ್ನ ಅರಮನೆಗೆ ಕರೆದುಕೊಂಡು ಹೋಗು ॥ ೭೩ ॥

ತನ್ನ ಪ್ರಿಯೆಯು ಸಂಗಮವನ್ನು ಪಡೆದ ರೋಮಾಂಚಗಳಿಂದ ಅಂಗಾಂಗಗಳೆಲ್ಲ ಅಲಂಕೃತವಾದ ಈ ತರುಣಹಂಸವು ತನ್ನ ಮನಸ್ಸಿಗೆ ತಿಳಿದಂತೆ ಅಡ್ಡಾಡುತ್ತ [ಅಥವಾ ತನ್ನ ಇಚ್ಛೆಯಂತೆ ವಿಮಾನವನ್ನು ಪಡೆದು] ವಿಹರಿಸುತ್ತಿರುವದು ॥ ೭೫ ॥

(ಎಂದು ಖಂಡಧಾರೆಯಿಂದ ತೆರಳುವರು.)

[ತೆರೆ]

ನಾಲ್ಕನೆಯ ಅಂಕು ಮುಗಿದುದು.

पञ्चमोऽङ्कः ।

(ततः प्रविशति हृष्टो विदूषक)

विदूषक – दिष्टया चिरस्य कालस्योर्वशीसहायो नन्दनवनप्रमुखेषु देवतारण्येषु विहृत्य प्रतिनिवृत्त' प्रियवयस्य । इदानी स्वकार्यानुशासनेन प्रकृतिमण्डलमनुरञ्जयन् राज्य करोति । अनतानत्व वर्जयित्वा न किमप्यस्य हीनम् । अद्य तिथिविशेष इति भगवत्योर्गङ्गायमुनयो सगमे देव्या सह कृताभिषेक साप्रतमुपकार्या प्रविष्ट । तद्यावत्तत्रभतोऽलक्रियमाणस्यानुलेपनमाल्ये अग्रभागी भवामि । [दिट्ठिआ चिरस्स कालस्स उव्वसीसहाओ णन्दणवणप्पमुहेसु देवदारण्णेसु विहरिअ पडिणिवुत्तो पिअवअस्सो । दाणि सकज्जाणुसासणेण पइदिमण्डल अणुरज्जअन्तो रज्ज करेदि । असताणत्तण वज्जिअण किवि से हीण । अज्ज तिहिविसेसोत्ति भअवदीण गङ्गाजमुणाण सगमे देवीए सह किदाहिसेओ सपद उवआरिअ पविट्ठो । ता जाव तत्तभवदो अलकरीअमाणस्स अणुलेवणमल्ले अग्गभागी होमि ।] (इति परिक्रामति)

हा धिक हा धिक् । दुकूलोत्तरच्छदे तालवृन्ताधारे निक्षिप्य नीयमानो मया मणिरामिषशङ्किना गृध्रेणाक्षिप्त । [हृध्दी हृध्दी । दुउत्तरच्छदे तालवेण्टाधारे णिक्खिविअ णीअमाणो मए मणी आमिससङ्किणा गिध्धेण आक्खित्तो ।]

ಅಂಕ : ೫.

(ಬಳಿಕ ಹರುಷಗೊಂಡ ವಿದೂಷಕನು ಪ್ರವೇಶಿಸುವನು)

ವಿದೂಷಕ: – ನಮ್ಮ ಪ್ರಿಯಗೆಳೆಯನು ಉರ್ವಶೀಸಹಿತನಾಗಿ ನಂದನವನ ಮೊದಲಾದ ದೇವತೆಗಳ ವನಗಳಲ್ಲಿ ಬಹುಕಾಲ ವಿಹಾರಮಾಡಿ ಈಗ ಮರಳಿ [ರಾಜಧಾನಿಗೆ] ಬಂದದ್ದು ಸಂತೋಷದ ಸಂಗತಿ. ಈಗ ಅವನು ರಾಜಕಾರ್ಯಗಳನ್ನೆಲ್ಲ ನಿರ್ವಹಿಸುತ್ತ ಎಲ್ಲ ಪ್ರಜೆಗಳನ್ನು ಸಂತೋಷಗೊಳಿಸುತ್ತ [ಅಥವಾ, ಮಂತ್ರಿಮಂಡಲವನ್ನೆಲ್ಲ] ರಾಜ್ಯವಾಳುತ್ತಿರುವನು. ಅವನಿಗೆ ಮಕ್ಕಳಿಲ್ಲದಿರುವದೊಂದೇ ಕೊರತೆಯು ಉಳಿದಾವ ಕೊರತೆಯೂ ಇಲ್ಲ. ಇಂದು ಪುಣ್ಯಕಾಲವೆಂದು ರಾಣಿಯೊಡನೆ ಗಂಗಾಯಮುನಾ ನದಿಗಳ ಸಂಗಮದಲ್ಲಿ ಸ್ನಾನಮಾಡಿ ಅಲಂಕಾರಮಾಡಿಕೊಳ್ಳುವದಕ್ಕೋಸ್ಕರ ಈಗ ಅಲಂಕಾರ ಮಂಟಪಕ್ಕೆ [उपकार्या]ವನ್ನು ಪ್ರವೇಶಿಸಿರುವನು. ಆದ್ದರಿಂದ ನಾನು ಈಗಲೇ ಅಲ್ಲಿಗೆ ಹೋಗಿ ಗಂಧಪುಷ್ಪಗಳಲ್ಲಿ ಅಗ್ರಭಾಗಿಯಾಗುವೆನು. (ಎಂದು ಸ್ವಲ್ಪ ಹೆಜ್ಜೆ ನಡೆಯುವನು)

(ತೆರೆಯಲ್ಲಿ) ಅಯ್ಯೊ ! ಅನಾಹುತವು, ಅನಾಹುತವು ! ಉರ್ವಶಿಯ ಆ ಚೂಡಾರತ್ನವನ್ನು ನಾನು ರೇಶಿಮೆ ಬಟ್ಟೆಯ ಹೊದಿಕೆಯುಳ್ಳ ತಾಳೆಯ ಎಲೆಯಲ್ಲಿಟ್ಟುಕೊಂಡು ತರುತ್ತಿರಲು ಒಂದು ಹದ್ದು ಮಾಂಸದ ಕರಣೆಯೆಂಬ ಭ್ರಾಂತಿಯಿಂದ ಅದನ್ನು ಎತ್ತಿಕೊಂಡು ಹೋಯಿತು.

विदूषक - (कर्ण दत्वा)अत्याहितम् । परमबहुमत खलु स वयस्यस्य सगमनीयो नाम चूडामणि । अत खल्वसमाप्तनेपथ्यस्तत्रभवानासनादुत्थाय इत एवागच्छति । यावदेनमुपसर्पामि । [अच्चाहिद । परमबहुमदो क्खु सो वअसस्स सगसणीओ णाम चूडामणी । अदो खु असमत्तणेवच्छो तत्तभव आसणादो उट्ठिअ इदो एव्व आअच्छदि । जा ण उवसप्पामि ।]

(ततः प्रविशति सावेगपरिजनो राजा)

राज – **आत्मनो वधमाहर्ता क्वासौ विहगतस्कर ।**

येन तत्प्रथम स्तेय गोप्तुरेव गृहे कृतम् ॥ १ ॥

किरात — एष एष खल मुखकोटिलग्नहेमसूत्रेण मणिना आलिखन्निवाकाश परिभ्रमति । [एसो एसो खु मुहकोडिलग्गहेमसुत्तेण मणिणा आलिहन्तो विअ आआस पडिब्भमदि ।]

राजा – पश्याम्येनम् ।

असौ मुखालम्बितहेमसूत्र बिभ्रन्मणिं मण्डलचारशीघ्रः ।

अलातचक्रप्रतिम विहगस्तद्रागरेखावलयं तनोति ॥ २ ॥

कि नु खलु कर्तव्यम् ।

ವಿದೂಷಕ — (ಕಿವಿಗೊಟ್ಟು) ಅಯ್ಯೊ ! ಘಾತವಾಯಿತು ! ಅದು ನನ್ನ ಪ್ರಿಯ ಗೆಳೆಯನಿಗೆ ಬಹಳೇ ಪ್ರಿಯವಾದ ಸಂಗಮನೀಯವೆಂಬ ಚೂಡಾಮಣಿಯು ! ಆದ್ದರಿಂದಲೇ ನನ್ನ ಗೆಳೆಯನು ವಸ್ತ್ರಾಲಂಕಾರಗಳನ್ನು ಧರಿಸುವದನ್ನು ಬಿಟ್ಟು ಆಸನದಿಂದೆದ್ದು ಇತ್ತಕಡೆಗೆ ಬರುತ್ತಿರುವನು. ಒಳ್ಳೇದು, ಅವನ ಬಳಿಗೆ ಹೋಗುವನು.

(ಅನಂತರ ಸಂಭ್ರಾಂತರಾದ ಪರಿಜನರೊಡನೆ ರಾಜನು ಪ್ರವೇಶಿಸುವನು).

ರಾಜಾ— ರಾಜನ ಅರಮನೆಯಲ್ಲಿಯೇ, ಮೊತ್ತಮೊದಲ ಸಾರೆ, ಆ ಶ್ರೇಷ್ಠವಾದ ರತ್ನವನ್ನು ಅಪಹರಿಸಿಕೊಂಡು, ತನ್ನ ಸಾವನ್ನೇ ಒಯುತ್ತಿರುವಂತೆ, ಒಯ್ಯುತ್ತಿರುವ ಆ ಕಳ್ಳಹದ್ದು ಎಲ್ಲಿರುವದು ? ॥ ೧ ॥

ಕಿರಾತ— (ಮಹಾರಾಜನೆ) ಅದೊ ನೋಡು ಆ ಪಕ್ಷಿಯು ಬಂಗಾರದ ಎಳೆಯಲ್ಲಿ ಪೋಣಿಸಿದ ಆ ರತ್ನವನ್ನು ತನ್ನ ಚುಂಚುವಿನಲ್ಲಿ ಹಿಡಿದುಕೊಂಡು ಆ ರತ್ನದಿಂದ ಮುಗಿಲ ಮೇಲೆ ಗೆರೆ ಕೊರೆಯುತ್ತಿರುವದೊ ಏನೋ ಎನ್ನುವಂತೆ ಹಾರಾಡುತ್ತಿರುವದು.

ರಾಜಾ— ನನಗದು ಕಾಣುತ್ತದೆ.

ಜೋತಾಡುತ್ತಿರುವ ಬಂಗಾರದ ಎಳೆಯಲ್ಲಿ ಪೋಣಿಸಿದ ಆ ಮಣಿಯನ್ನು ಹಿಡಿದು ಕೊಂಡು ಆಕಾಶದಲ್ಲಿ ಸುತ್ತಾಡುತ್ತಿರುವ ಈ ಹದ್ದು ಅಲಾತಚಕ್ರ [ಉರಿಯುತ್ತಿರುವ ಸಳಿ]ದ ಗೆರೆಯನ್ನು ಹೋಲುವ (ಕೆಂಪು) ರೇಖೆಗಳ ವರ್ತುಲವನ್ನು ತೆಗೆಯುತ್ತಿರುವದು ॥ ೨ ॥

ಈಗೇನು ಮಾಡಬೇಕು ?

विदूषक – (उपेत्य) अलमत्र घृणया । अपराधी शासनीय । [अल एथ्थ घिणाए । अवराही सासणीओ ।]

राजा – सम्यगाह भवान् । धनुर्धनुस्तावत् । (निष्क्रान्ता धनुर्ग्राहिणी यवनी)

राजा – वयस्य न दृश्यते विहग ।

विदूषक — इतो दक्षिणान्तेनापगत शकुनिहताश । [इदो दक्खिणन्तेण अवगदो सउणिहदासो ।]

राजा – (परिवृत्य अवलोक्य) दृष्ट इदानीम् ।

प्रभापल्लवितेनासौ करोति मणिना खग. ।
णशोकस्तबकेनेव दिङ्मुखस्यावतसकम् ॥ ३ ॥

यवनी — (चापहस्ता प्रविश्य) भर्त एतद्हस्तावापसहित शरासनम् । [भट्टा हथ्थावावमहिद सरासण ।]

राजा — किमिदानी धनुषा । बाणपथमतीतः क्रव्यभोजन । तथाहि

आभाति मणिविशेषो दूरमिदानी पतत्रिणा नीतः ।
नक्तमिव लोहिताङ्ग परुषघनच्छेदसयुक्त ॥ ४ ॥

ವಿದೂಷಕ — (ಮುಂದೆ ಬಂದು) ನಿನ್ನ ದಯೆಯನ್ನು ನಾಕುಮಾಡು ಅಪರಾಧಿಯನ್ನು ಶಿಕ್ಷಿಸಲೇಬೇಕು

ರಾಜಾ — ನೀನು ಹೇಳಿದ್ದು ಸರಿ ನನ್ನ ಧನುಸ್ಸು ಎಲ್ಲಿ ? (ಧನುಸ್ಸನ್ನು ರಕ್ಷಿಸುವ ಯುವನಿಯು [ಧನುಸ್ಸನ್ನು ತರಲು] ಹೋಗುವಳು)

ರಾಜಾ — ಗೆಳೆಯನೆ, ಆ ಹದ್ದು ಕಾಣಿಸುವದಿಲ್ಲವಲ್ಲ !

ವಿದೂಷಕ:— ಆ ದುಷ್ಟ ಪಕ್ಷಿಯು, ಇಲ್ಲಿಂದ ದಕ್ಷಿಣ ದಿಕ್ಕಿನ ಕಡೆಗೆ ಹಾರಿ ಹೋಯಿತು.

ರಾಜಾ — (ತಿರುಗಿನೋಡಿ) ಈಗ ಕಂಡಿತು.

ಈ ಹದ್ದು ಥಳಥಳಿಸುವ ಈ ರತ್ನದಿಂದ ದಿಶಾಂಗನೆಯು ಮುಖಕ್ಕೆ ಅಶೋಕ ಪುಷ್ಪಗಳ ಕಿವಿಯಾಭರಣವನ್ನು ಒದಗಿಸುತ್ತಿರುವಂತೆ ತೋರುವದು. ॥ ೩ ॥

ಯವನೀ — (ಧನುಸ್ಸನ್ನು ಕೈಯಲ್ಲಿ ಹಿಡಿದುಕೊಂಡು ಪ್ರವೇಶಿಸಿ) ಪ್ರಭುವೆ, ಇದೊ ಬಾಣಸಹಿತವಾದ ಧನುಸ್ಸು.

ರಾಜಾ — ಈಗ ಧನುಸ್ಸಿನಿಂದೇನು ಪ್ರಯೋಜನ ? ಆ ರಣಹದ್ದು ಬಾಣಪಥವನ್ನು ಮೀರಿಹೋಯಿತು. ಏಕೆಂದರೆ,

ಆ ಹದ್ದಿನಿಂದ ದೂರ ಒಯ್ಯಲ್ಪಟ್ಟ ಈ ಅಮೌಲ್ಯವಾದ ರತ್ನವು, ಇರುಳಿನಲ್ಲಿ ಘನವಾದ ಕಪ್ಪು ಮೋಡದ ತುಂಡಿನಿಂದ ಕೂಡಿದ ಅಂಗಾರಕ [ಮಂಗಳ] ನಕ್ಷತ್ರದಂತೆ ಕಾಣುವದು. ॥ ೪ ॥

(कञ्चुकिन विलोक्य) लातव्य मद्वचनादुच्यता नागरिक साय निवासवृक्षाश्रयी विचीयता विहगदस्युरिति ।

कञ्चुकी — यदाज्ञापयति देव । (इति निष्कान्त)

विदूषक — उपविशतु भवान्साप्रतम् । क्व गत स रत्नकुम्भीलको भवत शासनान्मोक्ष्यते । [उवविसदु भव स‌दद । कहि गदो सो रअणकुम्भीलओ भवदो सासणादो मुच्चिस्सदि ।]

राजा — (विदूषकेण सहोपविश्य)

रत्नमिति न मम तस्मिन्मणौ प्रियत्व विहगमाक्षिप्ते ।
प्रियया तेनास्मि सखे सगमनीयेन सगमित ॥ ५ ॥

विदूषक — ननु परिगतार्थोऽस्मि कृतो भवता । [ण परिगदत्थोह्मि किदो भवदा ।
(तत प्रविशति सशर मणिमादाय कञ्चुकी)

कञ्चुकी — जयति जयति देव ।

अनेन निर्भिन्नतनु: स वध्यो रोषेण ते मार्गणता गतेन ।
प्राप्यापराधोचितमन्तरिक्षात्समौलिरत्न पतित पतत्री ॥ ६ ॥

(ಕಂಚುಕಿಯನ್ನು ನೋಡಿ) ಲಾತವ್ಯನೆ, ಸಾಯಂಕಾಲದಲ್ಲಿ ತಾನು ವಾಸಿಸುವ ಗಿಡದ ಮೇಲೆ ಹೋಗಿ ಕೂಡುವ ಈ ಕಳ್ಳಹದ್ದನ್ನು ಹುಡುಕತಕ್ಕದ್ದೆಂದು, ನನ್ನವರವಾಗಿ ನಗರಾಧ್ಯಕ್ಷನಿಗೆ ಆಜ್ಞಾಪಿಸು

ಕಂಚುಕೀ — ಮಹಾರಾಜನ ಅಪ್ಪಣೆ (ಎಂದು ಹೋಗುವನು)

ವಿದೂಷಕ — ಮಹಾರಾಜನೆ, ಈಗ ಕುಳಿತುಕೊ ರತ್ನವನ್ನು ಕದ್ದ ಆ ಕಳ್ಳಹದ್ದು ಎಲ್ಲಿ ಹೋದರೂ ನಿನ್ನ ಶಿಕ್ಷೆಯಿಂದ ಪಾರಾಗಲಾರದು

ರಾಜಾ — (ವಿದೂಷಕನೊಡನೆ ಕುಳಿತುಕೊಂಡು)

ಗೆಳೆಯನೆ, ಹದ್ದು ಅಪಹರಿಸಿಕೊಂಡು ಹೋದ ಆ ರತ್ನವನ್ನು ನಾನು ಇಷ್ಟು ಪ್ರೀತಿಸುತ್ತಿರುವದು ಕೇವಲ ಅದೊಂದು ಬೆಲೆ ಬಾಳುವ ರತ್ನವೆಂದಲ್ಲ, ಆದರೆ, ಆ ಸಂಗಮನೀಯ ಮಣಿಯಿಂದಲೇ ನನಗೆ ನನ್ನ ಪ್ರಿಯಳ ಮಿಲನವಾಯಿತು [ಅಂತೆಯೇ, ಅದರ ವಿಷಯವಾಗಿ ನನ್ನದಿಷ್ಟು ಆದರ] ॥ ೫ ॥

ವಿದೂಷಕ — ಈಗಾಗಲೇ ನನಗೀ ಸಂಗತಿಯನ್ನು ತಿಳಿಸಿರುವಿ.

(ಬಳಿಕ ಬಾಣಸಹಿತವಾದ ಮಣಿಯನ್ನು ತೆಗೆದುಕೊಂಡು ಕಂಚುಕಿಯು ಪ್ರವೇಶಿಸುವನು)

ಕಂಚುಕೀ —ಮಹಾರಾಜನಿಗೆ ಜಯವಾಗಲಿ, ಜಯವಾಗಲಿ ಬಾಣದರೂಪವನ್ನು ತಾಳಿದ ನಿನ್ನ ಕಡುಕೋಪದಂತಿರುವ ಈ ಬಾಣದಿಂದ ಗಾಯಗೊಂಡ, ಕೊಲ್ಲಲು ಅರ್ಹವಾದ ಈ ಹದ್ದು ತನ್ನ ಅಪರಾಧಕ್ಕೆ ತಕ್ಕ ದಂಡನೆಯನ್ನು ಪಡೆದು, ಈ ಚೂಡಾರತ್ನದೊಂದಿಗೆ ಕೆಳಗೆ ಬಿದ್ದಿತು. ॥ ೬ ॥

(सर्वे विस्मय रूपयन्ति)

कञ्चुकी – अभिप्रक्षालितोऽय मणि कस्मै प्रदीयताम् ।

राजा – किराति अग्निशुद्धमेनं कृत्वा पेटक प्रवेशय ।

